ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಏಪ್ರಿಲ್ 8 ಬುಧವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 347 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4



ಕೆಪಿಎಸ್ ಮ್ಯಾಗ್ನೆಟ್ ಯೋಜನೆ ರದ್ದಿಗೆ ಆಗ್ರಹಿಸಿ
ಏ.10, ಬೆಂಗಳೂರಲ್ಲಿ ಜನ ಸಮಾವೇಶ

ಮೈಸೂರು,ಏ.7(ಜಿಎ)–ರಾಜ್ಯ ಸರ್ಕಾರದ ಕೆಪಿಎಸ್ ಮ್ಯಾಗ್ನೆಟ್ ಯೋಜನೆ ರದ್ದುಗೊಳಿಸಬೇಕೆಂದು ಆಗ್ರಹಿಸಿ ಏ.10ರಂದು ಬೆಳಗ್ಗೆ 11.30ಕ್ಕೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಎಐಡಿಎಸ್‌ಓ ವತಿಯಿಂದ ಸಾರ್ವಜನಿಕ ಶಿಕ್ಷಣ ಉಳಿಸಿ ಘೋಷಣೆಯೊಡನೆ ಬೃಹತ್ ರಾಜ್ಯ ಮಟ್ಟದ ಜನ ಸಮಾವೇಶ ಆಯೋಜಿಸಲಾಗುತ್ತಿದೆ ಎಂದು ಜಿಲ್ಲಾ ಸಮಿತಿ ಅಧ್ಯಕ್ಷರಾದ ಚಂದ್ರಕಲಾ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಹೆಸರಿನಲ್ಲಿ ಸುಮಾರು 40 ಸಾವಿರ ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿರುವುದರ ವಿರುದ್ಧ ಕಳೆದ 4 ತಿಂಗಳಿಂದ ತಮ್ಮ ಸಂಘಟನೆ ರಾಜ್ಯದಾದ್ಯಂತ ಪ್ರತಿ ಹಳ್ಳಿ ಹಳ್ಳಿಗಳಲ್ಲಿಯೂ ಹೋರಾಟ ನಡೆಸುತ್ತಿದೆ. ಆದರೂ ಸರ್ಕಾರ ನಿರ್ಲಕ್ಷಿಸಿದೆ. ಪ್ರತಿಯೊಂದು ಗ್ರಾಮದಲ್ಲಿಯೂ ಜನರು ತಮ್ಮ ಸರ್ಕಾರಿ ಶಾಲೆ ಮುಚ್ಚಲು ಬಿಡುವುದಿಲ್ಲ ಎಂದು ವಿರೋಧ ವ್ಯಕ್ತಪಡಿಸಿದರೂ ಸರ್ಕಾರ ಯೋಜನೆ ಮುಂದುವರಿಸಲು ಹೊರಟಿರುವುದು ಸರಿಯಲ್ಲ ಎಂದರು.

ಏ.10ರಂದು ಸಮಾವೇಶದಲ್ಲಿ ಹಿರಿಯ ಸಾಹಿತಿ ಡಾ.ಹಂಪ ನಾಗರಾಜಯ್ಯ, ಡಾ.ಕೆ.ಮರುಳಸಿದ್ದಪ್ಪ, ಪ್ರೊ.ಎಸ್.ಜಿ. ಸಿದ್ದರಾಮಯ್ಯ, ಡಾ.ಅಲ್ಲಮ ಪ್ರಭು ಬೆಟ್ಟದೂರು, ರಾಘವೇಂದ್ರ ಕುಷ್ಟಗಿ, ಪ್ರೊ.ಎ. ಮುರಿಗೆಪ್ಪ, ಗುರುಪ್ರಸಾದ್ ಕೆರೆಗೋಡು, ವಿ.ಪಿ.ನಿರಂಜನಾರಾಧ್ಯ, ಪ್ರೊ.ಸಬಿಹಾ ಭೂಮಿಗೌಡ ಮೊದಲಾದವರು ಪಾಲ್ಗೊಳ್ಳಲಿದ್ದಾರೆ. ಮೈಸೂರಿನಿಂದ ಬೀದರ್‌ವರೆಗಿನ ಗ್ರಾಮಸ್ಥರು, ಮಕ್ಕಳ ಪೋಷಕರು, ವಿದ್ಯಾರ್ಥಿಗಳು ಭಾಗಿಯಾಗಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಹೋರಾಟಗಾರ ಉಗ್ರ ನರಸಿಂಹೇಗೌಡ, ಸುಮಾ, ಆಸಿಯಾ ಬೇಗಂ, ಕಾರ್ಮಿಕ ಮುಖಂಡ ಹೆಚ್.ಎಸ್.ಹರೀಶ್ ಉಪಸ್ಥಿತರಿದ್ದರು.

ಶಾಲಾ ಮಟ್ಟದಲ್ಲೇ ಮಕ್ಕಳ ದುಶ್ಚಟಗಳಿಂದ ದೂರವಿರಿಸಲು ಬೇಸಿಗೆ ಶಿಬಿರ ಸಹಕಾರಿ


ಮಕ್ಕಳ ರಂಗ ಬೇಸಿಗೆ ಶಿಬಿರವನ್ನು ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಡೋಲು ಬಾರಿಸಿ ಉದ್ಘಾಟಿಸಿದರು.

ಮೈಸೂರು,ಏ.7(ಎಸ್‌ಪಿಎನ್)– ಶಾಲಾ ಮಟ್ಟದಲ್ಲಿಯೇ ಮಕ್ಕಳನ್ನು ದುಶ್ಚಟಗಳಿಂದ, ಕೆಟ್ಟ ಹವ್ಯಾಸಗಳಿಂದ ದೂರವಿರಿಸುವ ಅರಿವು ಮೂಡಿಸಬೇಕು. ಇದಕ್ಕೆ ಇಂತಹ ಬೇಸಿಗೆ ಶಿಬಿರಗಳು ಸಹಕಾರಿ ಯಾಗಲಿವೆ ಎಂದು ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಅಭಿಪ್ರಾಯಪಟ್ಟರು.

ಮೈಸೂರಿನ ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ನಾಲ್ವಡಿ ಸೋಷಿಯಲ್ ಕಲ್ಚರಲ್ ಆಂಡ್ ಎಜುಕೇಷನಲ್ ಟ್ರಸ್ಟ್ ವತಿಯಿಂದ ಮಕ್ಕಳ ರಂಗ ಬೇಸಿಗೆ ಶಿಬಿರ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದರು

ನಾವೆಲ್ಲರೂ ದ್ವೇಷ ಬಿಟ್ಟು ಮನುಷ್ಯತ್ವಕ್ಕೆ ಹೆಚ್ಚು ಬೆಲೆ ಕೊಡಬೇಕು ಹಾಗೂ ಬದುಕುವ, ಮಾನವೀಯ ಮೌಲ್ಯಗಳಿಗೆ ಹೆಚ್ಚು ಮಾನ್ಯತೆ ದೊರೆಯುವ ಸಮಾಜ ನಮ್ಮದಾಗಬೇಕು. ಮಕ್ಕಳಿಗೆ ಬಾಲ್ಯದಲ್ಲಿಯೇ ಮಾನವೀಯ ಮೌಲ್ಯಗಳನ್ನು ಕಲಿಸಲು ಬೇಸಿಗೆ ಶಿಬಿರಗಳು ಹೆಚ್ಚು ಸಹಕಾರಿಯಾಗುತ್ತದೆ ಎಂದರು.

ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, ಬೇಸಿಗೆ ಶಿಬಿರದ ಮೂಲಕ ಮಕ್ಕಳಿಗೆ ವಿಶೇಷ ತರಬೇತಿಗಳನ್ನು ನೀಡಿ, ಮಕ್ಕಳಲ್ಲಿರುವ ಸೂಕ್ತ ಪ್ರತಿಭೆಯನ್ನು ಹೊರತರುವುದು ಈ ಶಿಬಿರದ ಆಶಯವಾಗಿದೆ. ಮಕ್ಕಳು ಶಿಬಿರದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಉತ್ತಮ ವ್ಯಕ್ತಿತ್ವ ರೂಢಿಸಿಕೊಳ್ಳುವಂತೆ ಕಿವಿಮಾತು ಹೇಳಿದರು. ನಾಲ್ವಡಿ ಟ್ರಸ್ಟ್ ಅಧ್ಯಕ್ಷ ದಿನೇಶ್ ಚಮ್ಮಾಳಿಗೆ, ನಿಖಿಲ್, ಅಶ್ವಥ್ ಕದಂಬ ಮತ್ತಿತರರು ಇದ್ದರು.

ಬಾಬು ಜಗಜೀವನ್ ರಾಂ ಜಯಂತಿ...


ಮೈಸೂರು ಕೇಂದ್ರೀಯ ಬಸ್ ನಿಲ್ದಾಣದಲ್ಲಿ ಡಾ.ಬಾಬು ಜಗಜೀವನ ರಾಂ ಅವರ 119ನೇ ಜಯಂತಿ ಆಚರಿಸಲಾಯಿತು. ಈ ವೇಳೆ ವಿಭಾಗೀಯ ಸಂಚಲನಾಧಿಕಾರಿ ಹೇಮಂತಕುಮಾರ್, ಬಸವರಾಜು, ಸಂಚಾರ ನಿಯಂತ್ರಕ ಚಂದ್ರಶೇಖರ, ಸುರೇಶ, ರವಿಕುಮಾರ್, ತುಳಸಮ್ಮ, ಪೇದೆ ಮಹದೇವಸ್ವಾಮಿ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಕ್ರೆಡಿಟ್ ಕಾರ್ಡ್ ಲಿಮಿಟ್ ಹೆಚ್ಚಳ ಮಾಡುವುದಾಗಿ ಹೇಳಿ ಇದ್ದ 1.7 ಲಕ್ಷ ಹಣವನ್ನೇ ದೋಚಿದರು!

ಮೈಸೂರು, ಏ.7(ಜಿಎ)–ಮಡಿಕೆ ಮಾಡುವ ವ್ಯಕ್ತಿ ಕ್ರೆಡಿಟ್ ಕಾರ್ಡ್ ಲಿಮಿಟ್ ಹೆಚ್ಚಳಕ್ಕೆ ಮುಂದಾಗಿ 1.7 ಲಕ್ಷ ರೂ. ಕಳೆದುಕೊಂಡಿದ್ದಾರೆ.

ಏ.4ರಂದು ಕಿರುಗಾವಲಿನಿಂದ ಮೈಸೂರಿಗೆ ಬಸ್ಸಿನಲ್ಲಿ ಪ್ರಯಾಣಿಸುವಾಗ 1.43ಕ್ಕೆ ಅನಾಮಧೇಯ ನಂಬರ್‌ನಿಂದ ಹಾಯ್ ಎಂದು ಮೆಸೇಜ್ ಬಂದಿದ್ದು, ಅದಕ್ಕೆ ಪತ್ರಿಯಾಗಿ ತಾನು ಹಾಯ್ ಎಂದು ರಿಪ್ಲೇ ಮಾಡಿದ ತಕ್ಷಣ ಮಹಿಳೆಯಿಂದ ವಿಡಿಯೋ ಕಾಲ್ ಬಂದಿದೆ. ನಾನು ಆಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಮ್ಯಾನೇಜರ್, ನಿಮ್ಮ ಕಾರ್ಡ್ ಲಿಮಿಟ್ ಎಷ್ಟು ಎಂದು ಪ್ರಶ್ನಿಸಿದ್ದಾಳೆ. 1.10ಲಕ್ಷ ರೂ. ಇದೆ ಎಂದು ಮಾಹಿತಿ ನೀಡಿದ್ದಾರೆ. ಅದಕ್ಕೆ ಆ ಮಹಿಳೆ ಅದನ್ನು ಎರಡು ಲಕ್ಷಕ್ಕೆ ಹೆಚ್ಚಳ ಮಾಡಿಕೊಡುತ್ತೇನೆಂದು ತಿಳಿಸಿದಾಗ ಆತ ಬೇಡ ಎಂದು ಹಿಂಜರಿದಿದ್ದಾನೆ. ಆದರೆ, ಆಕೆ ಮನವೊಲಿಸಿ ಒಂದು ಲಿಂಕ್ ಕಳುಹಿಸುತ್ತೇನೆ ಅದನ್ನು ಓಕೆ ಎಂದು ಒತ್ತಿ ನಮ್ಮ ಕಾಲ್ ಕಟ್ ಆಗುತ್ತದೆ ಎಂದು ಹೇಳಿ 1.45ಕ್ಕೆ 'ಆಕ್ಸಿಸ್ ಮೈಕಾರ್ಡ್ ಲಾಗಿನ್' ಲಿಂಕ್ ಕಳುಹಿಸಿದ್ದಾರೆ. ಅದನ್ನು ಕ್ಲಿಕ್ ಮಾಡಿದ್ದಾರೆ. ಅದು ಓಪನ್ ಆಗಿಲ್ಲ ನಂತರ 1.49ಕ್ಕೆ ಮತ್ತೊಂದು ಲಿಂಕ್ ಕಳುಹಿಸಿದ್ದು, ಅದನ್ನು ಒತ್ತಿದ್ದಾರೆ. ತಕ್ಷಣವೇ ಕ್ರೆಡಿಟ್ ಕಾರ್ಡ್‌ನಲ್ಲಿದ್ದ 1.7 ಲಕ್ಷ ರೂ. ಕಡಿತವಾಗಿದೆ ಎಂದು ಮೆಸೇಜ್ ಬಂದಿದೆ. ಮೆಸೇಜ್ ಬಂದ ತಕ್ಷಣ ಸದರಿ ನಂಬರ್‌ಗೆ ಕಾಲ್ ಮಾಡಿದರೆ, ಅತ್ತ ಕಟ್ ಮಾಡಿದ್ದಾರೆ. ನಂತರ ರಿಯಲ್‌ಮೀ ಮೊಬೈಲ್ ಟೆಲಿಕಾಮ್ ಕಂಪನಿಗೆ ಕಡಿತವಾಗಿದೆ ಎಂದು ಮೆಸೇಜ್ ಬಂದಿದೆ. ನಂತರ ಬ್ಯಾಂಕಿಗೆ ಹೋಗಿ ವಿಚಾರಿಸಿದಾಗ ಹಣ ಕಡಿತವಾಗಿರುವುದು ಖಚಿತವಾಗಿದೆ. ಈ ಸಂಬಂಧ ಆಲನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ



ಬಲ್ಲಚಂಡ ಕಂಟಿ ಅಯ್ಯಣ್ಣ

ಮೈಸೂರು,ಏ.7–ಮೈಸೂರಿನ ವಿಜಯನಗರ 3ನೇ ಹಂತ, ಬಿ–ಬ್ಲಾಕ್, 23ನೇ ಕ್ರಾಸ್, ಮನೆ ನಂ.121 ನಿವಾಸಿ ಬಲ್ಲಚಂಡ ಕಂಟಿ ಅಯ್ಯಣ್ಣ ಮಂಗಳವಾರ ಬೆಳಗ್ಗೆ ನಿಧನರಾದರು. ಮೂಲತಃ ಕೊಡಗು ಜಿಲ್ಲೆ, ವಿರಾಜಪೇಟೆ ತಾಲೂಕು ಕಡಂಗಮುರೂರು ಗ್ರಾಮದವರಾದ ಇವರು ಪತ್ನಿ ಉಷಾ (ಕೊಲೆರಾ), ಪುತ್ರ ಪವನ್ ಅಪ್ಪಯ್ಯ, ಪುತ್ರಿ ಬಿದ್ದಂಡ ಲಜವಂತಿ ಸೋಮಣ್ಣ ಸೇರಿದಂತೆ ಅಪಾರ ಬಂಧು–ವರ್ಗ, ಸ್ನೇಹಿತರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎನ್.ಜಗದೀಶ್



ನಂಜನಗೂಡಿನ ತಮ್ಮಡಗೇರಿ ನಿವಾಸಿ ಎನ್.ಜಗದೀಶ್ (64) ಮಂಗಳವಾರ ಬೆಳಗಿನ ಜಾವ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ.

ಇವರು ನಂಜನಗೂಡು ಶ್ರೀಕಂಠೇಶ್ವರ ದೇವಸ್ಥಾನದ ಪಕ್ಕದಲ್ಲಿರುವ ಗ್ರಾಮ ದೇವತೆ ಮಾರಮ್ಮನವರ ಅರ್ಚಕರಾಗಿದ್ದರು. ಅಂತ್ಯಕ್ರಿಯೆ ಪರಶುರಾಮ ದೇವಸ್ಥಾನದ ಪಕ್ಕದಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ಕಾರ್ಯನಿರ್ವಾಹಣಾಧಿಕಾರಿ ಕೃಷ್ಣ ಹಾಗೂ ಸಿಬ್ಬಂದಿ ವರ್ಗ ಅಂತಿಮ ದರ್ಶನ ಪಡೆದು, ಕುಟುಂಬಕ್ಕೆ ಸಾಂತ್ವನ ಹೇಳಿದರು.

ನೊಂದು ಬಂದವರೊಂದಿಗೆ ಸಹನೆಯಿಂದ ವರ್ತಿಸಿ

ಸಶಸ್ತ್ರ ಪೊಲೀಸ್ 8ನೇ ತಂಡದ ಪಥ ಸಂಚಲನದಲ್ಲಿ ದಕ್ಷಿಣ ವಲಯ ಐಜಿಪಿ ಡಾ.ಬೋರಲಿಂಗಯ್ಯ ಕಿವಿಮಾತು



ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸಿಎಆರ್ ಕವಾಯತು ಮೈದಾನದಲ್ಲಿ ತಾತ್ಕಾಲಿಕ ಪೊಲೀಸ್ ತರಬೇತಿ ಶಾಲೆಯ ಸಶಸ್ತ್ರ ಪೊಲೀಸ್‌ನ 8ನೇ ತಂಡದ ನಿರ್ಗಮನ ಪಥ ಸಂಚಲನ ನಡೆಸಲಾಯಿತು. ಬಲಚಿತ್ರದಲ್ಲಿ ಸಂಜಯ್ ಮಣೋಬಾಯಿ ಅವರಿಗೆ ದಕ್ಷಿಣ ವಲಯದ ಐಜಿಪಿ ಡಾ.ಎಂ.ಬಿ.ಬೋರಲಿಂಗಯ್ಯ ಆಲ್ ರೌಂಡ್ ಬೆಸ್ಟ್ ಪ್ರಶಸ್ತಿ ಪ್ರದಾನ ಮಾಡಿದರು. ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಎಸ್‌ಪಿ ಮಲ್ಲಿಕಾರ್ಜುನ ಎಸ್.ಬಾಲದಂಡಿ, ಕರ್ನಾಟಕ ಪೊಲೀಸ್ ಅಕಾಡೆಮಿ ಉಪನಿರ್ದೇಶಕ ಎಸ್.ಎಲ್.ಚೆನ್ನಬಸವಣ್ಣ, ಡಿಸಿಪಿ ಡಾ.ಹರ್ಷ ಪ್ರಿಯಂವದಾ, ಸೆಸ್ಕ್ ವಿಜಿಲೆನ್ಸ್ ಎಸ್‌ಪಿ ಸವಿತಾ ಹೂಗಾರ ಇದ್ದಾರೆ.

ರಾಜ್ಯದ 18 ಜಿಲ್ಲೆಗಳ 150 ಆರ್ಮ್ಡ್ ಪೊಲೀಸ್ ಕಾನ್ಸ್‌ಟೇಬಲ್‌ಗಳು ಮೇ 13, 2025ರಿಂದ 10 ತಿಂಗಳ ತರಬೇತಿ ಪಡೆದಿದ್ದಾರೆ. ಇವರಲ್ಲಿ 19 ಎಂಜಿನಿಯರಿಂಗ್ ಪದವೀಧರರು, 6 ಸ್ನಾತಕೋತ್ತರರು, 110 ಪದವೀಧರರು, 14 ಪಿಯುಸಿ ಹಾಗೂ ಬಿಎಸ್‌ಸಿ ನರ್ಸಿಂಗ್ ಪದವೀಧರರು ಸೇರಿದ್ದಾರೆ. 144 ಮಂದಿ ಗ್ರಾಮೀಣ ಪ್ರದೇಶದವರು ಹಾಗೂ 6 ಮಂದಿ ನಗರ ಪ್ರದೇಶದವರು.

ಮೈಸೂರು,ಏ.7(ಜಿಎ)–ಪೊಲೀಸ್ ಸೇವೆಗೆ ಅಗತ್ಯವಾದ ಗುಣಗಳನ್ನು ಬೆಳೆಸಿಕೊಳ್ಳುವಂತೆ ತರಬೇತಿ ಪೂರ್ಣಗೊಳಿಸಿದ ಪೊಲೀಸ್ ಪ್ರಶಿಕ್ಷಣಾರ್ಥಿಗಳಿಗೆ ದಕ್ಷಿಣ ವಲಯದ ಐಜಿಪಿ ಡಾ.ಎಂ.ಬಿ. ಬೋರಲಿಂಗಯ್ಯ ಇಂದಿಲ್ಲಿ ಸಲಹೆ ನೀಡಿದರು.

ಚಾಮುಂಡಿಬೆಟ್ಟದ ತಪ್ಪಲಿನ ಸಿಎಆರ್ ಕವಾಯತು ಮೈದಾನದಲ್ಲಿ ತಾತ್ಕಾಲಿಕ ಪೊಲೀಸ್ ತರಬೇತಿ ಶಾಲೆಯ ಸಶಸ್ತ್ರ ಪೊಲೀಸ್‌ನ 8ನೇ ತಂಡ ನಿರ್ಗಮನ ಪಥ ಸಂಚಲನ ಕಾರ್ಯಕ್ರಮದಲ್ಲಿ ವಂದನೆ ಸ್ವೀಕರಿಸಿ ಮಾತನಾಡಿದ ಅವರು, ಪೊಲೀಸ್ ಠಾಣೆಗೆ ನೊಂದವರೇ ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಾರೆ. ಅವರೊಂದಿಗೆ ಸಹನೆಯಿಂದ ನಡೆದುಕೊಳ್ಳಲು, ದಯೆ ಮತ್ತು ಸಹಾನುಭೂತಿ ಬೆಳೆಸಿಕೊಳ್ಳಿ. ತರಬೇತಿಯಲ್ಲಿ ಕಲಿತ ಶಿಸ್ತನ್ನು ಸೇವೆಯಲ್ಲಿಯೂ ಮುಂದುವರಿಸಿ ಎಂದು ತಿಳಿಸಿದರು.

ಲಕ್ಷಾಂತರ ಅಭ್ಯರ್ಥಿಗಳ ನಡುವೆ ದೈಹಿಕ ಪರೀಕ್ಷೆ ಹಾಗೂ ಲಿಖಿತ ಪರೀಕ್ಷೆಗಳನ್ನು ಎದುರಿಸಿ ನೀವು ಈ ಹಂತಕ್ಕೆ ಬಂದಿದ್ದೀರಿ. ಒಳಾಂಗಣ ತರಬೇತಿಯಿಂದ ಶೈಕ್ಷಣಿಕವಾಗಿ, ಹೊರಾಂಗಣ ತರಬೇತಿಯಿಂದ ದೈಹಿಕವಾಗಿ ಬಲಿಷ್ಠರಾಗಿದ್ದೀರಿ. ಈ ಎರಡನ್ನೂ ಕಾಪಾಡಿಕೊಳ್ಳಿ. ಜೊತೆಗೆ ತಾಂತ್ರಿಕ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಓದುವ ಹವ್ಯಾಸ ಬೆಳೆಸಿಕೊಳ್ಳುವಂತೆ ಸೂಚಿಸಿದ ಅವರು, ತಂತ್ರಜ್ಞಾನಕ್ಕೆ ಹೊಂದಿಕೊಳ್ಳುವವರು ಭವಿಷ್ಯದಲ್ಲಿ ಯಶಸ್ವಿಯಾಗುತ್ತಾರೆ ಎಂದು ಹೇಳಿದರು.

ಪ್ರಶಸ್ತಿ ವಿಜೇತರು: ಸಂಜಯ್ ಮಣೋಬಾಯಿ (ಬೆಂಗಳೂರು ನಗರ) ಆಲ್ ರೌಂಡ್ ಬೆಸ್ಟ್ ಪ್ರಶಸ್ತಿ ಪಡೆದರು. **ಒಳಾಂಗಣ ವಿಭಾಗ:** ಮೊದಲ ಬಹುಮಾನ ಸಂಜಯ್ ಮಣೋಬಾಯಿ (ಬೆಂಗಳೂರು ನಗರ), ಎರಡನೇ ಬಹುಮಾನ ಎಲ್.ಎಂ. ಶಿವರಾಜ (ಬೆಂಗಳೂರು ನಗರ), ಮೂರನೇ ಬಹುಮಾನ ರವಿ (ಕಲಬುರಗಿ) **ಹೊರಾಂಗಣ ವಿಭಾಗ:** ಮೊದಲ ಬಹುಮಾನ ಶಿವರಾಜ ಸಿದ್ದರಾಮ ರೇವತಗಾಂದ (ಬೆಂಗಳೂರು ನಗರ), ಎರಡನೇ ಬಹುಮಾನ ಆಕಾಶ್ ದೇಶಾಯಿ (ಬೆಳಗಾವಿ), ಮೂರನೇ ಬಹುಮಾನ ಜುನೈದ್ ಪಾಶಾ (ಕಲಬುರಗಿ). **ರೈಫಲ್ ಶೂಟಿಂಗ್:** ಮೊದಲ ಬಹುಮಾನ ಎ.ವೈ. ರಾಘವೇಂದ್ರ (ಬೆಂಗಳೂರು ನಗರ), ಎರಡನೇ ಬಹುಮಾನ ಭೀಮರಾವ್ ಕಾಳೇಲಿ (ಬೆಂಗಳೂರು ನಗರ), ಮೂರನೇ ಬಹುಮಾನವನ್ನು ಶಿವರಾಜ ಸಿದ್ದರಾಮ ರೇವತಗಾಂದ ತಮ್ಮದಾಗಿಸಿಕೊಂಡರು.

ಈ ಸಂದರ್ಭದಲ್ಲಿ ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಜಿಲ್ಲಾ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಎಸ್.ಬಾಲದಂಡಿ, ಕರ್ನಾಟಕ ಪೊಲೀಸ್ ಅಕಾಡೆಮಿ ಉಪನಿರ್ದೇಶಕ ಎಸ್.ಎಲ್. ಚೆನ್ನಬಸವಣ್ಣ, ಡಿಸಿಪಿ ಡಾ.ಹರ್ಷ ಪ್ರಿಯಂವದಾ, ಸೆಸ್ಕ್ ವಿಜಿಲೆನ್ಸ್ ಎಸ್‌ಪಿ ಸವಿತಾ ಹೂಗಾರ, ತಾತ್ಕಾಲಿಕ ಪೊಲೀಸ್ ತರಬೇತಿ ಶಾಲೆಯ ಪ್ರಾಂಶುಪಾಲರೂ ಆದ ಡಿಸಿಪಿ ಸಿದ್ದನಗೌಡ ವೈ ಪಾಟೀಲ್ ಇನ್ನಿತರರು ಉಪಸ್ಥಿತರಿದ್ದರು.

ಕೆ.ಉಮಾಶಂಕರ್‌ಗೆ ಹುಟ್ಟುಹಬ್ಬದ ಶುಭಾಶಯ...


ಮಂಗಳವಾರ ಹುಟ್ಟುಹಬ್ಬ ಆಚರಿಸಿಕೊಂಡ ಮೈಸೂರು ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕರು, ಹಿರಿಯ ಸಹಕಾರಿ ಕೆ.ಉಮಾಶಂಕರ್ ಅವರನ್ನು ಪಡುವಾರಹಳ್ಳಿ ಗ್ರಾಮಾಭ್ಯುದಯ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಕಾರ್ಯದರ್ಶಿ ಎಂ.ಭೈರಪ್ಪ, ಸೋಮಣ್ಣ, ರಾಮಣ್ಣ, ಬಿಜೆಪಿ ಮುಖಂಡರಾದ ಎಲ್.ಚೌಡಪ್ಪ, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಎನ್.ಯೋಗಾನಂದ್, ಆರ್.ಸೋಮಣ್ಣ, ಕೆ.ಗಿರೀಶ್, ಕುಂಬಾರಕೊಪ್ಪಲು ಆರ್.ಲೋಕೇಶ್, ಸಿ.ಡಿ.ಕುಮಾರ್, ಚಿಕ್ಕವೆಂಕಟು ಆತ್ಮೀಯವಾಗಿ ಅಭಿನಂದಿಸಿ, ಹುಟ್ಟುಹಬ್ಬದ ಶುಭಾಶಯ ಕೋರಿದರು.

ವಸಂತ ವಿಹಾರ ಬೇಸಿಗೆ ಶಿಬಿರ

ಮೈಸೂರು,ಏ.7–ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ವತಿಯಿಂದ ಏ.13ರಿಂದ 19ರವರೆಗೆ ವಸಂತ ವಿಹಾರ ಬೇಸಿಗೆ ಶಿಬಿರ ಆಯೋಜಿಸಿದೆ. ಶಿಬಿರವು ಬೆಳಗ್ಗೆ 7.45ರಿಂದ ಮಧ್ಯಾಹ್ನ 1ರವರೆಗೆ ನಡೆಯಲಿದೆ. ಶಿಬಿರದಲ್ಲಿ 8, 9, 10ನೇ ತರಗತಿ ಪರೀಕ್ಷೆ ಬರೆದಿರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಬಹುದು. ಮಾಹಿತಿಗೆ ದೂ. 0821–2417444 ಸಂಪರ್ಕಿಸಬಹುದಾಗಿದೆ.

ಏ.10ರಿಂದ ಈಜು ತರಬೇತಿ ಶಿಬಿರ

ಮೈಸೂರು: ಮೈಸೂರಿನ ಕಾಸ್ಮೋಪಾಲಿಟನ್ ಕ್ಲಬ್ ಆವರಣದಲ್ಲಿನ ಈಜುಕೊಳದಲ್ಲಿ ಏ.10ರಿಂದ ಮೇ 27ರವರೆಗೆ ಈಜು ತರಬೇತಿ ಶಿಬಿರ ಆಯೋಜಿಸಲಾಗಿದೆ. ಕ್ಲಬ್ ಸದಸ್ಯರು, ಮಕ್ಕಳು, ಅತಿಥಿ ಪುರುಷರು, ಮಹಿಳೆಯರು, 8 ವರ್ಷ ಮೇಲ್ಪಟ್ಟ ಮಕ್ಕಳು ಭಾಗವಹಿಸಬಹುದು. ಮಾಹಿತಿಗೆ ದೂ. 0821–2423881, 2422355, ಮೊ. 9845974888.

ಲೈಸೆನ್ಸ್ಡ್ ಭೂಮಾಪಕರಿಂದ ನಾಳೆ ಮೈಸೂರಲ್ಲಿ ಪ್ರತಿಭಟನಾ ರ್‍ಯಾಲಿ

ಮೈಸೂರು, ಏ.7(ಜಿಎ)– ಸರ್ಕಾರಿ ಪರವಾನಗಿ ಪಡೆದ ಭೂ ಮಾಪಕರ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಏ.9ರಂದು ಬೆಳಗ್ಗೆ 9.30ಕ್ಕೆ ನಗರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ನೂತನ ಜಿಲ್ಲಾಧಿಕಾರಿ ಕಚೇರಿವರೆಗೆ ಬೃಹತ್ ಪ್ರತಿಭಟನಾ ರ್‍ಯಾಲಿ ಹಮ್ಮಿಕೊಳ್ಳಲಾಗುತ್ತಿದೆ ಎಂದು ರಾಜ್ಯ ಸರ್ಕಾರಿ ಪರವಾನಗಿ ಪಡೆದ ಭೂ ಮಾಪಕರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪವನ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ವಿಭಾಗದ ಸುಮಾರು ಎರಡು ಸಾವಿರ ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಈಗಾಗಲೇ ಬೇಡಿಕೆ ಈಡೇರಿಕೆಗಾಗಿ ಕೆಲಸ ಸ್ಥಗಿತಗೊಳಿಸಿ ಹೋರಾಟ ಮಾಡಲಾಗುತ್ತಿದೆ. ಅದರ ಮುಂದುವರಿದ ಭಾಗವಾಗಿ ಪ್ರತಿಭಟನಾ ರ್‍ಯಾಲಿ ನಡೆಯುತ್ತಿದೆ ಎಂದು ವಿವರಿಸಿದರು.

ಪರವಾನಗಿ ಪಡೆದ ಭೂ ಮಾಪಕರು ಸದ್ಯಕ್ಕೆ ಭೂ ಮಾಪನದ ಒಂದು ಕೆಲಸ ಮುಗಿಸಿದರೆ ಕೇವಲ 1200 ರೂ., ನೀಡಲಾಗುತ್ತಿದೆ. ಒಂದು ವೇಳೆ ವ್ಯಾಜ್ಯ, ವಿವಾದಗಳಿಂದ ಅಡ್ಡಿಯುಂಟಾದಲ್ಲಿ ಕೇವಲ 360 ರೂ. ನೀಡಲಾಗುತ್ತಿದೆ. ತಾವೂ ಸರ್ಕಾರಿ ಭೂ ಮಾಪಕರಂತೆಯೇ ವಿದ್ಯಾಭ್ಯಾಸ ಮಾಡಿ, ತರಬೇತಿ ಪಡೆದು ಅರ್ಹತೆಯುಳ್ಳವರಾಗಿದ್ದೇವೆ. ತಾವು ಸರ್ಕಾರಿ ಭೂಮಾಪಕರಷ್ಟೇ ಕೆಲಸ ಮಾಡಿದರೂ ಸಮಾನ ಕೆಲಸಕ್ಕೆ ಸಮಾನ ವೇತನ ನೀತಿ ಅನುಸರಿಸುತ್ತಿಲ್ಲ. ಹೀಗಾಗಿ ತಮ್ಮ ಸೇವೆ ಖಾಯಂಗೊಳಿಸಬೇಕು, ಈಗ ಹೊಸತಾಗಿ ಸರ್ಕಾರ ನೇಮಕ ಮಾಡಿಕೊಳ್ಳುವುದಕ್ಕೆ ಹೊರಡಿಸಿರುವ ಆದೇಶ ರದ್ದುಪಡಿಸಿ ಮೊದಲು ತಮ್ಮ ಬೇಡಿಕೆ ಈಡೇರಿಸಬೇಕು ಇನ್ನಿತರ ಬೇಡಿಕೆ ಈಡೇರಿಕೆಗಾಗಿ ಒತ್ತಾಯಿಸಿ ರ್‍ಯಾಲಿ ಹಮ್ಮಿಕೊಳ್ಳಲಾಗುತ್ತಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಮಹದೇವೇಗೌಡ, ಎಂ.ಎಸ್. ಪ್ರಕಾಶ್, ಕೆ. ಶಿವಣ್ಣ, ಕೆ.ಎನ್. ಕುಮಾರ್, ವಿಜಯಕುಮಾರ್ ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

8.4.2026 ಬುಧವಾರ, ಮಳೆ ನಕ್ಷತ್ರ: ರೇವತಿ 31.03.2026 ರಿಂದ 13.04.2026
ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ,
ತಿಥಿ: ಷಷ್ಠಿ, ನಕ್ಷತ್ರ: ಮೂಲ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9.30ರಿಂದ ಫೈಲ್ಸ್, ಮೂಲವ್ಯಾಧಿ, ಫಿಸ್ತುಲಾ, ಭಗಂದರ, ನಾಡಿವ್ರಣ, ಫಿಶರ್ ತೊಂದರೆಗಳಿಗೆ ತಪಾಸಣಾ ಮತ್ತು ಸಲಹಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ.

■ **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.

■ **ಸಂತ ಫಿಲೋಮಿನಾ ಕಾಲೇಜು** : ಕನ್ನಡ ವಿಭಾಗದ ಪರಿಮಳದ ಪಯಣ ಕನ್ನಡ ಕಾವ್ಯ ಗಾಯನ ವ್ಯಾಖ್ಯಾನ, ಉದ್ಘಾಟನೆ : ಹಿರಿಯ ರಂಗಕರ್ಮಿ ಪ್ರೊ. ಸಿ.ವಿ. ಶ್ರೀಧರಮೂರ್ತಿ, ಅಧ್ಯಕ್ಷ : ರೆಕ್ಟರ್ ಡಾ. ಲೂರ್ದ್ ಪ್ರಸಾದ್ ಜೋಸೆಫ್, ವಿಶ್ರಾಂತ ಪ್ರಿನ್ಸಿಪಾಲ್ ಪ್ರೊ. ಎಂ. ಕೃಷ್ಣೇಗೌಡ ಅವರಿಂದ ಪರಿಮಳದ ಪಯಣ : ಕಾವ್ಯ–ವ್ಯಾಖ್ಯಾನ ಕುರಿತು ಉಪನ್ಯಾಸ, ಶ್ರೀಮತಿ ಶುಭ ರಾಘವೇಂದ್ರ ಮತ್ತು ತಂಡದವರಿಂದ ಕಾವ್ಯಗಾಯನ, ಉಪಸ್ಥಿತರು: ಪ್ರಿನ್ಸಿಪಾಲ್ ಡಾ.ರವಿ ಜೆ.ಡಿ. ಸಲ್ಡಾನ್ಹಾ, ಆಡಳಿತಾಧಿಕಾರಿ ಫಾ. ಜ್ಞಾನಪ್ರಾಸಂ, ಮುಖ್ಯಸ್ಥ ಡಾ.ಎ.ಟಿ.ಸದೆಬೋಸ್, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಸುಯೋಗ್ ಆಸ್ಪತ್ರೆ** : ಉಚಿತ ಹೃದ್ರೋಗ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10ರಿಂದ.

■ **ಟೆರೇಷಿಯನ್ ಕಾಲೇಜು** : ಭಾರತೀಯ ಜ್ಞಾನ ವ್ಯವಸ್ಥೆ : ಅಂತರರಾಷ್ಟ್ರೀಯ ದೃಷ್ಟಿಕೋನಗಳು ಮತ್ತು ಸಮಕಾಲೀನ ಪ್ರಸ್ತುತತೆ ಕುರಿತು ರಾಷ್ಟ್ರೀಯ ಸಮ್ಮೇಳನ, ಮುಖ್ಯ ಅತಿಥಿಗಳು : ಕರಾಮುವಿವಿ ಕುಲಸಚಿವ ಪ್ರೊ. ಎಸ್.ಕೆ. ನವೀನ್ ಕುಮಾರ್, ಮುಖ್ಯ ಭಾಷಣ : ಮೌಲಾನಾ ಅಜಾದ್ ರಾಷ್ಟ್ರೀಯ ಉರ್ದು ವಿವಿ ನಿರ್ದೇಶಕಿ ಪ್ರೊ. ಸನೀಮ್ ಫಾತಿಮಾ, ಉಪಸ್ಥಿತರು : ಪ್ರಿನ್ಸಿಪಾಲ್ ಡಾ. ಸಿಸ್ಟರ್ ರೋಹಿಣಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ಶಾರದಾ ವಿಲಾಸ ಕಾಲೇಜು** : ಸಂಪ್ರತಿಭೋತ್ಸವ ಮತ್ತು ಪ್ರತಿಭಾ ಪುರಸ್ಕಾರ, ಮುಖ್ಯ ಅತಿಥಿಗಳು : ಕಾಲೇಜು ಶಿಕ್ಷಣ ಇಲಾಖೆ ಪ್ರಾದೇಶಿಕ ಜಂಟಿ ನಿರ್ದೇಶಕರಾದ ಡಾ. ಡಿ.ಎಸ್. ಪ್ರತಿಮಾ, ವಿಶೇಷ ಆಹ್ವಾನಿತರು : ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಬಿ.ಎಂ. ಸುಬ್ರಾಯ, ಗೌರವ ಕಾರ್ಯದರ್ಶಿ ಆರ್. ದಿನೇಶ್, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ದೇವಿಕಾ, ಸ್ಥಳ: ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11ಕ್ಕೆ.

■ **ಒಡನಾಡಿ ಸೇವಾ ಸಂಸ್ಥೆ** : ಜಾಗತಿಕ ಹಾಗೂ ಆಂತರಿಕ ರಾಜಕಾರಣದ ಭೀಬತ್ಸಕಾರಿ ವಿದ್ಯಮಾನಗಳಲ್ಲಿ ತೇಜಸ್ವಿ ಚಿಂತನೆಗಳ ಪ್ರಸ್ತುತತೆ ಕುರಿತು ಸಂವಾದ, ಉಪಸ್ಥಿತರು : ವಿಶ್ರಾಂತ ಕುಲಪತಿ ಡಾ. ಸಬಿಹಾ ಭೂಮಿಗೌಡ, ಸ್ಥಳ: ಒಡನಾಡಿ ಸೇವಾ ಸಂಸ್ಥೆ ಆವರಣ, ಬೆಳಗ್ಗೆ 11.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಅಂಚೆ ದನಿ ಪಾರಿವಾಳದಿಂದ ಡ್ರೋನ್‌ವರೆಗೆ ಅಂಚೆ ಪಯಣ – ಬಾನುಲಿ ಸರಣಿ, ಪ್ರಸ್ತುತಿ–ಡಾ. ಅಮ್ಮ ಸಂದ್ರ ಸುರೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸಿ. ವಿಶ್ವನಾಥ್ ಹಾಗೂ ಎನ್. ಹೇಮಾ, ವ್ಯಾಖ್ಯಾನ–ಕೆ. ಎಲ್.ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಪ್ರಾಯೋಜಿತ ಕಾರ್ಯಕ್ರಮ ಲಿಡ್ಕರ್ ನಂಬಿಕೆ ನಿರಂತರ, ಪ್ರಾಯೋಜಕರು–ಡಾ. ಬಾಬು ಜಗಜೀವನ್ ರಾಮ್ ಚರ್ಮೋದ್ಯಮಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು, 7.45 ಕನ್ನಡ ಚಿತ್ರಗೀತೆಗಳು, 8.30 ಚಿತ್ರಗೀತೆಗಳು, 10.00 ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ–ಉಸ್ತಾದ್ ಬಡೇ ಗುಲಾಮ್ ಅಲಿಖಾನ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಯು.ಪಿ. ರಾಜು–ಮ್ಯಾಂಡೋಲಿನ್ ವಾದನ, 4.00 ಮಹಿಳಾರಂಗ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ–ಡಾ. ಮಾಧವಿ ಭಂಡಾರಿ, 5.00 ಕಟ್ಟೋಣ ಬನ್ನಿ ನಿರ್ಮಾಣ ತಾಂತ್ರಿಕತೆಗಳನ್ನ ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಪ್ರಾಯೋಜಕರು–ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಇಂಡಿಯಾ, ಮೈಸೂರು ಛಾಪ್ಟರ್, ವಿಷಯ– ಗೃಹ ಬಳಕೆ ತ್ಯಾಜ್ಯ ನೀರು ಮತ್ತು ಗಟಾರದ ಕಂದುನೀರಿನ ಶುದ್ಧೀಕರಣ ಮತ್ತು ಕಟ್ಟಡ ನಿರ್ಮಾಣ ಕಾರ್ಯಕ್ಕೆ ಅದರ ಬಳಕೆ ಭಾಗವಹಿಸುತ್ತಾರೆ ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ಪರಿಸರ ಇಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾದ ಡಾ. ಸದಾಶಿವಮೂರ್ತಿ ಮತ್ತು ಬೋಧಕರಾದ ಹೇಮಲತಾ ಪ್ರಭುಸ್ವಾಮಿ. ಪ್ರಸ್ತುತಿ–ಎನ್.ಕೇಶವಮೂರ್ತಿ, 5.30 ಚಿತ್ರಗೀತೆಗಳು, 6.50 ಕೃಷಿರಂಗ–ಹಂದಿ ಸಾಕಾಣಿಕೆ ಈ ಕುರಿತು ಮಂಡ್ಯ ತಾಲ್ಲೂಕು ದುದ್ದ ಹೋಬಳಿ ಹುಲ್ಲೇನಹಳ್ಳಿಯ ಎಚ್. ಆರ್. ನಿತೀಶ್ ಕುಮಾರ್ ಅವರೊಂದಿಗೆ ಸಂದರ್ಶನ ಸಂದರ್ಶಕರು–ಎನ್. ಕೇಶವ ಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಹಂಸಿನಿ ನಾಗೇಂದ್ರ–ಹಾಡುಗಾರಿಕೆ, 8.30 ಹಿಂದಿ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ಜನಪದ ಸಂಗೀತ, 10.30 ಸವಿನೆನಪು

■ **ಎಸ್‌ಡಿಎಂ–ಐಎಂಡಿ** : 31ನೇ ಘಟಿಕೋತ್ಸವ ಸಮಾರಂಭ, ಅಧ್ಯಕ್ಷತೆ : ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ, ಘಟಿಕೋತ್ಸವ ಭಾಷಣ : ಐಎಸ್‌ಬಿ ಹೈದರಾಬಾದ್–ಸೆಂಟರ್ ಆಫ್ ಬ್ಯುಸಿನೆಸ್ ಇನ್ನೋವೇಶನ್ ಹಾಗೂ ಇಂಡಿಯನ್ ಸ್ಕೂಲ್ ಆಫ್ ಬ್ಯುಸಿನೆಸ್ ಎಕ್ಸಿಕ್ಯೂಟಿವ್ ಫೆಲೋ ಪ್ರೋಗ್ರಾಮ್ ಇನ್ ಮ್ಯಾನೇಜ್‌ಮೆಂಟ್‌ನ ಕಾರ್ಯನಿರ್ವಾಹಕ ನಿರ್ದೇಶಕ ಡಾ. ರಾಜೇಂದ್ರ ಶ್ರೀವಾಸ್ತವ್, ಸ್ಥಳ:ಎಸ್‌ಡಿಎಂ–ಐಎಂಡಿ ಆವರಣ, ಮಧ್ಯಾಹ್ನ 3ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟೆಬಲ್ ಟ್ರಸ್ಟ್** : ಹನುಮಂತೋತ್ಸವ, ಸಂಜೆ 6.30ಕ್ಕೆ ರಾಜಬೀದಿಗಳಲ್ಲಿ ಮೆರವಣಿಗೆ, ರಾತ್ರಿ 8 ಗಂಟೆಗೆ ವಿದ್ವಾನ್ ಪುರುಷೋತ್ತಮ ಮತ್ತು ವೃಂದದವರಿಂದ ನಾದಸ್ವರ ವಾದನ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ ಕುಂಚಿಟಿಗರ ಸಂಘ, ಶ್ರೀರಾಮಪೇಟೆ.

■ **ಅರಳಿಕಟ್ಟೆ ಶ್ರೀರಾಮ ಧಾರ್ಮಿಕ ಮತ್ತು ದಾನದತ್ತಿ:** ಶ್ರೀ ಪರಾಭವನಾಮ ಸಂವತ್ಸರ ಶ್ರೀರಾಮ ನವಮಿ ಪ್ರಯುಕ್ತ ಶ್ರೀರಾಮಚಂದ್ರನಿಗೆ ಶಯನೋತ್ಸವ. ಶಿವರಾಂಪೇಟೆಯ ಶ್ರೀ ಹರಿವಾಯು ಭಜನಾ ಮಂಡಳಿಯಿಂದ ಭಜನೆ. ಸ್ಥಳ: ದೇವಸ್ಥಾನದ ಆವರಣ, ಜಯಲಕ್ಷ್ಮಿ ವಿಲಾಸ ರಸ್ತೆ, ಚಾಮರಾಜಪುರಂ, ಸಂಜೆ 6.30ಕ್ಕೆ.

■ **ರೋಟರಿ ಮೈಸೂರು** : ರೋಟರಿ ಮೈಸೂರು ಮಿಡ್‌ಟೌನ್ ಸಿಲಿಕಾನ್ ಪ್ರಶಸ್ತಿ ಪ್ರದಾನ, ಮುಖ್ಯ ಅತಿಥಿಗಳು: ನಟ ಸುನೀಲ್ ಪುರಾಣಿಕ್, ಪ್ರಶಸ್ತಿ ಪುರಸ್ಕೃತರು: ರೇಡಿಯೋ ಜಾಕಿ ಆರ್.ಜೆ. ಸುನೀಲ್, ಛಾಯಾಗ್ರಾಹಕ ಅನೂಪ್ ರಾಗ್, ಸ್ಥಳ: ರೋಟರಿ ಸೆಂಟರ್, ಜೆಎಲ್‌ಬಿ ರಸ್ತೆ, ಸಂಜೆ 6.30ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಏಪ್ರಿಲ್ 8 ಬುಧವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 347 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ನಾಳೆ ದ್ವಿತೀಯ ಪಿಯುಸಿ ಪರೀಕ್ಷೆ–1 ಫಲಿತಾಂಶ

ಬೆಂಗಳೂರು, ಏ.7– ಫೆಬ್ರವರಿ ಮಾರ್ಚ್ ತಿಂಗಳಲ್ಲಿ ನಡೆದಿದ್ದ ದ್ವಿತೀಯ ಪಿಯುಸಿ ಪರೀಕ್ಷೆ–1 ಫಲಿತಾಂಶಕ್ಕೆ ಪರೀಕ್ಷಾ ಮಂಡಳಿ ಅಂತಿಮ ದಿನಾಂಕ ಪ್ರಕಟಿಸಿದೆ.

ಏಪ್ರಿಲ್ 9ರಂದು (ಗುರುವಾರ) ಬೆಳಗ್ಗೆ ಫಲಿತಾಂಶ ಪ್ರಕಟವಾಗಲಿದೆ. ಇಂದು ಫಲಿತಾಂಶ ಪ್ರಕಟವಾಗಬೇಕಿತ್ತು ಕಾರಣವೇ ಇಲ್ಲದೇ ಬೋರ್ಡ್ ಫಲಿತಾಂಶ ಪ್ರಕಟ ಮುಂದೂಡಿಕೆ ಮಾಡಿತ್ತು. ಈ ಬೆನ್ನಲ್ಲೇ ಫಲಿತಾಂಶ ಪ್ರಕಟಿಸಲು ಅಂತಿಮ ದಿನಾಂಕವನ್ನೂ ಬಿಡುಗಡೆ ಮಾಡಿದೆ. ಏಪ್ರಿಲ್ 9ರ ಬೆಳಗ್ಗೆ ಸಚಿವರು ನಡೆಸುವ ಸುದ್ದಿಗೋಷ್ಠಿಯಲ್ಲಿ ಫಲಿತಾಂಶ ಪ್ರಕಟವಾಗಲಿದೆ. ಮಧ್ಯಾಹ್ನದ ನಂತರ ಇಲಾಖೆ ವೆಬ್‌ಸೈಟ್‌ನಲ್ಲಿ ಫಲಿತಾಂಶ ಲಭ್ಯವಾಗಲಿದೆ ಎಂದು ಪರೀಕ್ಷಾ ಮಂಡಳಿ ಮೂಲಗಳು ಮಾಹಿತಿ ನೀಡಿದೆ. ಫೆಬ್ರವರಿ 28ರಿಂದ ಮಾರ್ಚ್ 17ರವರೆಗೂ ಪಿಯುಸಿ ಪರೀಕ್ಷೆ ನಡೆದಿತ್ತು.

ಯತ್ನಾಳ್ ಮರಳಿ ಬಿಜೆಪಿಗೆ!

ಬೆಳಗಾವಿ, ಏ.7– ಬಸನಗೌಡ ಪಾಟೀಲ್ ಯತ್ನಾಳ್ ಕೆಲವೇ ದಿನಗಳಲ್ಲಿ ಮರಳಿ ಬಿಜೆಪಿಗೆ ಬರುತ್ತಾರೆ ಎಂದು ಅಥಣಿಯಲ್ಲಿ ಬಿಜೆಪಿ ಶಾಸಕ ರಮೇಶ್ ಜಾರಕಿಹೊಳಿ ಹೇಳಿದ್ದಾರೆ.

ಬಾಗಲಕೋಟೆಯಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಯತ್ನಾಳ್


ಯತ್ನಾಳ್

ಪ್ರಚಾರ ನಡೆಸಿದ್ದು ಒಳ್ಳೆಯ ಬೆಳವಣಿಗೆ. ಯತ್ನಾಳ್ ಪ್ರಚಾರದಿಂದ ನಮ್ಮ ಅಭ್ಯರ್ಥಿಗೆ ಲಾಭವಾಗಬಹುದು ಎಂದು ಭವಿಷ್ಯ ನುಡಿದರು. ಯತ್ನಾಳ್ ಬಿಜೆಪಿಗೆ ಬಂದರೆ ಒಳ್ಳೆಯದು. ಹಿಂದೂ ಸಂಘಟನೆ ಮತ್ತು ಬಿಜೆಪಿ ಮತ ಕ್ರೋಢೀಕರಣಕ್ಕೆ ಅನುಕೂಲವಾಗುತ್ತದೆ. ಉಪ ಚುನಾವಣೆಯಲ್ಲಿ ನಮ್ಮ ಪಕ್ಷದವರು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿದ್ದು ಗೆಲ್ಲುವ ಆಶಾಭಾವನೆಯನ್ನು ನಾವು ಹೊಂದಿದ್ದೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರು ವಿಮಾನ ನಿಲ್ದಾಣದ ಸುತ್ತ

ಎತ್ತರದ ಕಟ್ಟಡಕ್ಕೆ ನಿರ್ಬಂಧ

ಈ ವ್ಯಾಪ್ತಿ ಯಾವುದೇ ನಿರ್ಮಾಣಕ್ಕೆ ಎನ್‌ಓಸಿ ಪಡೆಯುವುದು ಕಡ್ಡಾಯ

ಮೈಸೂರು, ಏ.7(ಬಿಸಿಟಿ, ಪಿಎಂ)– ಮೈಸೂರು ವಿಮಾನ ನಿಲ್ದಾಣಕ್ಕೆ ಸಂಬಂಧಿಸಿದಂತೆ ವಿಮಾನ ನಿಲ್ದಾಣ ಸುರಕ್ಷಾ ಸಮಿತಿಯು ಇತ್ತೀಚೆಗೆ ನಡೆಸಿದ ಪರಿಶೀಲನೆ ವೇಳೆ ಮಂಡಕಳ್ಳಿ ಗ್ರಾಮದಲ್ಲಿ ಹಲವು ಅನಧಿಕೃತ ನಿರ್ಮಾಣಗಳು ಕಂಡುಬಂದಿವೆ. ಇದನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ ಗಂಭೀರವಾಗಿ ಪರಿಗಣಿಸಿದೆ.

ಈ ವಿಷಯವನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರವು (ಎಎಐ) ಪ್ರಕಟಣೆಯಲ್ಲಿ ತಿಳಿಸಿದ್ದು, ಭಾರತ ಸರ್ಕಾರದ ಗೆಜೆಟ್ ಅಧಿಸೂಚನೆ ಜಿಎಸ್‌ಆರ್ 751 (ಇ) ಪ್ರಕಾರ ವಿಮಾನ ನಿಲ್ದಾಣದ 56 ಕಿ.ಮೀ. ಸುತ್ತಳತೆಯಲ್ಲಿ ಎಲ್ಲಾ ಪ್ರಕಾರದ ನಿರ್ಮಾಣ ಕಾಮಗಾರಿ ಪ್ರಾರಂಭಿಸುವ ಮುನ್ನ ನಿರ್ಮಾಣದ ಎತ್ತರಕ್ಕೆ ಸಂಬಂಧಿಸಿದಂತೆ ನಿರಾಕ್ಷೇಪಣಾ ಪ್ರಮಾಣಪತ್ರ (ಎನ್‌ಓಸಿ) ಪಡೆಯಬೇಕು. ಮೈಸೂರು ವಿಮಾನ ನಿಲ್ದಾಣದಿಂದ ವಿಮಾನಗಳ ಕಾರ್ಯಾಚರಣೆ ಹಾಗೂ ಪ್ರಯಾಣಿಕರ ಸುರಕ್ಷತೆಯ ಹಿತದೃಷ್ಟಿಯಿಂದ ಕೆಲವೊಂದು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯವಾಗಿದೆ.

ಇತ್ತೀಚೆಗೆ ವಿಮಾನ ನಿಲ್ದಾಣ ಸುರಕ್ಷತಾ ಸಮಿತಿ ಪರಿಶೀಲನೆ ವೇಳೆ ರೆಡ್ ಝೋನ್ ವಲಯ (ವಿಮಾನ ಹಾರಾಟಕ್ಕೆ ಸಂಬಂಧಿಸಿದ ಅತ್ಯಂತ ಸೂಕ್ಷ್ಮ ಪ್ರದೇಶ)ದಲ್ಲಿ ಅನಧಿಕೃತ ಕಟ್ಟಡಗಳು ನಿರ್ಮಾಣಗೊಂಡಿರುವುದು ಕಂಡು ಬಂದಿದೆ ಎನ್‌ಓಸಿ ಎಎಸ್ (ನೋ ಅಬ್‌ಜೆಕ್ಷನ್ ಸರ್ಟಿಫಿಕೇಟ್ ಅಪ್ಲಿಕೇಶನ್ ಸಿಸ್ಟಮ್) ಪೋರ್ಟಲ್ ಮೂಲಕ ಪೂರ್ವಾನುಮತಿ ಇಲ್ಲದೇ 56 ಕಿ.ಮೀ. ಸುತ್ತಳತೆಯಲ್ಲಿ ■ 6ನೇ ಪುಟಕ್ಕೆ



ಮೈಸೂರು ವಿಮಾನ ನಿಲ್ದಾಣದ ನಿರ್ಬಂಧಿತ ವಲಯ

ನಿರ್ಬಂಧಿತ ವಲಯದಲ್ಲಿ ಮಂಡಕಳ್ಳಿ, ಕಡಕೊಳ, ಸಿಂಧುವಳ್ಳಿ, ದಡದಳ್ಳಿ, ಬ್ಯಾತಳ್ಳಿ, ಹೊಸಹುಂಡಿ, ಮರಸೆ, ಮಾಕನಹುಂಡಿ, ಶ್ರೀನಗರ, ಗೆಜ್ಜಗಳ್ಳಿ, ಮಾದರಗಳ್ಳಿ, ಗುರೂರು, ಕೂಡನಹಳ್ಳಿ, ಬಂಡಿಪಾಳ್ಯ, ಉತ್ತನಹಳ್ಳಿ, ಹಡಜನ, ಕುಪ್ಪಲೂರು, ಜೆಪಿ ನಗರ ರಮಾಬಾಯಿನಗರದ ಭಾಗಗಳು.

ಕುಕ್ಕರಹಳ್ಳಿ ಕೆರೆ ಬಳಿ ರೈಲ್ವೆ ಅಂಡರ್‌ಪಾಸ್

ಕಾಮಗಾರಿ 15 ದಿನದಲ್ಲಿ ಆರಂಭ

● ನೀಲ ನಕ್ಷೆಯೊಂದಿಗೆ ಸ್ಥಳ ಪರಿಶೀಲಿಸಿದ ಸಂಸದ ಯದುವೀರ್ ● ಪಾರಂಪರಿಕತೆ, ಪರಿಸರ ಕಾಳಜಿಯಡಿ ಕಾಮಗಾರಿ ಶೀಘ್ರ ಪೂರ್ಣಗೊಳಿಸಲು ಸೂಚನೆ

ಮೈಸೂರು, ಏ.7(ವಿವಿಹೆಚ್)– ಮೈಸೂರಿನ ಕುಕ್ಕರಹಳ್ಳಿ ಸಮೀಪದ ರೈಲ್ವೆ ಅಂಡರ್‌ಪಾಸ್ ನಿರ್ಮಾಣ ಕಾಮಗಾರಿ ಮುಂದಿನ 15 ದಿನಗಳಲ್ಲಿ ಆರಂಭವಾಗಲಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳೊಂದಿಗೆ ಕುಕ್ಕರಹಳ್ಳಿ ಕೆರೆ–ಮೈಸೂರು ವಿಶ್ವವಿದ್ಯಾನಿಲಯ ಅಂಡರ್‌ಪಾಸ್ ಕಾಮಗಾರಿ ಸಂಬಂಧ ಮಂಗಳವಾರ ನೀಲನಕ್ಷೆಯೊಂದಿಗೆ ಸ್ಥಳ ಪರಿಶೀಲನೆ ನಡೆಸಿ, ಮಾಹಿತಿ ಪಡೆದುಕೊಂಡರು.

ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, 63 ಕೋಟಿ ರೂ. ಪ್ರಾಜೆಕ್ಟ್ ಇದಾಗಿದೆ. ಮೈಸೂರು ವಿಶ್ವವಿದ್ಯಾಲಯದ ಕ್ರಾಫರ್ಡ್ ಭವನ ಮತ್ತು ಕುಕ್ಕರಹಳ್ಳಿ ಕೆರೆ ನಡುವಿನ ಜಂಕ್ಷನ್‌ನಲ್ಲಿ ರೈಲ್ವೆ ಅಂಡರ್ ಪಾಸ್ ಮುಂದಿನ 15 ದಿನಗಳಲ್ಲಿ ಕಾಮಗಾರಿ ಆರಂಭಿಸಲು ಸೂಚಿಸಲಾಗಿದೆ. ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸಿ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು ಎಂದು ತಿಳಿಸಿದರು. ಈ ಜಾಗದಲ್ಲಿ ಅಂಡರ್ ಪಾಸ್ ಬೇಕೆಂಬ ಕೂಗು ಮೊದಲಿನಿಂದಲೂ ಇತ್ತು. ■ 6ನೇ ಪುಟಕ್ಕೆ



ಸಂಸದ ಯದುವೀರ್ ಒಡೆಯರ್, ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳೊಂದಿಗೆ ಕುಕ್ಕರಹಳ್ಳಿ ಕೆರೆ–ವಿಶ್ವವಿದ್ಯಾನಿಲಯ ಅಂಡರ್‌ಪಾಸ್ ಕಾಮಗಾರಿ ಸಂಬಂಧ ನೀಲನಕ್ಷೆಯೊಂದಿಗೆ ಸ್ಥಳ ಪರಿಶೀಲನೆ ನಡೆಸಿ, ಮಾಹಿತಿ ಪಡೆದುಕೊಂಡರು.

ಪಂಚರಾಜ್ಯ ಚುನಾವಣೆಯ ನಂತರ ಕರ್ನಾಟಕ ಸೇರಿದಂತೆ 17 ರಾಜ್ಯಗಳಲ್ಲಿ ಎಸ್‌ಐಆರ್ ಆರಂಭ

ನವದೆಹಲಿ: ಪಂಚರಾಜ್ಯ ಚುನಾವಣೆಯ ನಂತರ ಚುನಾವಣಾ ಆಯೋಗವು ಮೂರನೇ ಹಾಗೂ ಅಂತಿಮ ಸುತ್ತಿನ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಮುಂದಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೇರಳ, ತಮಿಳುನಾಡು, ಅಸ್ಸಾಂ, ಪಶ್ಚಿಮ ಬಂಗಾಳ ಹಾಗೂ ಪುದುಚೇರಿಯಲ್ಲಿ ಈ ತಿಂಗಳು ಮತದಾನ ನಡೆಯಲಿದ್ದು, ಮೇ 4ರಂದು ಫಲಿತಾಂಶ ಪ್ರಕಟವಾಗಲಿದೆ.

ಏ.29ರಂದು ಪಂಚರಾಜ್ಯ ಚುನಾವಣೆಗಳ ಮತದಾನ ಪೂರ್ಣಗೊಂಡ ನಂತರ ಅಥವಾ ಫಲಿತಾಂಶದ ನಂತರ ಎಸ್‌ಐಆರ್ ಆರಂಭವಾಗಲಿದೆ. ಇದುವರೆಗೂ 10 ರಾಜ್ಯಗಳು ಹಾಗೂ 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ಎಸ್‌ಐಆರ್ ನಡೆದಿದೆ ಎಂದು ಮಾಹಿತಿ ನೀಡಿದ್ದಾರೆ.

ಕರ್ನಾಟಕ, ಆಂಧ್ರಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಮಹಾರಾಷ್ಟ್ರ, ಮಣಿಪುರ, ದೆಹಲಿ, ಒಡಿಶಾ, ಪಂಜಾಬ್, ಸಿಕ್ಕಿಂ, ತ್ರಿಪುರಾ, ತೆಲಂಗಾಣ ಸೇರಿದಂತೆ 17 ರಾಜ್ಯ ಹಾಗೂ 5 ಕೇಂದ್ರಾಡಳಿತ ಪ್ರದೇಶಗಳಲ್ಲಿ ಎಸ್‌ಐಆರ್ ನಡೆಯಲಿದೆ. ದೇಶದಲ್ಲಿ ಒಟ್ಟು 99 ಕೋಟಿ ಮತದಾರರಿದ್ದು, 39 ಕೋಟಿ ಜನರು ಈ ಬಾರಿಯ ಎಸ್‌ಐಆರ್‌ನಲ್ಲಿ ಒಳಗೊಳ್ಳಲಿದ್ದಾರೆ ಎಂದು ಹೇಳಿದ್ದಾರೆ. ತಮಿಳುನಾಡು ಹಾಗೂ ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್‌ಗೆ ಬಾರಿ ವಿರೋಧ ವ್ಯಕ್ತವಾಗಿತ್ತು. ಈ ಕುರಿತು ತಮಿಳುನಾಡು ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಪ್ರತಿಭಟನೆಗಳನ್ನು ನಡೆಸಿದ್ದರು.

ಹಳೇ ಚಾಳಿ ಮುಂದುವರೆಸಿದ ಡ್ರಗ್ಸ್ ಪೆಡ್ಲರ್ ವಿರುದ್ಧ

ವಿಶೇಷ ಕಾಯ್ದೆಯಡಿ ಪ್ರಕರಣ ದಾಖಲು

ಮೈಸೂರು ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಮಾಹಿತಿ



ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಮೊಬೈಲ್ ಫೋನ್ ಕಳೆದುಕೊಂಡವರಿಗೆ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಮೊಬೈಲ್ ಫೋನ್ ಹಿಂತಿರುಗಿಸಿದರು.

ಮೈಸೂರು, ಏ.7(ಬಿಎಲ್‌ಯು)– ಅಪರಾಧ ಕೃತ್ಯಗಳನ್ನು ಎಸಗಿ ಜೈಲಿಗೆ ಹೋಗಿ ಜಾಮೀನಿನ ಮೇಲೆ ಬಂದ ನಂತರ ಮಾದಕ ವಸ್ತು ಮಾರಾಟ ಮಾಡುತ್ತಿದ್ದ ಆರೋಪಿ ವಿರುದ್ಧ ಮೈಸೂರಿನಲ್ಲಿ ಇದೇ ಮೊದಲ ಬಾರಿಗೆ ಅಕ್ರಮ ಮಾದಕ ವಸ್ತು ಚಟುವಟಿಕೆಗಳನ್ನು ನಿಗ್ರಹಿಸುವ ವಿಶೇಷ ಕಠಿಣ ಕಾನೂನು ಪಿಐಟಿ ಎನ್ ಡಿಪಿಎಸ್ ಕಾಯ್ದೆ 1988 ರಡಿ ಪ್ರಕರಣ ದಾಖಲಿಸಿ ಬಂಧಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ತಿಳಿಸಿದರು. ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಮಂಡಿ ಮೊಹಲ್ಲಾದ ಎಂಕೆಡಿಕೆ ರಸ್ತೆ ವಾಸಿ ಗಾಂಜಾ ಪೆಡ್ಲರ್ ■ 6ನೇ ಪುಟಕ್ಕೆ

20 ಲಕ್ಷ ಮೌಲ್ಯದ 220 ಮೊಬೈಲ್ ಪತ್ತೆ

ಕಳೆದು ಹೋದ ಮೊಬೈಲ್ ಫೋನ್‌ಗಳ ಪತ್ತೆಗಾಗಿ ನಡೆಸಿದ ವಿಶೇಷ ಕಾರ್ಯಾಚರಣೆಯಲ್ಲಿ 20 ಲಕ್ಷ ಮೌಲ್ಯದ 220 ಮೊಬೈಲ್ ಫೋನ್‌ಗಳನ್ನು ಪತ್ತೆ ಮಾಡಲಾಗಿದೆ ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ತಿಳಿಸಿದರು.

ಮೊಬೈಲ್ ಕಳೆದುಕೊಂಡವರಿಗೆ ಇಂದು ಹಿಂತಿರುಗಿಸಲಾಗಿದೆ. ಇನ್ನು ಮುಂದೆ ಮೊಬೈಲ್ ಫೋನ್ ಕಳುವಾದರೆ ಸಿಇಐಎಲ್ ಆಪ್‌ನಲ್ಲಿ ಐಎಂಎ ನಂಬರ್ ಬ್ಲಾಕ್ ಮಾಡಬೇಕು. ಅಲ್ಲದೆ ಪೊಲೀಸ್ ಇಲಾಖೆಯ ಇ–ಲಾಸ್ಟ್ ಆಪ್‌ನಲ್ಲಿ ದೂರು ದಾಖಲಿಸಿ ರಸೀದಿ ಪಡೆಯಿರಿ. ಈ ಮೂಲಕ ಮೊಬೈಲ್ ಸಿಮ್‌ಗಳನ್ನು ಬ್ಲಾಕ್ ಮಾಡಬಹುದಾಗಿದೆ ಎಂದು ಮಾಹಿತಿ ನೀಡಿದರು. ಇದರಿಂದ ಯಾರೇ ಮೊಬೈಲ್ ■ 6ನೇ ಪುಟಕ್ಕೆ

ಇರಾನ್ ನಾಗರಿಕತೆಯ ಸರ್ವನಾಶ ಮಾಡ್ತೇವೆ!

ವಾಷಿಂಗ್ಟನ್, ಏ.7– ಅಮೆರಿಕ ಮುಂದಿಟ್ಟಿರುವ ಬೇಡಿಕೆಗಳನ್ನು ನಿಗದಿತ ಗಡುವಿನೊಳಗೆ ಒಪ್ಪದಿದ್ದರೆ ಇರಾನ್



ನಾಗರಿಕತೆಯ ಸರ್ವನಾಶವಾಗಲಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತೊಮ್ಮೆ ಎಚ್ಚರಿಸಿದ್ದಾರೆ.

ತಾನು ನೀಡಿರುವ ಗಡುವಿನ ಒಳಗಾಗಿ ಕದನ ವಿರಾಮ ಒಪ್ಪಂದಕ್ಕೆ ಇರಾನ್ ಸಹಿ ಹಾಕಬೇಕು. ಇಲ್ಲದೇ ಹೋದಲ್ಲಿ ಈ ರಾತ್ರಿಯೇ ಇಡೀ ನಾಗರಿಕತೆಯೇ ಸರ್ವನಾಶವಾಗಲಿದೆ ಎಂದು ಬೆದರಿಕೆ ಹಾಕಿದ್ದಾರೆ.

ರಾತ್ರಿಯೇ ಇಡೀ ನಾಗರಿಕತೆಯ ಸರ್ವನಾಶವಾಗಲಿದೆ. ಮತ್ತೆಂದು ಮರಳುವುದಿಲ್ಲ. ಹಾಗಾಗಬೇಕೆಂದು ನಾನು ಬಯಸುವುದಿಲ್ಲ. ಆದರೆ ಬಹುಶಃ ಅದು ಸಂಭವಿಸಲಿದೆ. ಇರಾನ್‌ನಲ್ಲಿ ಸಂಪೂರ್ಣ ಆಡಳಿತ ಬದಲಾವಣೆಯಾಗಲಿದೆ. ಕ್ರಾಂತಿಕಾರಿಯಾಗಿ ಅದ್ಭುತವಾದದ್ದು ಸಂಭವಿಸಲಿದೆ. ಅಲ್ಲಿ ವಿಭಿನ್ನ, ಬುದ್ಧಿವಂತ ಹಾಗೂ ಕಡಿಮೆ ಮೂಲಭೂತವಾದಿಗಳು ಮೇಲುಗೈ ಸಾಧಿಸಲಿದ್ದಾರೆ. ಯಾರಿಗೆ ಗೊತ್ತು, ಇಂದು ರಾತ್ರಿಯೇ ಸ್ಪಷ್ಟವಾಗಲಿದೆ. ಜಗತ್ತಿನ ಇತಿಹಾಸದ ಅತ್ಯಂತ ಸಂಕೀರ್ಣ ಕ್ಷಣಗಳಲ್ಲಿ ಒಂದಾಗಿದೆ. 47 ವರ್ಷಗಳ ಭ್ರಷ್ಟಾಚಾರ, ಸುಲಿಗೆ, ಸಾವಿಗೆ ಕೊನೆಯಾಗಲಿದೆ. ಇರಾನ್‌ನ ಮಹಾನ್ ಜನರನ್ನು ದೇವರು ಆಶೀರ್ವದಿಸಲಿ ಎಂದು ಸಾಮಾಜಿಕ ಮಾಧ್ಯಮ ಟ್ರುತ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಇರಾನ್ ಮೇಲಿನ ■ 6ನೇ ಪುಟಕ್ಕೆ

ಅತ್ತ ಮೈಸೂರಿನೆಲ್ಲೆಡೆ ನೀರಿನ ಸೋರಿಕೆ! ಇತ್ತ ಶೇ.25ರಷ್ಟು ನೀರಿನ ದರ ಏರಿಕೆ!!

● ಮೈಸೂರಿನಾದ್ಯಂತ ಪ್ರತಿ ನಿತ್ಯವೂ ಲಕ್ಷಾಂತರ ಲೀಟರ್ ನೀರು ವ್ಯರ್ಥವಾಗಿ ಚರಂಡಿ ಪಾಲಾಗುತ್ತಿದೆ

● ಇಷ್ಟೆಲ್ಲಾ ಸೋರಿಕೆ ತಡೆಯದೇ ನೀರಿನ ಕರ ಏರಿಕೆ ಮಾರ್ಗ ಹಿಡಿದ ಪಾಲಿಕೆ ವಿರುದ್ಧ ಜನರ ಆಕ್ರೋಶ

ಮೈಸೂರು, ಏ.7(ಬಿಎಲ್‌ಯು)– ಮೈಸೂರು ನಗರದಾದ್ಯಂತ ತುಕ್ಕು ಹಿಡಿದಿರುವ ಕುಡಿಯುವ ನೀರಿನ ಪೈಪ್ ಲೈನ್, ಹಾನಿಗೊಳಗಾದ ವಾಲ್ವ್, ವಾಣಿ ವಿಲಾಸ ನೀರು ಸರಬರಾಜು ಕಾರ್ಯಾಗಾರದ ಕಳಪೆ ನಿರ್ವಹಣೆಯಿಂದ ಪ್ರತಿದಿನ ಲಕ್ಷಾಂತರ ಲೀಟರ್ ಕುಡಿಯುವ ನೀರು ವ್ಯರ್ಥವಾಗಿ ಚರಂಡಿ ಸೇರುತ್ತಿದೆ. ಇಂತಹ ಹಾನಿ, ಸೋರಿಕೆಯನ್ನು ತಡೆಗಟ್ಟದೆ, ಮಾತೆತ್ತಿದರೆ ನೀರಿನ ದರ ಏರಿಸುವುದೊಂದೇ ಮೈಸೂರು ನಗರ ಪಾಲಿಕೆಯ ಅಧಿಕಾರಿಗಳು ಕಂಡುಕೊಂಡಿರುವ ಸುಲಭ ಮಾರ್ಗ. ಈಗ ಮತ್ತೆ ಶೇ.25ರಷ್ಟು ನೀರಿನ ದರ ಏರಿಕೆ ಮಾಡಲಾಗಿದೆ. ನಗರ ಪಾಲಿಕೆಯ ಅವೈಜ್ಞಾನಿಕ ನಿರ್ಧಾರಕ್ಕೆ ಇದು ಮತ್ತೊಂದು ಸಾಕ್ಷಿಯಾಗಿದೆ.

ಶುದ್ಧ ನೀರು ಆರೋಗ್ಯದ ಸಂಜೀವಿನಿ, ಕುಡಿಯುವ ನೀರು ಜೀವನದ ಮೂಲಾಧಾರ, ಮಿತವಾಗಿ ನೀರು ಬಳಸಿ ಅಮೂಲ್ಯವಾದ ಜಲ ಸಂಪನ್ಮೂಲವನ್ನು ಉಳಿಸಿ, ಜಲವೇ ಜೀವ ಎಂಬೆಲ್ಲಾ ಮೈಸೂರು ನಗರ ಪಾಲಿಕೆ ನೀರಿನ ಮಹತ್ವದ ಬಗ್ಗೆ ಜನರಿಗೆ ತಿಳಿ ಹೇಳುತ್ತದೆ.

ನಗರದ ಹಲವು ಬಡಾವಣೆಗಳಲ್ಲಿ ಸ್ತ್ರೀ ಶಕ್ತಿ ಸಂಘಗಳ ಸದಸ್ಯರ ನೆರವಿನಿಂದ ಕುಡಿಯುವ ನೀರನ್ನು ವ್ಯರ್ಥ ಮಾಡದಂತೆ ಅರಿವು ಮೂಡಿಸುತ್ತಾ ಬಂದಿದೆ. ಈ ಜಾಗೃತಿಗಾಗಿಯೂ ಹಣ ಖರ್ಚು ಮಾಡಲಾಗುತ್ತಿದೆ. ಆದರೆ, ಮೈಸೂರು ನಗರ ಪಾಲಿಕೆಯ ವಾಣಿ ವಿಲಾಸ ನೀರು ಸರಬರಾಜು ಕಾರ್ಯಾಗಾರ ತನ್ನ ಜವಾಬ್ದಾರಿ, ಹೊಣೆಗಾರಿಕೆಯನ್ನೆ ಮರೆತಿದೆ. ನೀರನ್ನು ವ್ಯರ್ಥ ಮಾಡದಿರುವುದು ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯ ಎಂದು ಹೇಳುವ ಅಧಿಕಾರಿಗಳು ಕಂಡ ಕಂಡಲ್ಲಿ ಪೋಲಾಗುತ್ತಿರುವ ನೀರು ಸೋರಿಕೆಯನ್ನು ತಡೆಗಟ್ಟುವಲ್ಲಿ ಸಂಪೂರ್ಣ ವಿಫಲವಾಗಿದೆ.

ವಾಟರ್ ವರ್ಕ್ಸ್ ಅಧಿಕಾರಿಗಳು ಬೇಜವಾಬ್ದಾರಿ ಮೆರೆದಿದ್ದಾರೆ. ಇದಕ್ಕೆ ಮೈಸೂರಿನ ಹಲವೆಡೆ ಪೈಪ್ ಹಾಗೂ ವಾಲ್ವ್‌ಗಳಲ್ಲಿ ಸೋರಿಕೆಯಾಗಿ ಲಕ್ಷಾಂತರ ಲೀಟರ್ ಕುಡಿಯುವ ನೀರು ವ್ಯರ್ಥವಾಗುತ್ತಿರುವುದೇ ಸ್ಪಷ್ಟ ನಿದರ್ಶನವಾಗಿದೆ.


ಭಾರೀ ನೀರು ಸೋರಿಕೆ: ಮೈಸೂರಿನ ಜಯಲಕ್ಷ್ಮಿಪುರಂನ ಸಂಕಲ್ಪ ಟಿಯಾರಾ ಅಪಾರ್ಟ್‌ಮೆಂಟ್ ಪಕ್ಕದ ಪ್ರಿಮಿಯರ್ ಸ್ಟುಡಿಯೋ ಕಾಂಪೌಂಡ್ ಬಳಿ ಹಾದು ಹೋಗಿರುವ ದೊಡ್ಡ ಪೈಪ್‌ನ ವಾಲ್ವ್‌ನಲ್ಲಿ ದಿನದ 24 ಗಂಟೆಯೂ ನೀರು ಸೋರಿಕೆಯಾಗುತ್ತಿದೆ.

ನೀರಿನ ರಭಸಕ್ಕೆ ಚಿಮ್ಮುತ್ತಿರುವ ನೀರನ್ನು ನೋಡಿದಾಗ ಫೌಂಟೇನ್‌ನಂತೆ ಕಾಣುತ್ತಿದೆ. ಪೈಪ್ ಹಾಗೂ ವಾಲ್ವ್ ನಡುವಿನ ಜೋಡಣೆ ಭಾಗದಲ್ಲಿ ನೀರು ಸೋರಿಕೆಯಾಗಿ ಕಳೆದ ಆರು ತಿಂಗಳಿಂದ ಫೌಂಟೇನ್‌ನಂತೆ ಚಿಮ್ಮುತ್ತಿದೆ.

ಲಕ್ಷಾಂತರ ಲೀಟರ್ ನೀರು ಪೋಲು: ಸ್ಥಳೀಯ ನಿವಾಸಿಗಳು ಅಲ್ಲಿ ಪೋಲಾಗುತ್ತಿರುವ ನೀರಿನ ಪ್ರಮಾಣ ಅಳೆಯುವ ಪ್ರಯತ್ನ ಮಾಡಿದ್ದಾರೆ. ಕೇವಲ 15 ಸೆಕೆಂಡ್‌ನಲ್ಲಿ 20 ಲೀಟರ್‌ನ ಬಕೆಟ್ ತುಂಬುತ್ತದೆ. ಅಂದರೆ ■ 6ನೇ ಪುಟಕ್ಕೆ


ಕೂಡಲೇ ರಿಪೇರಿ ಮಾಡಿ ನೀರು ವ್ಯರ್ಥಕ್ಕೆ ಕಡಿವಾಣ

ಮೈಸೂರು ನಗರದಾದ್ಯಂತ ವಾಲ್ವ್ ಆಡಿಟ್ ಮಾಡಿಸಲಾಗುವುದು. ತರುವಾಯ ಯಾವ ಯಾವ ವಾಲ್ವ್‌ಗಳಲ್ಲಿ ನೀರು ಸೋರಿಕೆ ಆಗುತ್ತಿದೆ ಎಂಬುದನ್ನು ಪತ್ತೆ ಮಾಡಿ ಕೂಡಲೇ ರಿಪೇರಿ ಮಾಡಿಸಿ ನೀರು ವ್ಯರ್ಥವಾಗುವುದನ್ನು ತಡೆಗಟ್ಟಲಾಗುವುದು. ಚೆಸ್ಕಾಂನವರು ಟ್ರಾನ್ಸ್‌ಫಾರ್ಮರ್‌ಗಳಿಗೆ ಅಂಡರ್ ಗ್ರೌಂಡ್ ಕೇಬಲ್ ಅಳವಡಿಸುವ ಕಾಮಗಾರಿ ನಡೆಸುತ್ತಿದ್ದಾರೆ. ಹೀಗೆ ಕೇಬಲ್



ಅಳವಡಿಸುವಾಗ ಕುಡಿಯುವ ನೀರಿನ ಪೈಪ್ ಒಡೆದು ಹೋಗುತ್ತಿದೆ. ಇದಲ್ಲದೆ ಹಳ್ಳ ತೆಗೆದು ರಸ್ತೆಗಳನ್ನು ಹಾಳು ಮಾಡಿದ್ದಾರೆ. ಇದರಿಂದ ಒಳ ಚರಂಡಿ ಪೈಪ್‌ಗಳು ಕೂಡ ಒಡೆದು ಹೋಗುತ್ತಿವೆ. ಈ ಹಿನ್ನೆಲೆಯಲ್ಲಿ ಇದನ್ನೆಲ್ಲಾ ರಿಪೇರಿ ಮಾಡುವ ತನಕ ಹೊಸ ಕೇಬಲ್ ಅಳವಡಿಸಬಾರದು ಎಂದು ಚೆಸ್ಕಾಂನವರಿಗೆ ತಾಕೀತು ಮಾಡಲಾಗಿದೆ. ಈಗಾಗಲೇ ಹಾಳಾಗಿರುವ ಪೈಪ್ ರಿಪೇರಿ ಮಾಡದೆ ಹೊಸ ಕೇಬಲ್ ಅಳವಡಿಕೆಗೆ ಅವಕಾಶ ನೀಡದಂತೆ ನಗರ ಪಾಲಿಕೆಯ 9 ವಲಯ ಕಚೇರಿಗಳ ಅಭಿವೃದ್ಧಿ ಅಧಿಕಾರಿ (ಡಿಒ)ಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದೇನೆ.

– ಶೇಕ್ ತನ್ವೀರ್ ಆಸೀಫ್, ಆಯುಕ್ತರು, ಮೈಸೂರು ನಗರ ಪಾಲಿಕೆ.



ಮೈಸೂರಿನ ಜಯಲಕ್ಷ್ಮಿಪುರಂನ ಪ್ರಿಮಿಯರ್ ಸ್ಟುಡಿಯೋ ಕಾಂಪೌಂಡ್ ಪಕ್ಕದಲ್ಲಿ ಹಾನಿಗೊಳಗಾದ ವಾಲ್ವ್‌ನಿಂದ ಫೌಂಟೇನ್‌ನಂತೆ ಚಿಮ್ಮುತ್ತಿರುವ ಕುಡಿಯುವ ನೀರು.

ನಕ್ಕರೆ ಅದೇ ಸ್ವರ್ಗ

ಹುಡುಗ ವಾಂತಿ ಮಾಡಿದ್ರೆ
'ಕುಡಿದು ಬಂದ ಮನೆಹಾಳ್' ಅಂತಾರ !
ಹುಡುಗಿ ವಾಂತಿ ಮಾಡಿದ್ರೆ
'ಯಾರ ಅವ ಮನೆಹಾಳ್' ಅಂತಾರ !!
ಒಟ್ಟು ಯಾರ ವಾಂತಿ ಮಾಡಲಿ
'ಮನೆಹಾಳ್' ಮಾತ್ರ ಹುಡುಗನ !!!

ಮೈಸೂರು ಮಿತ್ರ

ಬುಧವಾರ, ಏಪ್ರಿಲ್ 8, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಜೀವನದಲ್ಲಿ ಖುಷಿಯಾಗಿ ಇರಬೇಕು ಅಂದ್ರೆ
ಯಾರಿಂದಲೂ ಏನನ್ನು ಬಯಸಬಾರದು...

ವೇದ ಸುಳ್ಳಾದರೂ
ಗಾದೆ ಸುಳ್ಳಾಗದು

ಅಳಿಯನ ಕುರುಡು
ಬೆಳಗಾದರೆ ಗೊತ್ತಾಗತ್ತೆ !

ನಿಮ್ಮ ಪತ್ರಗಳು

ಗೌರವ ಡಾಕ್ಟರೇಟ್ ನಿರಾಕರಣೆ; ಮಾಜಿ ಮುಖ್ಯಮಂತ್ರಿಗಳ ನಡೆ ಸ್ವಾಗತಾರ್ಹ

ಮಾನ್ಯರೆ,

ಹಾವೇರಿ ವಿಶ್ವವಿದ್ಯಾಲಯವು ತಮಗೆ ಪ್ರಕಟಿಸಿದ್ದ 'ಗೌರವ ಡಾಕ್ಟರೇಟ್' ಪದವಿಯನ್ನು 'ಸ್ವೀಕರಿಸಲ್ಲ' ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಿರಾಕರಣೆ ಮಾಡಿರುವ ವರದಿ ಓದಿ ನಿಜಕ್ಕೂ ಆಶ್ಚರ್ಯ ವಾಯಿತು. ಹಲವು ರಾಜಕಾರಣಿಗಳು ವಿವಿಯ 'ಗೌಡಾ'ಗಳಿಗೆ ಲಾಬಿ ಮಾಡುವ ಕಾಲದಲ್ಲಿ, ಅವರು ತಮಗೆ ಹಾವೇರಿ ವಿಶ್ವವಿದ್ಯಾಲಯ ನೀಡುತ್ತಿರುವ ಗೌರವ ಪದವಿಯನ್ನು ನಯವಾಗಿ ತಿರಸ್ಕರಿಸಿರುವುದು ರಾಜಕಾರಣಿಗಳಿಗೊಂದು 'ಮಾದರಿಯ ನಡೆ'ಯಾಗಿದೆ. ಇಂದು ನಮ್ಮ ನಾಡಿನ ಸರ್ಕಾರಿ ಸ್ವಾಮ್ಯದ ಬಹುತೇಕ ವಿಶ್ವವಿದ್ಯಾಲಯಗಳು ಹಾಲಿ ಮತ್ತು ಮಾಜಿ ರಾಜಕಾರಣಿಗಳಿಗೆ, ಮಂತ್ರಿ ಮಹೋದಯರಿಗೆ, ಜನಪ್ರಿಯ ಚಲನಚಿತ್ರ ತಾರೆಯರಿಗೆ, ಉದ್ಯಮಿಗಳಿಗೆ ಗೌರವ ಡಾಕ್ಟರೇಟ್ ಪದವಿಗಳನ್ನು ಬೇಕಾಬಿಟ್ಟಿ ನೀಡುತ್ತಿವೆ. ಇವರಲ್ಲಿ ಅರ್ಹರಿ ಗಿಂತ ಅನರ್ಹರ ಪಾಲೇ ಹೆಚ್ಚಿದೆ ಎಂದರೆ ತಪ್ಪಾಗಲಾರದು. ವಿವಿಧ ಕ್ಷೇತ್ರದ ನಿಜವಾದ ಗಣ್ಯ ಸಾಧಕರು ಈ ವಿವಿಗಳ ಕಣ್ಣಿಗೆ ಬೀಳುತ್ತಿಲ್ಲದಿರುವುದು ದುರಂತ. ಒಂದು ವೇಳೆ ಬಿದ್ದರೂ ಅವರನ್ನು ಗುರುತಿಸುವಲ್ಲಿ 'ಜಾಣ ಕುರುಡುತನ' ಪ್ರದರ್ಶಿಸುತ್ತಿವೆ ಸಂಶಯ ಬಾರದಿರದು.

ರಾಜಕಾರಣಿಗಳು, ಚಲನಚಿತ್ರ ತಾರೆಯರು ಮತ್ತು ಉದ್ಯಮಿಗಳು ಸಮಾಜ 'ಸೇವೆ' ಮಾಡಲು ಬಂದವರಲ್ಲ. ಆಳದಲ್ಲಿ 'ಲಾಭ'ದ ದೃಷ್ಟಿಕೋನವನ್ನು ಇಟ್ಟುಕೊಂಡೇ ಕೆಲಸ ಮಾಡುವವರು. ಅಂತಹದ್ದರಲ್ಲಿ ಇವರಿಗೇಕೆ ವಿವಿಗಳು 'ಗೌಡಾ' ನೀಡಬೇಕು? ತಮಗೆ ಅನುಕೂಲಕರವಾದವರನ್ನೇಕೆ ಆಯ್ಕೆ ಮಾಡಬೇಕು? ನಾಡಿನ ಉದ್ದಗಲಕ್ಕೂ ವಿವಿಧ ಕ್ಷೇತ್ರದ ಸಾಧಕರು ಸಾಕಷ್ಟು ಇರುವಾಗ ಎಲ್ಲಾ ವಿವಿಗಳು ರಾಜಕಾರಣಿಗಳ, ತಾರೆಗಳ ಮತ್ತು ಉದ್ಯಮಿಗಳ ಹಿಂದೆ ಬೀಳುವುದೇಕೆ? ಅವರ ಓಲೈಸುವುದೇಕೆ? ಅರ್ಥವಾಗುತ್ತಿಲ್ಲ. 'ಗೌಡಾ'ಗೆ ಆಯ್ಕೆಯಾಗಲು 'ಸಾಧನೆ'ಗಿಂತ ಅಧಿಕಾರ, ಪ್ರಭಾವ, ಶಿಫಾರಸ್ಸು, ಜಾತೀಯತೆ, ವಶೀಲಿಬಾಜಿ, ಪಕ್ಷಗಳ ನಂಟು, ಪಂಥಗಳ ಗುಂಪುಗಾರಿಕೆ, ರಾಜಕೀಯ ವಕ್ತಾರಿಕೆ ಎಲ್ಲವೂ ಬೇಕಾಗಿದೆ. ಗೌರವ ಡಾಕ್ಟರೇಟ್ ನೀಡುವ ಸಂಬಂಧ ರಾಜ್ಯದ ಎಲ್ಲಾ ವಿವಿಗಳಿಗೂ ಅನ್ವಯವಾಗುವಂತೆ ಏಕರೂಪದ ನಿಯಾಮವಳಿ ರೂಪಿಸುವ ದಿಕ್ಕಿನಲ್ಲಿ ಅಗತ್ಯ ಕ್ರಮವಾಗಬೇಕಿದೆ. ಆಗಲಾದರೂ ಅರ್ಹರಿಗೆ 'ಗೌಡಾ ಪದವಿ ಲಭಿಸಬಹುದೇನೋ?

–ಟಿ. ಸತೀಶ್ ಜವರೇಗೌಡ, ಮಂಡ್ಯ

ಉಪಚುನಾವಣೆ: ಆಡಳಿತ ಯಂತ್ರ ಸ್ಥಗಿತ

ಮಾನ್ಯರೆ,

ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಏ.9 ರಂದು ನಡೆಯುತ್ತಿದೆ. ಈ ಎರಡು ವಿಧಾನಸಭಾ ಕ್ಷೇತ್ರ ಗಳಲ್ಲಿ ತಮ್ಮ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಲು ರಾಜ್ಯದ ಮುಖ್ಯಮಂತ್ರಿ ಸಿದ್ದ ರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಬಹುತೇಕ ಮಂತ್ರಿಗಳು ಈ ಕ್ಷೇತ್ರದಲ್ಲಿ ಬೀಡುಬಿಟ್ಟಿದ್ದು, ಆಡಳಿತ ಯಂತ್ರವೇ ಸ್ಥಗಿತಗೊಂಡಿದೆ. ಮಂತ್ರಿಗಳು ಸರ್ಕಾರದ ಸವಲತ್ತುಗಳನ್ನು ಪಡೆದು ಪಕ್ಷದ ಅಭ್ಯರ್ಥಿಗಳ ಪರವಾಗಿ ಪ್ರಚಾರ ಮಾಡುವುದು ಎಷ್ಟರ ಮಟ್ಟಿಗೆ ಸರಿ? ಬೇಕಿದ್ದರೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ, ಚುನಾವಣಾ ಕಾರ್ಯದಲ್ಲಿ ನಿರತರಾಗಲಿ. ಇದು ಒಂದು ರೀತಿಯಲ್ಲಿ ಪ್ರಜಾಪ್ರಭುತ್ವಕ್ಕೆ ಮಾಡಿದ ಮೋಸವಲ್ಲವೇ? ಇದನ್ನು ಚುನಾವಣಾ ಆಯೋಗ ಗಂಭೀರವಾಗಿ ಪರಿಗಣಿಸಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಕಂದಾಯ ಪಾವತಿ ಅವ್ಯವಸ್ಥೆ ಸರಿಪಡಿಸಿ

ಮಾನ್ಯರೆ,

ಪ್ರತಿ ವರ್ಷವೂ ಏಪ್ರಿಲ್, ಮೇ ತಿಂಗಳಲ್ಲಿ ಮನೆ ಕಂದಾಯ ಹಾಗೂ ನೀರಿನ ಕಂದಾಯ ಕಟ್ಟಲು ಈ ಹಿಂದಿನ ವರ್ಷಗಳಲ್ಲಿ ಪುರಸಭೆಯಲ್ಲಿಯೇ ನೇರ ಹಣ ಪಾವತಿಸಿ ರಶೀದಿ ಪಡೆಯುವ ಸೌಲಭ್ಯ ಇತ್ತು. ಆದರೆ ಈಗ ಕಂದಾಯ ಕಟ್ಟಲು ತುಂಬಾ ಶ್ರಮ ಪಡುವ ಪರಿಸ್ಥಿತಿ ಒದಗಿ ಬಂದಿದೆ. ಈಗ ಸದರಿ ಕಚೇರಿಗೆ ಹೋಗಿ ಹಳೆಯ ಕಂದಾಯ ಪಾವತಿಯ ರಶೀದಿ ತೋರಿಸಿದ ನಂತರ ಹೊಸ ಚಲನ್ ಪಡೆಯಬೇಕು. ಇದೊಂದು ರೀತಿ ಪರದಾಟ.

ಆಗ ಬನ್ನಿ, ಈಗ ಬನ್ನಿ... ಎಂದು ಹೇಳುವುದು. ಸದ್ಯ ಚಲನ್ ಸಿಕ್ತು ಅಂತ ಹೋದರೆ ಬ್ಯಾಂಕ್ ನಲ್ಲಿ ಸರತಿ ಸಾಲಲ್ಲಿ ನಿಲ್ಲಬೇಕು.ನಿಂತು ಹಣ ಕಟ್ಟಿದ ನಂತರ ಮತ್ತೆ ಬ್ಯಾಂಕ್ ಚಲನ್ ಪ್ರತಿ ಜೆರಾಕ್ಸ್ ಮಾಡಿಸಿ ಪುನಃ ಕಚೇರಿಗೆ ತಲುಪಿಸಬೇಕು. ಇಂಥ ಅವ್ಯವಸ್ಥೆ ಯಲ್ಲಿ ಕಂದಾಯ ಕಟ್ಟಬೇಕಾಗಿದೆ. ದಯವಿಟ್ಟು ಬದಲಿ ವ್ಯವಸ್ಥೆ ಮಾಡಿ ಆನ್‌ಲೈನ್‌ನಲ್ಲಿ ನೇರ ಪಾವತಿ ಮಾಡುವ ರೀತಿಯಲ್ಲಿ ನಾಗರಿಕರಿಗೆ ತೊಂದರೆಯಾಗದಂತೆ ವ್ಯವಸ್ಥೆಮಾಡಿಕೊಡುವರೆಂದು ಆಶಿಸೋಣವೇ?

–ಮೃತ್ಯುಂಜಯ. ಎ., ಶಾಂತಿ ನಗರ, ಪಾಂಡವಪುರ.

ಕೃತಕ ಬುದ್ಧಿಮತ್ತೆಗೆ ಜೋತು ಬೀಳುವ ಮುನ್ನ ಪರ್ಯಾಲೋಚನೆ ಅಗತ್ಯ

ಮಾನ್ಯರೆ,

ತಂತ್ರಜ್ಞಾನ ದಿಗ್ಗಜ 'ಒರಾಕಲ್' ಭಾರತ ಸೇರಿದಂತೆ ಇನ್ನಿತರ ದೇಶಗಳಲ್ಲಿ ಕೆಲಸ ಮಾಡುತ್ತಿದ್ದ ತನ್ನ 30,000ಕ್ಕೂ ಅಧಿಕ ಉದ್ಯೋಗಿಗಳನ್ನು ಕೇವಲ ಒಂದೇ ಒಂದು ಇ–ಮೇಲ್ ಮೂಲಕ ವಜಾಗೊಳಿಸಿರುವ ವರದಿ ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಅನೇಕ ಐಟಿ–ಬಿಟಿ ಕಂಪನಿಗಳು, ಸಾಫ್ಟ್‌ವೇರ್ ಕಂಪನಿಗಳು ಹಾಗೂ ಇನ್ನಿತರ ಉನ್ನತ ತಂತ್ರಜ್ಞಾನದ ಕಂಪನಿಗಳು 'ಕೃತಕ ಬುದ್ಧಿಮತ್ತೆ' (Artificial Intelligence)ಗೆ ಶರಣಾಗಿರುವುದರಿಂದ ಇಂತಹ ಉದ್ಯೋಗ ಕಡಿತ ಸಾಮಾನ್ಯವಾಗಿದೆ. ಪ್ರಾರಂಭದಲ್ಲಿ ಕೃತಕ ಬುದ್ಧಿಮತ್ತೆಯಿಂದ ಉದ್ಯೋಗಗಳ ಕಡಿತ ಇಲ್ಲ ಎಂಬ ಭರವಸೆಯನ್ನು ಅನೇಕ ದೇಶಗಳು ನೀಡಿ, ಕೃತಕ ಬುದ್ಧಿಮತ್ತೆಗೆ ರತ್ನ ಕಂಬಳಿ ಹಾಸಿದ್ದವು.

ಆದರೆ, ಒರಾಕಲ್ ಕಂಪನಿಯ ನಡೆಯಿಂದ ಈ ಭರವಸೆ ಹುಸಿಯಾಗಿದೆ. ಕೃತಕ ಬುದ್ಧಿಮತ್ತೆಯಿಂದ ಹಲವಾರು ಪ್ರಯೋಜನಗಳು ಇರಬಹುದು. ಆದರೆ, ಉದ್ಯೋಗ ಕಡಿತದಂತಹ ಉಗ್ರ ಕ್ರಮ ಲಕ್ಷಾಂತರ ಉದ್ಯೋಗಿಗಳ ಪಾಲಿಗೆ ಕಂಟಕಪ್ರಾಯವಾಗಿದೆ. ಬಹುತೇಕ ಐಟಿ–ಬಿಟಿ ಕಂಪನಿಗಳ ಉದ್ಯೋಗಿಗಳಿಗೆ ಉದ್ಯೋಗ ಭದ್ರತೆಯೇ ಇಲ್ಲವಾಗಿದೆ. ಕೆಲವು ತಿಂಗಳ ಹಿಂದೆ, ದೇಶದ ರಾಜಧಾನಿ ನವದೆಹಲಿಯಲ್ಲಿ ಕೃತಕ ಬುದ್ಧಿಮತ್ತೆಯ ಶೃಂಗ ಸಮ್ಮೇಳನ ನಡೆಯಿತು. ಈ ಕ್ಷೇತ್ರದಲ್ಲಿ ಲಕ್ಷಾಂತರ ಕೋಟಿ ಹಣವನ್ನು ಹೂಡಲು ನೂರಾರು ದೇಶಗಳು ನಾ ಮುಂದು ತಾ ಮುಂದೆ ಎಂದು ಕೈಕಟ್ಟಿ ನಿಂತದ್ದು ಒಂದು ವಿಪರ್ಯಾಸವೇ ಸರಿ. ಲಕ್ಷಾಂತರ ಉದ್ಯೋಗಗಳನ್ನೇ ನುಂಗುವಂತಹ ಕೃತಕ ಬುದ್ಧಿಮತ್ತೆಗೆ ಜೋತು ಬೀಳುವ ಮುನ್ನ ಸಂಬಂಧಪಟ್ಟ ದೇಶಗಳು ಮತ್ತೊಮ್ಮೆ ಪರ್ಯಾಲೋಚನೆ ನಡೆಸುವುದು ಒಳ್ಳೆಯದು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಅಮೂಲ್ಯ ನೆನಪುಗಳ ಫ್ರೇಂ....

–ಆರ್.ಜಿ.ಸಿಂಗ್
ಕಾರ್ಯದರ್ಶಿ, ರಾಮಸನ್ಸ್ ಕಲಾ ಪ್ರತಿಷ್ಠಾನ



ಮೈಸೂರು ರಾಜ್ಯಾದ್ಯಂತ (ಅರಮನೆ ಆವರಣದ ಹೊರಗೆ) ನಡೆಯುತ್ತಿದ್ದ ಅಧಿಕೃತ ಸಮಾರಂಭಗಳಲ್ಲಿ ಚಿತ್ರೀಕರಿಸಲಾದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಚ್ಚಿನ ಛಾಯಾಚಿತ್ರಗಳಲ್ಲಿ ಮಹಾರಾಜರು ಬಿಳಿ ಷರಾಯಿ, ಆರಾಮದಾಯಕವಾದ ಕ್ಲೋಸ್–ಕಾಲರ್ ಕೋಟ್ ಮತ್ತು ಪೇಟವನ್ನು ಧರಿಸಿರುವುದನ್ನು ಕಾಣಬಹುದು. ಆದಾಗ್ಯೂ, ಅರಮನೆಯೊಳಗಿನ ಆಚರಣೆಗಳು ಮತ್ತು ಕಾರ್ಯಕ್ರಮಗಳಲ್ಲಿ, ಅವರು ಮಿರಿ ಮಿರಿ ಮಿಂಚುವ ರೇಷ್ಮೆ ಧಿರಿಸು, ಆಭರಣಗಳು ಮತ್ತು ಭವ್ಯವಾದ ಪೇಟದಲ್ಲಿ ಕಂಗೊಳಿಸುತ್ತಿದ್ದರು.

1939ರ ಈ ಛಾಯಾಚಿತ್ರವು ಮಹಾರಾಜರ ಹುಟ್ಟುಹಬ್ಬದ ಅದ್ದೂರಿ ಆಚರಣೆಯದ್ದಾಗಿದೆ. ಅವರು ಬೆಳ್ಳಿ ಸಿಂಹಾಸನದಿಂದ ಇಳಿದ ಬಳಿಕ ಅವರನ್ನು ದರ್ಬಾರ್ ಹಾಲ್‌ನಿಂದ ಹೊರಗೆ ಕರೆದೊಯ್ಯಲಾಗುತ್ತಿದೆ. ಅವರನ್ನು ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಮತ್ತು ರಾಜಕುಮಾರ ಜಯಚಾಮರಾಜ ಒಡೆಯರ್ ಹಿಂಬಾಲಿಸುತ್ತಾರೆ; ಅವರ ಹಿಂದೆ ಅಲಂಕಾರಿಕ ಚೌರಿ ಹಿಡಿದ ಇಬ್ಬರು ಪರಿಚಾರಕರು ಇದ್ದಾರೆ. ಅವರು ಮಹಾರಾಜರ ಹಿಂದೆ ನಡೆಯುತ್ತಿದ್ದಂತೆ ಒಪ್ಪವಾದ ಸಮವಸ್ತ್ರದಲ್ಲಿದ್ದ ಮೈಸೂರು ರಾಜ್ಯದ ಅಧಿಕಾರಿಗಳು ಅವರಿಗೆ ವಂದನೆ ಸಲ್ಲಿಸುತ್ತಾರೆ. ನಂತರ, ಮಹಾರಾಜರು, ತಮ್ಮ ಪ್ರಜೆಗಳಿಂದ ಶುಭಾಶಯ ಸ್ವೀಕರಿಸಲು ತಮ್ಮ ಪರಿವಾರದೊಂದಿಗೆ ನಗರದಾದ್ಯಂತ ಸಂಚರಿಸಿದರು. ಆಳುವ ರಾಜನ ಜನ್ಮದಿನದಂದು, ಗಣ್ಯ ನಾಗರಿಕರು, ಪ್ರತಿಷ್ಠಿತ ಅಧಿಕಾರಿಗಳು, ಸಮರ್ಥ ಆಡಳಿತಗಾರರಿಗೆ ವಿವಿಧ ಗೌರವಗಳನ್ನು ರಾಜಲಾಂಛನ ಗಂಡಭೇರುಂಡದಡಿ ನಾಲ್ಕು ಪ್ರತ್ಯೇಕ ದರ್ಜೆಯಲ್ಲಿ ನೀಡಲಾಗುತ್ತಿತ್ತು. (1892ರಲ್ಲಿ ಆರಂಭವಾಯಿತು)



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ನುಡಿಶಕ್ತಿ ಅದ್ಭುತವೊ ಮುದ್ದರಾಮ

ಮಾತು ಮಾನವ ಕುಲಕ್ಕೆ ಪ್ರಕೃತಿ ಕೊಟ್ಟ ವರ. ಕಣ್ಣಿನ ನೋಟದ ಶಕ್ತಿಯಲ್ಲಿ, ಕಿವಿಯ ಶ್ರವಣದ ಸಾಮರ್ಥ್ಯದಲ್ಲಿ, ಮೂಗಿನ ಘ್ರಾಣ ಬಲದಲ್ಲಿ ಮನುಷ್ಯನಿಗಿಂತ ಮೇಲಾಗಿರುವ ಅನೇಕ ಪ್ರಾಣಿಗಳಿವೆ. ಆದರೆ ಅವನ್ನೆಲ್ಲ ತನ್ನ ವಶದಲ್ಲಿ ಮಾನವನು ಇಟ್ಟುಕೊಂಡಿರುವುದಕ್ಕೆ ಮೂಲಕಾರಣ ಅವನ ಮಾತಿನ ವರ. ಅದೊಂದು ಇಲ್ಲದಿದ್ದರೆ ಮನುಷ್ಯ ಮಂಗನಂತೆ ಒಂದು ಪ್ರಾಣಿ ಮಾತ್ರ ಆಗಿರುತ್ತಿದ್ದನಷ್ಟೆ. ದಂಡಿ ಕವಿಯು ಹೇಳುವಂತೆ –

ಇದಮಾಧಂ ತಮಃ ಕೃತ್ಸ್ನಂ ಜಾಯೇತ್ ಭುವನತ್ರಯಮ್ ।
ಯದಿ ಶಬ್ದಾಹ್ವಯಾಂ ಜ್ಯೋತಿ ರಾಸಂಸಾರಂ ನ ದೀಪ್ಯತೇ॥

'ಶಬ್ದವೆಂಬ ಬೆಳಕು ಈ ಜಗತ್ತಿನಲ್ಲಿ ಇಲ್ಲದೆ ಹೋಗಿದ್ದರೆ, ಮೂರು ಲೋಕಗಳೂ ಕತ್ತಲೆಯಿಂದ ತುಂಬಿರುತ್ತಿದ್ದುವು'. ಮಾತೆಂಬ ಜ್ಯೋತಿರ್ಲಿಂಗ ಇಲ್ಲದಿದ್ದರೆ ವೇದ, ಉಪನಿಷತ್ತು, ರಾಮಾಯಣ, ಮಹಾಭಾರತ, ಕಾಳಿದಾಸನ ಕಾವ್ಯಗಳು, ಬೈಬಲ್, ಕುರಾನ್, ಬುದ್ಧನ ವಚನಗಳು ಇತ್ಯಾದಿ ಏನೇನೂ ಪ್ರಪಂಚದಲ್ಲಿ ಇರುತ್ತಿರಲಿಲ್ಲ. ವಿಜ್ಞಾನ, ಗಣಿತ ಮುಂತಾದ ಜ್ಞಾನರಾಶಿ ಶೂನ್ಯವಾಗಿರುತ್ತಿತ್ತು.

ಹೀಗೆ ಮಾನವ ಕುಲದ ವೈಶಿಷ್ಟ್ಯವಾಗಿರುವ ಮಾತನ್ನು ನಾವು ಹೇಗೆ ಬಳಸಿಕೊಳ್ಳುತ್ತಿದ್ದೇವೆ? ಮಾತಿನಿಂದಲೇ ಸ್ವರ್ಗ, ಮಾತಿ ನಿಂದಲೇ ನರಕ. ಚಿಂತಿಸಿ, ಆಲೋಚಿಸಿ, ಪರಾಮರ್ಶಿಸಿ ನುಡಿದ ಒಳ್ಳೆಯ ಮಾತು ಮುತ್ತು. ಅದಿಲ್ಲದೆ ಅವಿವೇಕದಿಂದ ಆಡಿದ ಮಾತು ನಮಗೇ ತರಬಹುದು ಕುತ್ತು. ಇದನ್ನು ಮುದ್ದರಾಮ ಸರಳ ನುಡಿಯಲ್ಲಿ ತಿಳಿಸಿಕೊಡುತ್ತಾನೆ–

ಕಾರ್ಯ ಯಾವುದೆ ಇರಲಿ, ಕಲಿ ಮೊದಲು ಸಹನೆಯನು
ಬಳಸದಿರು ಅಪಶಬ್ದ ತುಟಿಗೆ ಬಂದಂತೆ.
ನುಡಿಯ ನೀ ಅರೆನಿಮಿಷ ತಡೆದರಿದೆ ಅನುಕೂಲ
ಚಿಂತಿಸಿದ ನುಡಿಲೇಸು ಮುದ್ದರಾಮ

ಕಾಳಿದಾಸನಾಗಲಿ, ಕುಮಾರವ್ಯಾಸನಾಗಲಿ, ಷೇಕ್ಸ್‌ಪಿಯರ್ ಆಗಲಿ, ತೋರಿದ್ದನ್ನೆಲ್ಲ ಒದರಲಿಲ್ಲ. ಅವರು ಸಹನೆಯಿಂದ, ತಾಳ್ಮೆಯಿಂದ ಆಲೋಚಿಸಿ ಒಂದೊಂದು ಪದ್ಯವನ್ನೂ ರಚಿಸಿದರು. ಚಿಂತಾಸ್ತಿಮಿತ ಮನಸ್ಕರಾಗಿ ಅವರು ನುಡಿದಿದ್ದರಿಂದಲೇ ಅವರ ಮಾತು ನೂರಾರು ವರ್ಷಗಳಾದರೂ ಸವಕಲಾಗದೆ ಉಳಿದಿದೆ. ತಮಗೆ ಆ ಕ್ಷಣದಲ್ಲಿ ತೋರಿದ್ದನ್ನೆಲ್ಲ ಆಡಿ ಆಮೇಲೆ 'ನನ್ನ ಅಭಿಪ್ರಾಯ ಹಾಗೆ ಇರಲಿಲ್ಲ' ಎಂದು ಏನೇನೋ ವಿವರಿಸುವವರೂ, 'ಸಾರ್ವಜನಿಕವಾಗಿ ಕ್ಷಮೆ ಬೇಡುತ್ತೇನೆ' ಎನ್ನುವವರೂ ಮುದ್ದರಾಮನ ಮಾತನ್ನು ಮನನ ಮಾಡಬೇಕು. ಅಪಶಬ್ದವನ್ನು ಆಡುವುದೇಕೆ, ಆಮೇಲೆ ಪಶ್ಚಾತ್ತಾಪ ಪಡುವುದೇಕೆ? ಅರ್ಧ ನಿಮಿಷ ತಡವಾದರೂ ಚಿಂತೆಯಿಲ್ಲ, ಸುಶಬ್ದವನ್ನು ಬಳಸೋಣ. ಯಾರಿಗೂ ಮುಜುಗರವನ್ನೋ ಅವಮಾನವನ್ನೋ ಉಂಟು ಮಾಡುವ ಶಬ್ದ ನಮ್ಮ ಬಾಯಿಂದ ಹೊರಗೆ ಬರದಿರಲಿ. ಚೆನ್ನಾಗಿ ಚಿಂತಿಸಿ ಆಡಿದ ಮಾತು ಹೇಳಿದವರಿಗೂ ಕೇಳಿದವರಿಗೂ ಲೇಸು. ಒಳ್ಳೆಯ, ಸಂತಸವನ್ನು ತರುವ ಮಾತನ್ನು ಆಡುವ ಅವಕಾಶ ನಮಗಿದೆ. ಯಾವಾಗಲೂ ಎಲ್ಲರ ಹಿತವನ್ನು ತರುವ ಮಾತು ನಮ್ಮ ಲಕ್ಷಣವಾಗಲಿ ಎಂಬುದು ಈ ಪದ್ಯದ ಆಶಯ.

ಮುದ್ದರಾಮ, ಎಂದರೆ ಕವಿ ಕೆ.ಸಿ. ಶಿವಪ್ಪನವರ ಮಾತುಗಳಲ್ಲಿ ಸುಂದರ ರೂಪಕಗಳು ಕಂಗೊಳಿಸುತ್ತವೆ. ಪ್ರಪಂಚವನ್ನು ಸಮುದ್ರವೆಂದೂ ಮಾತನ್ನು ಆ ಸಮುದ್ರದಲ್ಲಿ ತೇಲುವ ನೌಕೆಯೆಂದೂ ಅವರ ಪ್ರತಿಭೆ ರೂಪಿಸಿದೆ. ಕೇಳುಗರ ಕಿವಿ ಅದರ ರೇವುಪಟ್ಟಣ ಅಥವಾ ಬಂದರು. ಆ ಮಾತಿನ ಅರ್ಥ ಆ ನೌಕೆಯಲ್ಲಿರುವ ಸರಕು. ಅದನ್ನೆಲ್ಲ ನಿರೂಪಿಸುವ ಪದ್ಯವನ್ನು ನೋಡೋಣ.

ಈ ಲೋಕ ಕಡಲಿನಲಿ ಮಾತು ಚಲಿಸುವ ನಾವೆ
ಇಳಿಸುವರು ರೇವಿನಲಿ ಚೆಂದನುಡಿ ಸರಕ.
ಕೆಟ್ಟದಿದ್ದರೆ ಸರಕು ಅರಸಿ ಬರುವುದು ಹಿಂದೆ
ಕೆಡಕು ನುಡಿ ತುಂಬದಿರು ಮುದ್ದರಾಮ.

ಇಲ್ಲಿ ಲೋಕಾನುಭವದ ಸಾರವೂ ತುಂಬಿದೆ. ಕವಿಗೆ ಪ್ರತಿಭೆಯೊಂದೇ ಸಾಲದು. ಲೋಕಾನುಭವವೂ ಬೇಕು. ನಮ್ಮ ದೇಶದಿಂದ ಜಗತ್ತಿನ ನಾನಾ ದೇಶಗಳಿಗೆ ವಿವಿಧ ಸರಕುಗಳು ರಫ್ತಾಗುತ್ತವೆ. ಅವುಗಳ ಗುಣಮಟ್ಟ ಉತ್ತಮವಾಗಿದ್ದರೆ ಬೇರೆ ದೇಶದವರು ಸ್ವೀಕರಿಸುತ್ತಾರೆ. ಆದರೆ ಸರಕು ಕಳಪೆ ಗುಣದ್ದಾದರೆ ಅವರು ನಿರ್ದಾಕ್ಷಿಣ್ಯವಾಗಿ ಆ ಸರಕನ್ನು ಹಿಂದಕ್ಕೆ ಕಳುಹಿಸುತ್ತಾರೆ.

ದಾನ ಮಾಡಿದರೂ ಅಷ್ಟೆ. ಕೆಲಸಕ್ಕೆ ಬಾರದ, ಅಪ್ರಯೋಜಕ ವಸ್ತುವನ್ನು ದಾನ ಮಾಡಲು ಹೊರಟರೆ, ಸ್ವೀಕರಿಸಿದವರು ಹಿಂದಿರುಗಿಸುತ್ತಾರೆ. ಅವರ ಮನಸ್ಸಿನಲ್ಲಿ ಅಸಮಾಧಾನವೂ ಉಳಿದುಕೊಳ್ಳುತ್ತದೆ. ಮಾತಿನ ವಿಷಯದಲ್ಲೂ ಇದು ಸತ್ಯ. ಒಳ್ಳೆಯ ಮಾತನ್ನಾಡಿದಾಗ ಅದು ಸ್ವೀಕೃತವಾಗುತ್ತದೆ. ಕೆಟ್ಟ ಮಾತನ್ನಾಡಿದಾಗ ಬಡ್ಡಿಸಹಿತವಾಗಿ ಅದು ಹಿಂದಕ್ಕೆ ಬರುತ್ತದೆ. ಇಂತಹ ಅನೇಕ ಸಂದರ್ಭಗಳನ್ನು ನಾವೂ ನೋಡಿರುತ್ತೇವೆ. ಆದ್ದರಿಂದ ಮಾತಿನಲ್ಲಿ ಕೆಡಕು ನುಡಿಗಳನ್ನು ತುಂಬಬೇಡ ಎಂಬ ಕಿವಿಮಾತನ್ನು ಕವಿ ಮುದ್ದರಾಮ ಎಲ್ಲರಿಗೂ ಹೇಳಿದ್ದಾನೆ.

ಒಂದೇ ಮಾತು ನಮ್ಮ ಬದುಕಿನಲ್ಲಿ ನಾನಾ ರೂಪದಲ್ಲಿ ನೆರವನ್ನು ನೀಡುತ್ತದೆ. ಅದನ್ನು ಬಳಸಿಕೊಳ್ಳುವ ಕೌಶಲ ನಮ್ಮಲ್ಲಿರಬೇಕು ಅಷ್ಟೆ. ಅದು ಹೇಗೆ ನಮಗೆ ಸಹಾಯವಾಗುತ್ತದೆಂಬುದನ್ನು ಮುದ್ದರಾಮ ಹೇಳುತ್ತಾನೆ–

ಅಪರಿಚಿತ ನೆಲೆಯಲ್ಲಿ ಸವಿಮಾತು ಸಂಗಾತಿ;
ನೇಹವರ್ಧನೆಗದುವೆ ನಿಜ ಆಪ್ತಮಿತ್ರ
ಮಾತು ಮಾಯಾದೀಪ, ಮಾತೆ ಕಡು ಅಭಿಶಾಪ
ಉಕ್ತಿಯಲಿ ಶಕ್ತಿಯಿದೆ ಮುದ್ದರಾಮ.

ಎಷ್ಟೋ ಸಂದರ್ಭಗಳಲ್ಲಿ ಸಂಪೂರ್ಣ ಅಪರಿಚಿತರ ಮಧ್ಯದಲ್ಲಿ ನಾವು ಇರಬೇಕಾಗುತ್ತದೆ. ರೈಲು ಪ್ರಯಾಣದಲ್ಲಿ, ವಿದೇಶದಲ್ಲಿ ಕಾಲವನ್ನು ಅಪರಿಚಿತರ ಮಧ್ಯೆ ಕಳೆಯಬೇಕಾಗುತ್ತದೆ. ಆಗ ನಾವು ಆಡುವ ಸವಿ ಮಾತು, ಸಮಯೋಚಿತವಾಗಿ ಉದಾಹರಿಸುವ ಗಾದೆ ಅಥವಾ ಶ್ಲೋಕ ಅಪರಿಚಿತರನ್ನು ಪರಿಚಿತರನ್ನಾಗಿ ಮಾಡಿಬಿಡುತ್ತದೆ. ನೇಹ ಎಂದರೆ ಸ್ನೇಹ, ಮೈತ್ರಿ. ಅದರ ವರ್ಧನೆಯಲ್ಲಿ ಮಾತು ಆಪ್ತಮಿತ್ರ. ಮಾಯಾದೀಪ ಎಂದರೆ ಕಥೆಯಲ್ಲಿ ನಾವು ಕೇಳಿದ್ದ ಅಲ್ಲಾಉದ್ದೀನನ ಅದ್ಭುತ ದೀಪ. ಅದು ಏನನ್ನು ಬೇಕಾದರೂ ತಂದುಕೊಡಬಲ್ಲುದು. ಇದೆಲ್ಲ ಒಳ್ಳೆಯ ಮಾತಿನ ಬಗೆಗೆ ಹೇಳಿದ ನುಡಿ. ದಂಡಿ ಹೇಳುತ್ತಾನೆ–

ಗೌರ್ಗೌಃ! ಕಾಮದುಘಾ ಲೋಕೇ ಸುಪ್ರಯುಕ್ತೋಚ್ಯತೇ ಬುಧೈಃ

ಸರಿಯಾಗಿ ಉಪಯೋಗಿಸಿದ ಮಾತು ಪ್ರಪಂಚದಲ್ಲಿರುವ ಕಾಮಧೇನು ಎಂದು ಅವನ ಮಾತಿನ ಅರ್ಥ. ತಪ್ಪಾಗಿ ಆಡಿದ ಮಾತು ಸ್ನೇಹವನ್ನು ಅಳಿಸಿ ಹಾಕಿ ದ್ವೇಷವನ್ನು ಹುಟ್ಟಿಸಿ ಕಡು ಅಭಿಶಾಪವೂ ಆಗಬಹುದು. ಏಕೆಂದರೆ ಉಕ್ತಿಯಲ್ಲಿ ಶಕ್ತಿಯಿದೆ. ಆ ಶಕ್ತಿ ಸದುಪಯೋಗವನ್ನು ಕಂಡಾಗ ವರ, ದುರುಪಯೋಗವಾದಾಗ ಶಾಪ. ಸಂಸ್ಕೃತದಲ್ಲಿ ಒಂದು ಸುಭಾಷಿತವಿದೆ –

ಪ್ರಿಯವಾಕ್ಯಪ್ರದಾನೇನ ಸರ್ವೇ ತುಷ್ಯಂತಿ ಜಂತವಃ।
ತಸ್ಮಾತ್ ತದೇವ ವಕ್ತವ್ಯಂ ವಚನೇ ಕಾ ದರಿದ್ರತಾ॥

ಪ್ರಿಯವಾದ ಮಾತುಗಳನ್ನು ಕೇಳಿದ ಎಲ್ಲರೂ ಸಂತೋಷಪಡುತ್ತಾರೆ. ಆದ್ದರಿಂದ ಒಳ್ಳೆಯ, ಪ್ರಿಯವಾಗುವ, ಹಿತವಾದ ನುಡಿಗಳನ್ನೇ ಆಡಬೇಕು. ಮಾತಿನಲ್ಲೂ ದಾರಿದ್ರ್ಯ ಏತಕ್ಕೆ ಎಂದು ಸುಭಾಷಿತದ ಭಾವಾರ್ಥ. ಇದನ್ನು ಮುದ್ದರಾಮನ ಚೆನ್ನುಡಿಯಲ್ಲಿ ಕೇಳೋಣ.

ಎನಿತೆ ಉರಿಬಿಸಲಿರಲಿ ಬೀಸದೇ ತಂಗಾಳಿ
ಮೆದು ಮಾತನಾಡಲಿಕೆ ಜಿಪುಣತನವೇಕೆ?
ಯಾರು ಮಾನ್ಯರೊ ಇಲ್ಲಿ ಅವರ ನುಡಿ ನವನೀತ
ಮಾತು ಮಂಗಳವಿರಲಿ ಮುದ್ದರಾಮ.

ಪ್ರಕೃತಿಯಲ್ಲಿ ಬಿಸಿಲಿನ ತಾಪವನ್ನು ತಗ್ಗಿಸಲು ತಂಪಾದ ಗಾಳಿಯನ್ನು ಬೀಸುವ ವ್ಯವಸ್ಥೆಯಿದೆ. ಹಾಗೆ ಜೀವನದ ಸಂತಾಪವನ್ನು ಕಡಿಮೆ ಮಾಡಲು ಮೃದುವಾದ ಮಾತಿನ ತಂಗಾಳಿ ಬೀಸುವಂತೆ ಮಾಡಬೇಕು. ಅದನ್ನು ಮಾಡಲು ಎಲ್ಲರಿಗೂ ಶಕ್ತಿಯಿದೆ. ಆ ಬಗ್ಗೆ ಯಾರೂ ಜಿಪುಣತನ ಮಾಡಬಾರದು. ಮಾನ್ಯರೆಲ್ಲರೂ ನವನೀತದಂತೆ, ಬೆಣ್ಣೆಯಂತೆ ಮೃದುವಾದ ನುಡಿಯನ್ನು ಆಡುತ್ತಾರೆ. ಆದ್ದರಿಂದ ಒರಟಾದ, ಕಠಿಣವಾದ, ಕಠೋರವಾದ ಮಾತು ಬೇಡ. ಮಾತು ಸದಾ ಮಂಗಳದಾಯಕವಾಗಿರಲಿ ಎಂದು ಮುದ್ದರಾಮನ ಆಶಯ.

ಮುದ್ದರಾಮನು ಮಂಕುತಿಮ್ಮನನ್ನು ಅನುಸರಿಸಿದವನು. ಅವನನ್ನು ಸ್ಮರಿಸುವವನು ಉದಾಹರಣೆ–

ಸೋಲಿನಲಿ ಮುಗ್ಗರಿಸಿ ಎದೆ ಸೋ ಹೊತ್ತಿನಲಿ
ದಾರಿದೀವಿಗೆ ನಮಗೆ ತಿಮ್ಮನೊಂದು ನುಡಿ
ಅದು ಸೂಕ್ತಿ ರೂಪದಲಿ ವ್ಯಕ್ತಿ ಬಾಳಿಗೆ ಭಾಷ್ಯ
ನುಡಿಶಕ್ತಿ ಅದ್ಭುತವೊ ! ಮುದ್ದರಾಮ.

ಬದುಕಿನಲ್ಲಿ ಎಂದೂ ಸೋಲದವರು ಇಲ್ಲವೇ ಇಲ್ಲ. ಹಾಗೆ ನಾವೂ ಸೋಲಿನಲ್ಲಿ ಮುಗ್ಗರಿಸುತ್ತೇವೆ. ಅಂತಹ ಕ್ಷಣಗಳಲ್ಲಿ ಮಂಕು ತಿಮ್ಮನ ಒಂದು ನುಡಿ ದಾರಿದೀಪವಾಗಿರುತ್ತದೆ, ಕರಾವಲಂಬನ ವಾಗಿ ನಮ್ಮನ್ನು ಮೇಲೆತ್ತುತ್ತದೆ. ಮಂಕುತಿಮ್ಮನು ಹೇಳಿಲ್ಲದ ಸೂಕ್ತಿಯಿಲ್ಲ. ಅದರ ಒಂದೊಂದು ಪದ್ಯವೂ ಮನುಷ್ಯನ ಬಾಳಿಗೆ ಬರೆದ ಭಾಷ್ಯ. ಅದರ ಪ್ರಭಾವ ಅನಂತ. ಅದರ ನುಡಿಶಕ್ತಿ ಅದ್ಭುತ ಎನ್ನುತ್ತಾನೆ ಮುದ್ದರಾಮ.

ಒಬ್ಬರಿಗೆ ಮಂಕುತಿಮ್ಮನ ಕಗ್ಗ, ಇನ್ನೊಬ್ಬರಿಗೆ ತಿರುಕ್ಕುರುಳ್, ಮತ್ತೊಬ್ಬರಿಗೆ ವೇಮನ ಪದ್ಯಗಳು, ಮಗದೊಬ್ಬರಿಗೆ ಭಗವದ್ಗೀತೆ, ಬಾಳಿನ ದಾರಿಯನ್ನು ತೋರಿಸುವ ಶಾಶ್ವತ ದೀಪಗಳು. ಇವುಗಳೆಲ್ಲರ ಸಾರವನ್ನು ಹೀರಿಕೊಂಡು ರಚಿತವಾಗಿರುವ ಮುದ್ದರಾಮನ ಸಾವಿರಾರು ಮುಕ್ತಕಗಳು ಕನ್ನಡಿಗರಿಗೆ ಸಿಕ್ಕಿರುವ ಅಮೃತ. ಇವನ್ನೆಲ್ಲ ನೋಡಿದಾಗ ಎಲ್ಲರ ಬಾಯಿಂದ ಬರುವ ಉದ್ಗಾರ 'ನುಡಿ ಶಕ್ತಿ ಅದ್ಭುತವೋ ಮುದ್ದರಾಮ!

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಸೌದೆ ಒಲೆ ಅಡುಗೆ ಈಗ ಅನಿವಾರ್ಯವಾಯ್ತು...!

ಹೋಟೆಲ್‌ನವರು ಜೀವನ ಸಾಗಿಸಲು ಅನ್ಯ ದಾರಿಯೇ ಇಲ್ಲ ಎಂಬ ನಿರ್ಧಾರಕ್ಕೆ ಬಂದಂತಿದೆ




ಎಲ್‌ಪಿಜಿ ವಾಣಿಜ್ಯ ಸಿಲಿಂಡರ್ ವ್ಯತ್ಯಯದಿಂದಾಗಿ ಮೈಸೂರಿನ ಕೆಲ ಹೋಟೆಲ್ ವ್ಯಾಪಾರಿಗಳು ರಸ್ತೆ ಬದಿಯಲ್ಲೇ ಸೌದೆ ಒಲೆಯಲ್ಲಿ ಅಡುಗೆ ಮಾಡುವುದನ್ನು ಕಾಣಬಹುದು.

ಮೈಸೂರು, ಏ.7(ಎಂಕೆ)– ಎಲ್‌ಪಿಜಿ ವಾಣಿಜ್ಯ ಸಿಲಿಂಡರ್ ವ್ಯತ್ಯಯದಿಂದಾಗಿ ಮೈಸೂರಿನ ಕೆಲ ಹೋಟೆಲ್ ವ್ಯಾಪಾರಿಗಳು ರಸ್ತೆ ಬದಿಯಲ್ಲೇ ಸೌದೆ ಒಲೆಯಲ್ಲಿ ಅಡುಗೆ ಮಾಡುವ ಪರಿಸ್ಥಿತಿ ಬಂದಿದೆ.

ಮಧ್ಯ ಪ್ರಾಚ್ಯ ಯುದ್ಧದಿಂದಾಗಿ ಎಲ್‌ಪಿಜಿ ಸಿಲಿಂಡರ್ ಪೂರೈಕೆಯಲ್ಲಾಗಿರುವ ಕೊರತೆಯಿಂದ ಹೋಟೆಲ್ ಉದ್ಯಮ ದಿನೇ ದಿನೇ ಕುಸಿಯುತ್ತಿದ್ದು, ಸಣ್ಣ–ಪುಟ್ಟ ಹೋಟೆಲ್ ನಡೆಸುವ ವ್ಯಾಪಾರಿಗಳ ಪರಿಸ್ಥಿತಿ ಮತ್ತಷ್ಟು ಗಂಭೀರವಾಗಿದೆ. ಸಿಲಿಂಡರ್ ಸಿಗದೆ ರಸ್ತೆ ಬದಿಯಲ್ಲಿ ಸೌದೆ ಒಲೆ ಹಾಕಿಕೊಂಡು ಅಡುಗೆ ತಯಾರಿಸುವ ಸ್ಥಿತಿಗೆ ತಲುಪಿದ್ದಾರೆ.

ಮೈಸೂರಿನ ದೊಡ್ಡ ದೊಡ್ಡ ಹೋಟೆಲ್‌ಗಳಲ್ಲಿ ದುಪ್ಪಟ್ಟು ಹಣಕೊಟ್ಟು ಸಿಲಿಂಡರ್ ಖರೀದಿಸಿ ಪರಿಸ್ಥಿತಿಯನ್ನು ಹೇಗೋ ಕಷ್ಟದಲ್ಲಿ ನಿಭಾಯಿಸಿಕೊಂಡು ಹೋಗುತ್ತಿದ್ದರೆ, ರಸ್ತೆ ಬದಿಯಲ್ಲಿ ಫಾಸ್ಟ್ ಫುಡ್ ಮತ್ತು ಚಿಕ್ಕದಾಗಿ ಹೋಟೆಲ್ ಇಟ್ಟು ಕೊಂಡವರು ದುಪ್ಪಟ್ಟು ಹಣ ಕೊಟ್ಟು ಸಿಲಿಂಡರ್ ಖರೀದಿಸಲಾಗದೆ ಸೌದೆ ಒಲೆ ಬಳಕೆಗೆ ಮುಂದಾಗಿದ್ದಾರೆ.

ನಗರದ ಸಂತೆಪೇಟೆ ರಸ್ತೆಬದಿಯ ಫಾಸ್ಟ್‌ಫುಡ್, ಸಯ್ಯಾಜಿರಾವ್ ರಸ್ತೆಯಲ್ಲಿರುವ ಖಾಸಗಿ ಬಸ್ ನಿಲ್ದಾಣದ ಸಮೀಪದಲ್ಲಿರುವ ಶ್ರೀ ಬಸವೇಶ್ವರ ಖಾನಾವಳಿ ಹೋಟೆಲ್ ನಡೆಸುವ ವ್ಯಾಪಾರಿಗಳು ಸೇರಿದಂತೆ ಹಲವೆಡೆ ರಸ್ತೆ ಬದಿಯ ಫಾಸ್ಟ್ ಫುಡ್ ಹಾಗೂ ಸಣ್ಣ ಹೋಟೆಲ್ ವ್ಯಾಪಾರಿಗಳು ಸೌದೆ ಒಲೆ ಮೂಲಕವೇ ದೊಡ್ಡ ದೊಡ್ಡ ಪಾತ್ರೆಗಳಲ್ಲಿ ಅಡುಗೆ ತಯಾರಿಸುತ್ತಿರುವ ದೃಶ್ಯಗಳು ಸಾಮಾನ್ಯವಾಗಿವೆ.

ಕಮರ್ಷಿಯಲ್ ಸಿಲಿಂಡರ್ ಸಿಗ್ತಾಯಿಲ್ಲ ಎಂದು 15 ದಿನ ರಜೆ ಹಾಕಿ ಊರಿಗೆ ಹೋಗಿ ಬಂದರೂ ಪರಿಸ್ಥಿತಿ ಹಾಗೆಯೇ ಇದೆ. ಜೀವನಕ್ಕೆ ಹೋಟೆಲ್ ಬಿಟ್ಟರೆ ಬೇರೆ ದಾರಿ ಇಲ್ಲ. ಹಾಗಾಗಿ ಸೌದೆ ಒಲೆ ತಂದು ಅನ್ನ–ಸಾಂಬರ್ ಮತ್ತು ಚಪಾತಿ ಪಲ್ಯ ಮಾತ್ರ ತಯಾರಿಸುತ್ತಿದ್ದೇವೆ. ಮೊದಲು ಜೋಳದ ರೊಟ್ಟಿ, ಹೋಳಿಗೆ, ಬಜ್ಜಿ ಸೇರಿ ಹತ್ತಾರು ಬಗೆಯ ಐಟಂ ಮಾಡುತ್ತಿದ್ದೆವು. ಇವಾಗ ಕಡಿಮೆ ಮಾಡಿದ್ದೇವೆ ಎಂದು ಶ್ರೀ ಬಸವೇಶ್ವರ ಖಾನಾವಳಿ ಹೋಟೆಲ್‌ನ ನವೀನ್‌ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸಿಲಿಂಡರ್ ಸಿಗೋವರೆಗೂ ಇದೇ ಪರಿಸ್ಥಿತಿ

ಎರಡ್ಮೂರು ದಿನಕ್ಕೊಮ್ಮೆ ಏಜೆನ್ಸಿಯವರು ಕಮರ್ಷಿಯಲ್ ಸಿಲಿಂಡರ್ ತಂದು ಕೊಡ್ತಾ ಇದ್ದರು. ಇವಾಗ ಕೇಳಿದರೆ ಇಲ್ಲ ಎನ್ನುತ್ತಿದ್ದಾರೆ. ಹಾಗಾಗಿ ಸೌದೆ ಒಲೆ ಬಿಟ್ಟು ಬೇರೆ ದಾರಿ ಇಲ್ಲ. ಸೌದೆಗೆ ದಿನಕ್ಕೆ 200 ರೂ.ಖರ್ಚು ಆಗ್ತಾ ಇದೆ. ಆದ್ರೂ ಸಿಲಿಂಡರ್ ಸಿಗೋವರೆಗೂ ಇದೇ ಪರಿಸ್ಥಿತಿ.

ವಿಕಸಿತ ಭಾರತಕ್ಕೆ ರಾಜಕೀಯದಲ್ಲಿ ಮಹಿಳಾ ಮೀಸಲಾತಿ ಅತ್ಯಗತ್ಯ



ನವದೆಹಲಿ: ಎಲ್ಲಾ ವಲಯಗಳಲ್ಲಿನ ಮಹಿಳಾ ಸಬಲೀಕರಣಕ್ಕೆ ನಮ್ಮ ಸರ್ಕಾರವು ಆದ್ಯತೆ ನೀಡಿದೆ. ಮಹಿಳಾ ಮೀಸಲಾತಿ ಕಾಯ್ದೆಯು, ಭಾರತದಲ್ಲಿ ಮಹಿಳೆಯರ ನೇತೃತ್ವದ ಸರ್ಕಾರ ರಚನೆಯನ್ನು ನೆರವಾಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಹೇಳಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪ್ರಧಾನಿ ಮೋದಿ ಅವರು ಪೋಸ್ಟ್ ಮಾಡಿದ್ದಾರೆ. ಅದರಲ್ಲಿ ಕೇಂದ್ರ ಸಚಿವೆ ಅನ್ನಪೂರ್ಣ ದೇವಿ ಪ್ರಕಟಿಸಿದ ಅಂಕಣವನ್ನು ಉಲ್ಲೇಖಿಸಿದ್ದಾರೆ.

'ನಮ್ಮ ಸರ್ಕಾರವು ಎಲ್ಲಾ ವಲಯಗಳಲ್ಲಿನ ನಾರಿ ಶಕ್ತಿಯ ಅಭಿವೃದ್ಧಿಗೆ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಯಾವುದೇ ವಲಯದಲ್ಲಿನ ಭಾಗವಹಿಸುವಿಕೆಯು ಬೇರೆಯವರ ಮೇಲೆ ಭಾರಿ ಪ್ರಭಾವವನ್ನು ಬೀರುತ್ತದೆ. ಹಾಗಾಗಿ, ನಾರಿ ಶಕ್ತಿ ವಂದನಾ ಅಭಿಯಾನಕ್ಕೆ ಚಾಲನೆ ನೀಡಿದ್ದೇವೆ. ಇದರಿಂದ ಭಾರತವು ಮಹಿಳಾ ನೇತೃತ್ವದ ಸರ್ಕಾರ ರಚಿಸಲು ಸಾಧ್ಯವಾಗುತ್ತದೆ. ಇದು ವಿಕಸಿತ ಭಾರತದ ಅಡಿಪಾಯವಾಗಿದೆ' ಎಂದು ಹೇಳಿದ್ದಾರೆ.

ಈ ಕಾಯ್ದೆಯು ಮಹಿಳಾ ಸಬಲೀಕರಣಕ್ಕೆ ನೆರವಾಗುತ್ತದೆ. ಹಾಗಾಗಿ, ರಾಜಕೀಯ ಲೆಕ್ಕಾಚಾರಗಳನ್ನು ಹೊರತುಪಡಿಸಿ ಇದಕ್ಕೆ ಎಲ್ಲಾ ಪಕ್ಷಗಳು ಕೂಡ ಬೆಂಬಲ ನೀಡಿ ಎಂದು ಮನವಿ ಮಾಡಿದ್ದಾರೆ. ರಾಜಕೀಯದಲ್ಲಿ ಮಹಿಳಾ ಮೀಸಲಾತಿ ನೀಡುವ 'ನಾರಿ ಶಕ್ತಿ ವಂದನಾ ಅಭಿಯಾನ' ಹೆಸರಿನ ಕಾಯ್ದೆಯನ್ನು 2023ರಲ್ಲಿ ಸಂಸತ್ತಿನಲ್ಲಿ ಕೇಂದ್ರ ಸರ್ಕಾರವು ಮಂಡಿಸಿತ್ತು. ಇದರ ಅನ್ವಯ ಲೋಕಸಭೆ ಮತ್ತೆ ರಾಜ್ಯ ವಿಧಾನ ಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ಸಿಗಲಿದೆ. ಕಾನೂನಿನಲ್ಲಿ ತಿದ್ದುಪಡಿ ಮಾಡುವ ಮೂಲಕ ಈ ಕಾಯ್ದೆಯನ್ನು ಜಾರಿಗೊಳಿಸಲು ಕೇಂದ್ರವು ಮುಂದಾಗಿದೆ. 2029ರಿಂದ ಮಹಿಳಾ ಮೀಸಲಾತಿ ಕಾಯ್ದೆಯು ಜಾರಿಗೊಳ್ಳುವ ನಿರೀಕ್ಷೆಯಿದೆ ಎಂದು ಹೇಳಿದ್ದಾರೆ.

ವಸಂತ ಮಹಲ್‌ಗೆ ಸಂಸದ ಯದುವೀರ್ ಭೇಟಿ ಕಟ್ಟಡ ಪರಿಶೀಲಿಸಿ, ಬೇಡಿಕೆ ಮನವಿ ಸ್ವೀಕಾರ



ಮೈಸೂರಿನ ವಸಂತ ಮಹಲ್‌ನಲ್ಲಿರುವ ಡಯಟ್ ಕಾಲೇಜಿಗೆ ಸಂಸದ ಯದುವೀರ್ ಒಡೆಯರ್ ಮಂಗಳವಾರ ಭೇಟಿ ನೀಡಿದರು.

ಮೈಸೂರು, ಏ.7(ಜಿಎ)–ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮೈಸೂರಿನ ವಸಂತ ಮಹಲ್‌ನಲ್ಲಿರುವ ಡಯಟ್ ಮತ್ತು ಬಿಎಡ್ ಕಾಲೇಜಿಗೆ ಇಂದು ಭೇಟಿ ನೀಡಿದರು.

ಕಟ್ಟಡದ ಸ್ಥಿತಿಗತಿ ವೀಕ್ಷಿಸಿದ ಬಳಿಕ ಸೌಲಭ್ಯಗಳ ಬೇಡಿಕೆಯ ಮನವಿ ಪತ್ರವನ್ನು ಸ್ವೀಕರಿಸಿದರು. ಜೊತೆಗೆ ಅಲ್ಲಿಯ ಪ್ರಶಿಕ್ಷಣಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಸಭೆ ಕರೆದು ಆಗಬೇಕಾಗಿರುವ ಕೆಲಸ ಕಾರ್ಯಗಳ ಬಗ್ಗೆ ಅಧಿಕಾರಿ ವರ್ಗದವರೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಮೈಸೂರಿನ ಶಾಲಾ ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ಪ್ರಕಾಶ್, ಬಿಎಡ್ ಕಾಲೇಜಿನ ಪ್ರಾಂಶುಪಾಲರಾದ ರಾಜಲಕ್ಷ್ಮಿ, ಡಯಟ್‌ನ ಪ್ರಾಂಶುಪಾಲರಾದ ನಾಗರಾಜಯ್ಯ, ಉಪನಿರ್ದೇಶಕರಾದ ಉದಯ್‌ಕುಮಾರ್, ಪ್ರವಾಚಕರಾದ ಅಮಿತ್, ಲಕ್ಷ್ಮೀಪತಿ ರಾಜ ಶೇಖರ್ ಇತರರು ಉಪಸ್ಥಿತರಿದ್ದರು.

ಪಂಚಗರುಡೋತ್ಸವದಲ್ಲಿ ಜಗ್ಗಿ ವಾಸುದೇವ್ ಅಳಿಯ ಸಂದೀಪ್ ನಾರಾಯಣ ಭಾಗಿ




ಬಿಡಾರಂ ರಾಮಮಂದಿರದಲ್ಲಿ ಆಯೋಜಿಸಿದ್ದ ಪಂಚಗರುಡೋತ್ಸವದಲ್ಲಿ ಜಗ್ಗಿ ವಾಸುದೇವ್ ಅವರ ಅಳಿಯ ಸಂದೀಪ್ ನಾರಾಯಣ ಪಾಲ್ಗೊಂಡಿದ್ದರು.

ಮೈಸೂರು,ಏ.7–ಮೈಸೂರಿನ ಬಿಡಾರಂ ರಾಮಮಂದಿರದಲ್ಲಿ 139ನೇ ರಾಮಾಭ್ಯುದಯ ಸಂಗೀತ ಸಭಾದ ರಾಮನವಮಿ ಪ್ರಯುಕ್ತ ಈಶ ಫೌಂಡೇಶನ್ ಜಗ್ಗಿ ವಾಸುದೇವ್ ಅವರ ಅಳಿಯ ಸಂದೀಪ್ ನಾರಾಯಣ ಅವರನ್ನು ಪಂಚಗರುಡೋತ್ಸವಕ್ಕೆ ಆಹ್ವಾನಿಸಲಾಗಿತ್ತು.

ಈ ಸಂದರ್ಭದಲ್ಲಿ ಉದ್ಯಮಿ ಚಂದ್ರಶೇಖರ್, ಕಾಳಿದಾಸ ರಸ್ತೆಯಲ್ಲಿರುವ ಯದುಗಿರಿ ಯತಿರಾಜ ಇದರ ಶಾಖಾ ಮಠ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದ ಪ್ರಧಾನ ಅರ್ಚಕ ವೀರರಾಘವನ್, ಆಡಳಿತಾಧಿಕಾರಿ ಕೆ.ಆರ್.ಯೋಗಾನರಸಿಂಹನ್ (ಮುರುಳಿ) ಹಾಗೂ ಸಮಾಜ ಸೇವಕ ಆನಂದ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು–ಜೋಧ್‌ಪುರ್ ನಡುವೆ ವಿಶೇಷ ರೈಲು ಆರಂಭಕ್ಕೆ ಮೈಸೂರು ಚೇಂಬರ್ಸ್ ಆಫ್ ಕಾಮರ್ಸ್ ಸ್ವಾಗತ



ಡಾ.ಕೆ.ಬಿ.ಲಿಂಗರಾಜು

ಮೈಸೂರು, ಏ.7–ಮೈಸೂರು ಮತ್ತು ಜೋಧಪುರ್ ನಡುವೆ ವಿಶೇಷ ಎಕ್ಸ್ ಪ್ರೆಸ್ ರೈಲುಗಳನ್ನು ಆರಂಭಿಸುವ ಕಾರ್ಯಕ್ಕೆ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಡಾ.ಕೆ.ಬಿ.ಲಿಂಗರಾಜು ನೈರುತ್ಯ ರೈಲ್ವೆ ಮೈಸೂರು ವಿಭಾಗವನ್ನು ಅಭಿನಂದಿಸಿದ್ದಾರೆ.

ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಮುದಿತ್ ಮಿತ್ತಲ್, ಮೈಸೂರು ನಗರದ ಬೆಳವಣಿಗೆಗೆ ಹಾಗೂ ಹೆಚ್ಚುವರಿ ಪ್ರಯಾಣಿಕರ ಸಂಚಾರ ದಟ್ಟಣೆ ನಿಯಂತ್ರಿಸಲು, ಮೈಸೂರು ಮತ್ತು ಜೋಧಪುರ ನಡುವೆ ವಿಶೇಷ ಎಕ್ಸ್‌ಪ್ರೆಸ್ ರೈಲುಗಳನ್ನು ಆರಂಭಿಸಲು ಕೈಗೊಂಡಿರುವ ನಿರ್ಧಾರಕ್ಕೆ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಡಾ.ಕೆ.ಬಿ.ಲಿಂಗರಾಜು ಪತ್ರದ ಮೂಲಕ ಧನ್ಯವಾದಗಳನ್ನು ತಿಳಿಸಿದ್ದಾರೆ.

ಈ ಬಗ್ಗೆ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಸದಸ್ಯರು ಹಲವಾರು ಬಾರಿ ಮನವಿ ಸಲ್ಲಿಸಿದ್ದರು. ಕೆ.ಬಿ.ಲಿಂಗರಾಜು ವಲಯ ರೈಲ್ವೆ ಬಳಕೆದಾರರ ಹುಬ್ಬಳ್ಳಿ ಸಮಿತಿ ಸದಸ್ಯ ರಾಗಿದ್ದು, ಸಭೆಯಲ್ಲಿ ಈ ವಿಷಯದ ಬಗ್ಗೆ ಜನರಲ್ ಮ್ಯಾನೇಜರ್‌ಗೆ ಪ್ರತಿ ಬಾರಿ ಮನವಿ ಸಲ್ಲಿಸುತ್ತಿದ್ದರು. ಅವರ ಮನವಿಗೆ ಸ್ಪಂದಿಸಿದ ಜನರಲ್ ಮ್ಯಾನೇಜರ್, ಈ ನಿರ್ಧಾರಕ್ಕೆ ಬಂದಿರುವುದಕ್ಕೆ ಸಂಸ್ಥೆಯ ಪರವಾಗಿ ಧನ್ಯವಾದ ಹಾಗೂ ಅಭಿನಂದನೆ ವ್ಯಕ್ತಪಡಿಸಿದ್ದಾರೆ.

ಇದೇ ರೀತಿ ಮೈಸೂರು ನಗರದ ಅಭಿವೃದ್ಧಿ, ಬೆಳವಣಿಗೆಯ ನಿಟ್ಟಿನಲ್ಲಿ ನಡೆಯುವ ಪ್ರತಿಯೊಂದು ಕಾರ್ಯಕ್ರಮಕ್ಕೆ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯು ನೈರುತ್ಯ ರೈಲ್ವೆ ಅಧಿಕಾರಿಗಳೊಂದಿಗೆ ಕೈಜೋಡಿಸಲು ಉತ್ಸುಕವಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಬೂಜಿ ಜಯಂತಿ ಆಚರಣೆ...



ಮೈಸೂರು ಬಿಜೆಪಿ ಕಚೇರಿಯಲ್ಲಿ ಹಸಿರು ಕ್ರಾಂತಿ ಹರಿಕಾರ ಬಾಬು ಜಗಜೀವನ ರಾಮ್ ಅವರ ಜನ್ಮದಿನ ಆಚರಿಸಲಾಯಿತು. ಈ ವೇಳೆ ಮಾಜಿ ಶಾಸಕ ಎಲ್.ನಾಗೇಂದ್ರ, ಎಸ್‌ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ಬಿ.ಎಂ.ರಘು, ರುದ್ರಮೂರ್ತಿ, ಚಿಕ್ಕವೆಂಕಟು, ಕೆ.ಗಿರೀಶ್ ಉಪಸ್ಥಿತರಿದ್ದರು.

ಜಯಮೃತ್ಯುಂಜಯ ಸ್ವಾಮೀಜಿ ವಿರುದ್ಧ ಲೈಂಗಿಕ ಕಿರುಕುಳ ಆರೋಪ

ಮಹಿಳಾ ಆಯೋಗಕ್ಕೆ ಸಂತ್ರಸ್ತೆ ದೂರು!



ಜಯ ಮೃತ್ಯುಂಜಯ ಸ್ವಾಮೀಜಿ

ಬೆಂಗಳೂರು: ಕೂಡಲಸಂಗಮದ ಪಂಚಮಸಾಲಿ ಪೀಠದ ಜಯ ಮೃತ್ಯುಂಜಯ ಸ್ವಾಮೀಜಿ ವಿರುದ್ಧ ಮಹಿಳೆಯೊಬ್ಬರು ಲೈಂಗಿಕ ಕಿರುಕುಳ ಆರೋಪ ಮಾಡಿದ್ದು, ಈ ಸಂಬಂಧ ರಾಜ್ಯ ಮಹಿಳಾ ಆಯೋಗಕ್ಕೆ ದೂರು ನೀಡಿದ್ದಾರೆ.

ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಹೋರಾಟದ ನೇತೃತ್ವ ವಹಿಸಿಕೊಂಡಿದ್ದ ಜಯಮೃತ್ಯುಂಜಯ ಸ್ವಾಮೀಜಿ ವಿರುದ್ಧ ಬೆಂಗಳೂರಿನ ಮಹಿಳೆ ದೂರು ನೀಡಿದ್ದು, ಸ್ವತಃ ಸ್ವಾಮೀಜಿ ನನ್ನ ಖಾಸಗಿ ವೀಡಿಯೊ ಮಾಡಿ ಲೈಂಗಿಕವಾಗಿ ಸಹಕರಿಸುವಂತೆ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಇತ್ತೀಚಿಗೆ ಜಯಮೃತ್ಯುಂಜಯ ಸ್ವಾಮೀಜಿಯದ್ದು ಎನ್ನಲಾದ ಖಾಸಗಿ ವೀಡಿಯೊ ಹರಿದಾಡಿದ್ದು, ಈಗ ಮಹಿಳೆ ದೂರು ನೀಡಿದ ಹಿನ್ನೆಲೆಯಲ್ಲಿ ಪ್ರಕರಣ ಗಂಭೀರ ಸ್ವರೂಪ ಪಡೆದುಕೊಂಡಿದೆ.

ಸ್ವಾಮೀಜಿಯಿಂದ ಪ್ರತಿದೂರು: ಲೈಂಗಿಕ ಆರೋಪ ಹೊರಿಸಿರುವ ಬೆಂಗಳೂರು ಮೂಲದ ಮಹಿಳೆ ಸೇರಿದಂತೆ ನಾಲ್ವರು ನನ್ನ ಬಳಿ 3 ಕೋಟಿ ಹಣಕ್ಕೆ ಬೇಡಿಕೆ ಇಟ್ಟಿದ್ದು, ನೀಡದೇ ಇದ್ದರೆ ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಕೆಟ್ಟದಾಗಿ ಪ್ರಚಾರ ಮಾಡುತ್ತೇವೆ. ಅತ್ಯಾಚಾರದ ದೂರು ಹಾಕುತ್ತೇನೆ ಎಂದು ಬೆದರಿಕೆ ಹಾಕಿ, ನನ್ನ ತೇಜೋವಧೆ ಮಾಡುತ್ತಿದ್ದಾರೆ' ಎಂದು ಆರೋಪಿಸಿ ಕೂಡಲಸಂಗಮ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಅವರು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಕಳೆದ ಶನಿವಾರವೇ (ಏ.4) ದೂರು ದಾಖಲಿಸಿದ್ದಾರೆ.

2–3 ವರ್ಷಗಳ ಹಿಂದೆ ಬೆಂಗಳೂರಿನ ಮಹಿಳೆಯೊಬ್ಬರು ತನ್ನ ಸಹೋದರರೊಂದಿಗೆ ನನ್ನನ್ನು ಭೇಟಿಯಾಗಿದ್ದಳು. ನಾನೂ ಲಿಂಗಾಯತ ಸಮಾಜದವಳಾಗಿದ್ದು, ಪಂಚಮಸಾಲಿ ಹೋರಾಟಕ್ಕೂ ಸಾಥ್ ನೀಡುವುದಾಗಿ ಹೇಳಿದ್ದರು. ತಾನೊಂದು ಫೌಂಡೇಷನ್ ಮೂಲಕ ಬಡ ಹಾಗೂ ಅನಾಥ ಮಕ್ಕಳನ್ನು ಸಾಕುತ್ತಿದ್ದೇನೆ, ಹಣ ನೀಡಬೇಕೆಂದು ಬೇಡಿಕೆ ಇಟ್ಟಿದ್ದಳು. ನಂತರ ಯಾರಾದರೂ ದಾನಿಗಳಿದ್ದರೆ ಸಹಾಯ ಮಾಡಿಸುವುದಾಗಿ ಹೇಳಿದ್ದೆ ಎಂದು ದೂರಿನಲ್ಲಿ ಸ್ವಾಮೀಜಿ ತಿಳಿಸಿದ್ದಾರೆ.

ನಾನು ಹಣ ನೀಡದ ಕಾರಣ ರಾಜಕೀಯ ವ್ಯಕ್ತಿಗಳ ಪಿತೂರಿಯಿಂದ ನನ್ನ ತೇಜೋವಧೆ ಮಾಡಲು ಹಣಕ್ಕಾಗಿ ಪೀಡಿಸುತ್ತಿದ್ದಳು. ಆದರೂ ನಾನು ಹಣ ನೀಡದ ಕಾರಣ ನನ್ನ ಮೇಲೆ ಇಲ್ಲ ಸಲ್ಲದ ಆರೋಪ ಮಾಡಿ ಬ್ಲಾಕ್‌ಮೇಲ್ ಮಾಡುತ್ತಿದ್ದಾಳೆ ಎಂದು ಆರೋಪಿಸಿದ್ದಾರೆ.

ಬಳಿಕ ಕೆಲ ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ನನ್ನ ಮೇಲೆ ಕೆಟ್ಟದಾಗಿ ಅಪಪ್ರಚಾರ ಮಾಡಿಸಿದ್ದರು. ಈ ಸಂಬಂಧ ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್‌ನಲ್ಲಿ ಇದಕ್ಕೆ ತಡೆಯಾಜ್ಞೆಯನ್ನೂ ತರಲಾಗಿದೆ. ಇಷ್ಟರ ಹೊರತಾಗಿಯೂ ಖಾಸಗಿ ವಾಹಿನಿಯಲ್ಲಿ ನನ್ನ ವಿರುದ್ಧ ಅಪಪ್ರಚಾರ ಮಾಡಿಸಿದ್ದಾಳೆ ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

ನನ್ನ ಶಿಷ್ಯ ರಾಜಕುಮಾರ ಎಂಬುವವರ ಮೊಬೈಲ್‌ಗೆ ಕರೆ ಮಾಡಿ 3 ಕೋಟಿ ಹಣ ಬೇಡಿಕೆ ಇಟ್ಟಿದ್ದಾಳೆ. ಹಣ ನೀಡದೇ ಇದ್ದರೆ ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಕೆಟ್ಟದಾಗಿ ಪ್ರಚಾರ ಮಾಡುತ್ತೇನೆಂದು ಹೇಳಿದ್ದಾಳೆ. ಅತ್ಯಾಚಾರದ ದೂರು ಹಾಕುತ್ತೇನೆಂದು ಬೆದರಿಕೆ ಹಾಕಿದ್ದಾಳೆ ಎಂದು ತಿಳಿಸಿದ್ದಾರೆ.

ಪಂಚಮಸಾಲಿ ಸಮಾಜದ ಹೋರಾಟ ಹತ್ತಿಕ್ಕಲು, ನನ್ನ ತೇಜೋವಧೆ ಮಾಡಲು ಪ್ರಯತ್ನಿಸುತ್ತಿದ್ದಾರೆ. ಕಾರಣ ಮಹಿಳೆ ಸೇರಿದಂತೆ ಪೃಥ್ವಿಗೌಡ, ಯಶವಂತ, ಎಂ.ಡಿ.ವೀರೇಶ ಇವರೆಲ್ಲರ ವಿರುದ್ಧ ಕಾನೂನು ಕ್ರಮ ತೆಗದುಕೊಳ್ಳಬೇಕು ಎಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಮುಂಬೈ ಮಣಿಸಿದ ರಾಜಸ್ತಾನ್ ರಾಯಲ್ಸ್!



ಗುವಾಹಟಿ, ಏ.7 (ವಿವಿಹೆಚ್) – ಯಶಸ್ವಿ ಜೈಸ್ವಾಲ್, ವೈಭವ್ ಸೂರ್ಯ ವಂಶಿ ಅವರ ಅಮೋಘ ಬ್ಯಾಟಿಂಗ್ ಪ್ರದರ್ಶನದ ನೆರವಿನಿಂದ ಬಲಿಷ್ಠ ಮುಂಬೈ ತಂಡವನ್ನು 27 ರನ್‌ಗಳಿಂದ ಮಣಿಸಿದ ರಾಜಸ್ತಾನ್ ರಾಯಲ್ಸ್ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಮಳೆಯಿಂದಾಗಿ ನಿಗದಿತ ಸಮಯಕ್ಕೆ ಆರಂಭವಾಗಬೇಕಿದ್ದ ಪಂದ್ಯ ರಾತ್ರಿ10.05 ಗಂಟೆಗೆ ಪಂದ್ಯ ಆರಂಭವಾಯಿತು. ತಡವಾಗಿ ಆರಂಭವಾದ ಕಾರಣ ಪಂದ್ಯವನ್ನು 11 ಓವರ್‌ಗಳಿಗೆ ಸೀಮಿತಗೊಳಿಸಲಾಯಿತು.

ಇಲ್ಲಿನ ಬಾರ್ಸಪರ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ 19ನೇ ಆವೃತ್ತಿಯ ಐಪಿಎಲ್–2026ರ 13ನೇ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ರಾಜಸ್ತಾನ್ 11 ಓವರ್‌ಗಳಿಗೆ 3 ವಿಕೆಟ್ ಕಳೆದುಕೊಂಡು 150ರನ್ ಕಲೆ ಹಾಕಿತು. ಈ ಮೊತ್ತ ಬೆನ್ನತ್ತುವಲ್ಲಿ ವಿಫಲವಾದ ಮುಂಬೈ 11 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 123ರನ್ ಗಳಿಸಿ, ಸೋಲೊಪ್ಪಿಕೊಂಡಿತು.

ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ತಾನ್‌ಗೆ ಜೈಸ್ವಾಲ್ ಹಾಗೂ ಸೂರ್ಯವಂಶಿ ಭರ್ಜರಿ ಆರಂಭ ಒದಗಿಸಿದರು. ಯಶಸ್ವಿ ಜೈಸ್ವಾಲ್, ದೀಪಕ್ ಚಾಹರ್ ಅವರ ಮೊದಲ ಓವರ್‌ನಲ್ಲೇ 4 ಬೌಂಡರಿ, 1 ಸಿಕ್ಸರ್ ಸಹಿತ 22ರನ್ ಚಚ್ಚಿದರು. ಇತ್ತ ಎರಡನೇ ಓವರ್ ಬೌಲಿಂಗ್ ಮಾಡಿದ ಜಸ್‌ಪ್ರಿತ್ ಬುಮ್ರಾಗೆ 2 ಸಿಕ್ಸರ್ ಬಾರಿಸಿದ ವೈಭವ್ ಸೂರ್ಯವಂಶಿ ಎಲ್ಲರ ಹುಬ್ಬೇರುವಂತೆ ಮಾಡಿದರು. ಆ ಮೂಲಕ 2.4 ಓವರ್‌ಗಳಲ್ಲಿಯೇ 50ರನ್‌ಗಳ ಜೊತೆಯಾಟವಾಡಿದರು.

ಈ ಜೋಡಿ 5 ಓವರ್‌ಗಳಿಗೆ 80 ರನ್ ಕಲೆಹಾಕಿತ್ತು. ಈ ವೇಳೆ ಹೊಡಿಬಡಿ ಆಟದ ಮೂಲಕ 14 ಎಸೆತಗಳಲ್ಲಿ 1 ಬೌಂಡರಿ, 5 ಭರ್ಜರಿ ಸಿಕ್ಸರ್ ಮೂಲಕ 39ರನ್ ಗಳಿಸಿ ವೈಭವ್ ಸೂರ್ಯವಂಶಿ ಲಾಂಗ್ ಆಫ್‌ನಲ್ಲಿ ಕ್ಯಾಚಿತ್ತು ನಿರ್ಗಮಿಸಿದರು. ಬಳಿಕ ಬಂದ ಧ್ರುವ್ ಜುರೇಲ್ 2, ನಾಯಕ ರಿಯಾನ್ ಪರಾಗ್ 20 ರನ್ ಗಳಿಸಿ ಔಟಾದರು.

ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಮತ್ತೊಂದೆಡೆ ಉತ್ತಮ ಇನ್ನಿಂಗ್ಸ್ ಕಟ್ಟಿದ ಜೈಸ್ವಾಲ್ 32 ಎಸೆತಗಳಲ್ಲಿ 10 ಬೌಂಡರಿ, 4 ಸಿಕ್ಸರ್ ಸಹಿತ ಅಜೇಯ 77ರನ್ ಬಾರಿಸಿದರು. ಶಿಮ್ರಾನ್ ಹೆಟ್ಮಯರ್ 6 ರನ್ ಗಳಿಸಿ ಅಜೇಯರಾಗಿ ಉಳಿದರು.

ಮುಂಬೈ ಪರ ಗಜನ್‌ಫರ್ 2 ವಿಕೆಟ್, ಶಾರ್ದುಲ್ ಠಾಕೂರ ಒಂದು ವಿಕೆಟ್ ಪಡೆದರು.

ಈ ಮೊತ್ತ ಬೆನ್ನತ್ತಿದ ಮುಂಬೈಗೆ ಆರಂಭದಲ್ಲೇ ಕುಸಿಯಿತು. ರಿಯಾನ್ ರಿಕೆಲ್ಟನ್ 8, ರೋಹಿತ್ ಶರ್ಮಾ 5, ಸೂರ್ಯಕುಮಾರ್ ಯಾದವ್ 6, ನಾಯಕ ಹಾರ್ದಿಕ್ ಪಾಂಡ್ಯ 9, ತಿಲಕ್ ವರ್ಮಾ 14 ರನ್‌ಗಳಿಸಿ ಪೆವಿಲಿಯನ್ ಪರೇಡ್ ನಡೆಸಿದರು. ಆ ಮೂಲಕ ಮುಂಬೈ 45ರನ್‌ಗಳಿಗೆ ತನ್ನ ಪ್ರಮುಖ 5 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು.

ಬಳಿಕ ಬಂದ ಶೆರ್ಫಾನೆ ರುದರ್‌ಫೋರ್ಡ್ ಕೇವಲ 8 ಎಸೆತಗಳಲ್ಲಿ 25ರನ್ ಗಳಿಸಿ ಆಡುತ್ತಿದ್ದ ವೇಳೆ ಸ್ಲಿಪ್‌ಗೆ ಕ್ಯಾಚಿತ್ತು ಹೊರನಡೆದರು. ನಮನ್ ಧಿರ್ 13 ಎಸೆತಗಳಲ್ಲಿ 25ರನ್ ಬಾರಿಸಿ ಇವರ ಹಿಂದೆಯೇ ನಿರ್ಗಮಿಸಿದರು. ಉಳಿದಂತೆ ಶಾರ್ದುಲ್ ಠಾಕೂರ್ 8, ಟ್ರೆಂಟ್ ಬೌಲ್ಟ್ 1, ದೀಪ್ ಚಾಹರ್ ಅಜೇಯ 8, ಜಸ್‌ಪ್ರಿತ್ ಬುಮ್ರಾ ಅಜೇಯ 5 ರನ್ ಗಳಿಸಿದರು. ರಾಜಸ್ತಾನ್ ಪರ ರವಿ ಬಿಷ್ಣೋಯ್, ಸಂದೀಪ್ ಶರ್ಮಾ ಹಾಗೂ ಬರ್ಗರ್ ತಲಾ 2 ವಿಕೆಟ್, ತುಷಾರ್ ದೇಶ್‌ಪಾಂಡೆ ಹಾಗೂ ಜೋಫ್ರಾ ಆರ್ಚರ್ ತಲಾ ಒಂದೊಂದು ವಿಕೆಟ್ ಕಿತ್ತು ಮಿಂಚಿದರು.

ಭರ್ಜರಿ ಬ್ಯಾಟಿಂಗ್ ಮೂಲಕ ರಾಜಸ್ತಾನ್ ಗೆಲುವಿನ ರೂವಾರಿಯಾದ ಯಶಸ್ವಿ ಜೈಸ್ವಾಲ್ ಪಂದ್ಯಶ್ರೇಷ್ಠ ಪಡೆದರು.

ಪಿಎಸ್‌ಐ ಹಗರಣದ ಆರೋಪಿ ಆರ್.ಡಿ.ಪಾಟೀಲ ಮೈಸೂರು ಸ್ಥಳಾಂತರ ಹೈಕೋರ್ಟ್‌ನಿಂದ ರದ್ದು



ಕಲಬುರಗಿ: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದ ಪ್ರಮುಖ ಆರೋಪಿ ರುದ್ರಗೌಡ ಪಾಟೀಲ ಅಲಿಯಾಸ್ ಆರ್.ಡಿ.ಪಾಟೀಲನನ್ನು ಕಲಬುರಗಿ ಸೆಂಟ್ರಲ್ ಜೈಲಿನಿಂದ ಮೈಸೂರಿನ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸಲು ಅನುಮತಿ ನೀಡಿದ್ದ ಜಿಲ್ಲಾ ಕೋರ್ಟ್ ಆದೇಶವನ್ನು ಹೈಕೋರ್ಟ್‌ನ ಕಲಬುರಗಿ ಪೀಠವು ರದ್ದುಗೊಳಿಸಿದೆ.

ಅಲ್ಲದೇ, ಆರ್.ಡಿ.ಪಾಟೀಲನನ್ನು ಮೈಸೂರು ಜೈಲಿನಿಂದ ಕಲಬುರಗಿ ಜೈಲಿಗೆ ಮರು ಸ್ಥಳಾಂತರಿಸಲು ಕ್ರಮವಹಿಸುವಂತೆ ಹೈಕೋರ್ಟ್ ಸೂಚಿಸಿದೆ. ಹೀಗಾಗಿ ಪಾಟೀಲ ಮತ್ತೆ ಕಲಬುರಗಿ ಜೈಲಿಗೆ ಬರುವುದು ನಿಶ್ಚಿತವಾಗಿದೆ. ರಾಜ್ಯದ ವಿವಿಧೆಡೆ 20ಕ್ಕೂ ಹೆಚ್ಚು ಪ್ರಕರಣಗಳನ್ನು ಎದುರಿಸುತ್ತಿರುವ ಆರ್.ಡಿ.ಪಾಟೀಲ 2023ರ ನ.11ರಿಂದ ಕಲಬುರಗಿ ಕೇಂದ್ರ ಕಾರಾಗೃಹದಲ್ಲಿ ವಿಚಾರಣಾ ಕೈದಿಯಾಗಿದ್ದ. 2025ರ ವರ್ಷಾಂತ್ಯದ ಕೆಲವು ತಿಂಗಳಲ್ಲಿ ಜೈಲು ಅಧಿಕಾರಿಗಳೊಂದಿಗೆ ಕಿರಿಕ್ ಮಾಡಿಕೊಂಡಿದ್ದ. ಬಳಿಕ ಆತನ ಸ್ಥಳಾಂತರಕ್ಕೆ ಜೈಲಿನ ಅಧಿಕಾರಿಗಳು ಪತ್ರ ಬರೆದಿದ್ದರು.

ಈ ಸಂಬಂಧ ಕೆಲವು ಭದ್ರತಾ ಕಾರಣಗಳನ್ನು ನೀಡಿ ಕಲಬುರಗಿಯ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು 2026ರ ಜ.27ರಂದು ಪಾಟೀಲನನ್ನು ಮೈಸೂರು ಜೈಲಿಗೆ ವರ್ಗಾಯಿಸಲು ಅನುಮತಿ ನೀಡಿತ್ತು ಬಳಿಕ ಮೈಸೂರು ಜೈಲಿಗೆ ಜನವರಿ 28ರಂದು ಸ್ಥಳಾಂತರಿಸಲಾಗಿತ್ತು.

ಹೋರಾಟ ಮಾಡದಿದ್ದರೆ ನಾಯಕತ್ವ ಬೆಳೆಯಲ್ಲ; ಅವಕಾಶವೂ ಸಿಗಲ್ಲ

ಮಹಿಳೆಯರಿಗೆ ಬಿಜೆಪಿ ರಾಜ್ಯ ಮಹಿಳಾ ಮೋರ್ಚಾ ಅಧ್ಯಕ್ಷೆ ಮಂಜುಳಾ ಕಿವಿಮಾತು



ಮೈಸೂರಿನ ಆರಾಧ್ಯ ಮಹಾಸಭಾದಲ್ಲಿ ಕೆ.ಆರ್.ಕ್ಷೇತ್ರದ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಯಿತು. ಈ ವೇಳೆ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ, ರಾಜ್ಯ ಮಹಿಳಾ ಮೋರ್ಚಾ ಅಧ್ಯಕ್ಷೆ ಮಂಜುಳಾ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು, ಏ.7(ಎಂಕೆ)– ಮಹಿಳೆಯರೆಲ್ಲರೂ ಹೋರಾಟದ ಮೂಲಕ ಜನರಿಗೆ ಧ್ವನಿಯಾಗಿ ನಿಲ್ಲಬೇಕು ಎಂದು ಬಿಜೆಪಿ ರಾಜ್ಯ ಮಹಿಳಾ ಮೋರ್ಚಾ ಅಧ್ಯಕ್ಷೆ ಮಂಜುಳಾ ಹೇಳಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಆರಾಧ್ಯ ಮಹಾಸಭಾದಲ್ಲಿ ಬಿಜೆಪಿ ಕೆ.ಆರ್.ಕ್ಷೇತ್ರದ ಮಹಿಳಾ ಮೋರ್ಚಾ ವತಿಯಿಂದ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಅವರು, ಹೋರಾಟ ಮಾಡದಿದ್ದರೆ ನಾಯಕತ್ವ ಹುಟ್ಟುವುದಿಲ್ಲ. ಅವಕಾಶಗಳು ದೊರೆಯುವುದಿಲ್ಲ ಎಂದರು.

ಸ್ತ್ರೀಯರ ಉದ್ಧಾರ ಆಗುವವರೆಗೂ ದೇಶದ ಉದ್ಧಾರವಾಗದು ಎಂಬ ಸ್ವಾಮಿ ವಿವೇಕಾನಂದ ಮಾತಿನಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ಮಹಿಳೆಯರಿಗೆ ಅವಕಾಶಗಳು ದೊರೆಯುವಂತಾಗಬೇಕು. ಲಿಂಗ ತಾರತಮ್ಯ ಎಂಬುದು ಯುದ್ಧ ಭೂಮಿಯಲ್ಲೇ ಇಲ್ಲ. ಹಾಗಾಗಿ ಮಹಿಳೆಯರು ಯಾವುದೇ ಹಿಂಜರಿಕೆ ಇಲ್ಲದೆ ಸಾಧನೆಯತ್ತ ಸಾಗಬಹುದು ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ಮುಂದಿನ ಲೋಕಸಭಾ ಚುನಾವಣೆಗೆ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ನೀಡಿದೆ. ಅದರ ಸದ್ಬಳಕೆಯಾಗಬೇಕಾದರೆ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ರಾಜಕೀಯ ಪ್ರವೇಶ ಮಾಡಬೇಕು. 2 ಸಾವಿರ ರೂ.ಕೊಟ್ಟು ಮಹಿಳೆಯ ಸ್ವಾಭಿಮಾನ ಖರೀದಿಸಲು ಮುಂದಾಗಿರುವ ಕಾಂಗ್ರೆಸ್‌ನ ಮಹಿಳಾ ವಿರೋಧಿ ನೀತಿಗಳ ವಿರುದ್ಧ ಹೋರಾಡಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿದ ಸಂಸದ ಯದುವೀರ್ ಒಡೆಯರ್ ಮಾತನಾಡಿ, ಮಹಿಳೆಯರಿಂದಲೇ ಮೈಸೂರಿನ ಪರಂಪರೆ ನಿರ್ಮಾಣವಾಗಿದೆ. ಟಿಪ್ಪು ವಿರುದ್ಧ ನಂಜಮ್ಮಣ್ಣಿ ಅವರು ಹೋರಾಟ ಮಾಡಿದ್ದರಿಂದಲೇ ಮೈಸೂರು ಸಂಸ್ಥಾನ ಹಲವು ಜನಪರ ಕಾರ್ಯಗಳನ್ನು ಮಾಡಲು ಸಾಧ್ಯವಾಯಿತು. ಅದರಂತೆ ಮಹಾರಾಣಿ ಲಕ್ಷ್ಮಮ್ಮಣಿ ಅವರ ಕೊಡುಗೆ ಅನೇಕ ಇವೆ. ಈ ಪರಂಪರೆಯನ್ನು ಮುಂದಿನ ಪೀಳಿಗೆಗೆ ತಿಳಿಸಿ–ಉಳಿಸುವ ಕೆಲಸವನ್ನು ನಾವೆಲ್ಲರೂ ಮಾಡಬೇಕಿದೆ ಎಂದರು.

ರಾಜ್ಯ ಸರ್ಕಾರ ಇನ್ನೂ 10 ಸಾವಿರ ರೂ. ಬೇಕಾದರೆ ಕೊಡಲಿ. ಆದರೆ, ಮುಖ್ಯವಾಗಿ ಜನರ ಆದಾಯ ಹೆಚ್ಚಿಸಬೇಕು. ಅದಕ್ಕೆ ಕೌಶಲಗಳನ್ನು ಕಲಿಸಬೇಕು. ಕೌಶಲ್ಯ ತರಬೇತಿ ಕಾರ್ಯಕ್ರಮಗಳನ್ನು ರೂಪಿಸದೆ ಕೇವಲ ಹಣ ಕೊಟ್ಟರೆ ಮಹಿಳೆಯರ ಮತ್ತು ಜನರ ಉದ್ಧಾರ ಆಗುವುದಿಲ್ಲ. ಮಹಿಳೆಯರಿಗೆ ಕೌಶಲ ಕೊಟ್ಟರೆ ಅವರೇ ಹಣ ಸಂಪಾದಿಸಿ ದೇಶದ ಅಭಿವೃದ್ಧಿಗೆ ಕೊಡುಗೆ ನೀಡಲಿದ್ದಾರೆ ಎಂದರು.

ಸನ್ಮಾನ: ಇದೇ ವೇಳೆ ಡಾ.ಲಕ್ಷ್ಮಿ (ವೈದ್ಯಕೀಯ), ಶಾಂತ ಸೋಮಶೇಖರ್ (ಮಹಿಳಾ ಮೋರ್ಚಾ ಸಂಘಟನೆ), ಸೌಭಾಗ್ಯ ಮೂರ್ತಿ(ನಗರಪಾಲಿಕೆ ಮಾಜಿ ಸದಸ್ಯೆ), ಕಮಲಮ್ಮ(ವಿವಿ ಸೆನೆಟ್ ಸದಸ್ಯೆ), ಗುರುಮಲ್ಲಮ್ಮ(ಸಿರಿಧಾನ್ಯ) ಯಶೋಧ(ವೈದ್ಯೆ), ರೇಖಾ(ಕ್ರೀಡೆ), ಡಾ.ಮೇರಿಧಾತ್ರಿ(ಅತಿಥಿ ಉಪನ್ಯಾಸಕಿ) ಅವರನ್ನು ಸನ್ಮಾನಿಸಲಾಯಿತು. ಶಾಸಕ ಟಿ.ಎಸ್.ಶ್ರೀವತ್ಸ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕೆ.ಆರ್.ಕ್ಷೇತ್ರದ ಅಧ್ಯಕ್ಷ ಗೋಪಾಲರಾಜೇ ಅರಸ್, ನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕಾರಾಜು, ಕೆಆರ್ ಕ್ಷೇತ್ರದ ಮಹಿಳಾ ಮೋರ್ಚಾದ ಅಧ್ಯಕ್ಷೆ ಸರ್ವಮಂಗಳಾ, ನಗರ ಮಹಿಳಾ ಪ್ರಧಾನ ಕಾರ್ಯದರ್ಶಿ ಚಂದ್ರಕಲಾ ಮತ್ತಿತರರಿದ್ದರು.

ಮೈಸೂರು ಮಿತ್ರ

ಸಮಸ್ಯೆಗಳಿಗೆ ಸ್ಪಂದಿಸುವುದೇ ಜನಪ್ರತಿನಿಧಿಗಳ ಜವಾಬ್ದಾರಿ

ಅಭಿನಂದನಾ ಕಾರ್ಯಕ್ರಮದಲ್ಲಿ ಸಂಸದ ಬಸವರಾಜ ಬೊಮ್ಮಾಯಿ ಅಭಿಮತ

ಮಂಡ್ಯ,ಏ.7– ಮುಖ್ಯಮಂತ್ರಿ ಅಥವಾ ಜನಪ್ರತಿನಿಧಿಯಾದವರು ಎಲ್ಲಾ ಭಾಗಗಳಲ್ಲೂ ಅಭಿವೃದ್ಧಿ ಕೆಲಸ ಮಾಡುವುದಲ್ಲದೆ ಜನರ ಸಮಸ್ಯೆಗಳಿಗೆ ಸ್ಪಂದಿಸ ಬೇಕಾಗಿರುವುದು ಜವಾಬ್ದಾರಿಯಾಗಿರುತ್ತದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯಿಸಿದ್ದಾರೆ.

ತಾಲೂಕಿನ ತೂಬಿನಕೆರೆ ಗ್ರಾ. ಪಂ. ವ್ಯಾಪ್ತಿಯ ಎಲೆಚಾಕನಹಳ್ಳಿ, ಯಲಿಯೂರು, ಉರಮಾರ ಕಸಲಗೆರೆ, ರಾಗಿಮುದ್ದನಹಳ್ಳಿ, ಜಕ್ಕನಹಳ್ಳಿ, ಆಲುಗೂಡು ಕೆರೆಕಟ್ಟೆಗಳಿಗೆ ಲೋಕಪಾವನಿ ನದಿಯಿಂದ ನೀರು ತುಂಬಿಸಲು ಅನುವು ಮಾಡಿಕೊಟ್ಟ ನೆನಪಿಗಾಗಿ ನೀಡಿದ ಗೌರವ ಸಮರ್ಪಣೆಯನ್ನು ಸ್ವೀಕರಿಸಿ ಮಾತನಾಡಿದ ಅವರು, ತಾಲೂಕಿನ ಎಲೆಚಾಕನಹಳ್ಳಿ, ಯಲಿಯೂರು, ಉರಮಾರ ಕಸಲಗೆರೆ, ರಾಗಿಮುದ್ದನಹಳ್ಳಿ, ಜಕ್ಕನಹಳ್ಳಿ, ಆಲುಗೂಡು ಕೆರೆಕಟ್ಟೆಗಳಿಗೆ ಲೋಕಪಾವನಿ ನದಿಯಿಂದ ನೀರು ಹರಿಸಿ ಕೆರೆಕಟ್ಟೆ ತುಂಬಿಸುವ ಯೋಜನೆ ಸಂಪೂರ್ಣವಾಗಿದೆ. ಇಷ್ಟು ವರ್ಷ ಕಳೆದ ಮೇಲೆ ಯೋಜನೆಯು ಲೋಕಾರ್ಪಣೆಯಾಗಿದೆ. ಇನ್ನೂ ಬೇಗ ಆಗಿದ್ದರೆ ಈ ಭಾಗದ ಜನರಿಗೆ ಮತ್ತಷ್ಟು ಅನುಕೂಲವಾಗುತ್ತಿತ್ತು ಎಂದರು.



ಲೋಕಪಾವನಿ ಕೆರೆಗೆ ಮಂಗಳವಾರ ಸಂಸದ ಬಸವರಾಜ ಬೊಮ್ಮಾಯಿ ಬಾಗಿನ ಅರ್ಪಿಸಿದರು. ಸುತ್ತೂರು ಮತ್ತು ಆದಿಚುಂಚನಗಿರಿ ಶ್ರೀಗಳು, ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯ ಸ್ವಾಮಿ ಉಪಸ್ಥಿತರಿದ್ದರು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಜಿಲ್ಲೆಯಲ್ಲಿ ಕೃಷಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಯುವ ರೈತರು ಆರ್ಥಿಕವಾಗಿ ಸದೃಢವಾಗಲು ಶಕ್ತಿ ತುಂಬುವ ಕೆಲಸ ಕಾರ್ಯಗಳನ್ನು ಮಾಡುತ್ತೇವೆ. ತಾಲೂಕಿನ ತೂಬಿನಕೆರೆ ಗ್ರಾ.ಪಂ. ವ್ಯಾಪ್ತಿಯ ಸುತ್ತ ಮುತ್ತಲಿನ ಗ್ರಾಮಗಳಿಗೆ ಲೋಕಪಾವನಿ ನದಿಯಿಂದ ಕೆರೆಕಟ್ಟೆಗಳಿಗೆ ನೀರು ತುಂಬಿಸುವ ಮಹತ್ವದ ಕೆಲಸಕ್ಕೆ ನಾಂದಿಯಾಡಿದ ಕೀರ್ತಿ ಬೊಮ್ಮಾಯಿರವರಿಗೆ ಸಲ್ಲುತ್ತದೆ ಎಂದು ಹೇಳಿದರು.


ಸುತ್ತೂರಿನ ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಮಾತನಾಡಿ, ಬೂಕನಕೆರೆ ಗ್ರಾಮ ಪಂಚಾಯತಿ ವ್ಯಾಪ್ತಿಯ 8 ಗ್ರಾಮಗಳಿಗೆ ಎಲೆಚಾಕನಹಳ್ಳಿ ಏತನೀರಾವರಿ ಯೋಜನೆಯಡಿ ಕೆರೆ ಕಟ್ಟೆಗಳಿಗೆ ನೀರು ತುಂಬಿಸುವ ಮಹತ್ವದ ಕೆಲಸವನ್ನು ಮಾಡಿದ್ದರಿಂದ ರೈತರಿಗೆ ಆರ್ಥಿಕವಾಗಿ ಅಭಿವೃದ್ಧಿಯಾಗಲು ಸಾಧ್ಯವಾಗಿದೆ ಎಂದು ಬಸವರಾಜ ಬೊಮ್ಮಾಯಿಯವರ ಕಾರ್ಯವನ್ನು ಶ್ಲಾಘಿಸಿದರು. ಕೃಷ್ಣರಾಜಸಾಗರ ಜಲಾಶಯದಲ್ಲಿ ಬಾಗಿಲು ಅಳವಡಿಸಿರುವುದರಿಂದ ನೀರು ಪೋಲ್ ಆಗದಂತೆ ಮಾಡಲಾಗಿದೆ. ಹಾಗೂ ರೈತರ ಭೂಮಿಗೆ ನೀರಾವರಿ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಹೇಳಿದರು.

ಆದಿಚುಂಚನಗಿರಿ ಮಠಾಧೀಶ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ಬಸವರಾಜ ಬೊಮ್ಮಾಯಿ ನೀರಾವರಿ ಮಂತ್ರಿಯಾಗಿ ರಾಜ್ಯದ ಎಲ್ಲಾ ಭಾಗಗಳಲ್ಲಿ ಅನೇಕ ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡಿದ್ದಾರೆ. ಜಿಲ್ಲೆಯಲ್ಲಿ ರೈತರ ಸಮಸ್ಯೆಗಳಿಗೆ ಸ್ಪಂದಿಸಿ ತೂಬಿನಕೆರೆ ಗ್ರಾ.ಪಂ. ವ್ಯಾಪ್ತಿಯ ಗ್ರಾಮಗಳಾದ ಎಲೆಚಾಕನಹಳ್ಳಿ, ಯಲಿಯೂರು, ಉರಮಾರ ಕಸಲಗೆರೆ, ರಾಗಿಮುದ್ದನಹಳ್ಳಿ, ಜಕ್ಕನಹಳ್ಳಿ, ಆಲುಗೂಡು ಕೆರೆಕಟ್ಟೆಗಳಿಗೆ ಲೋಕಪಾವನಿ ನದಿಯಿಂದ ನೀರು ತುಂಬಿಸಲು ಅನುವು ಮಾಡಿ ರೈತರಿಗೆ ನೆರವು ನೀಡಿದ್ದಾರೆ ಎಂದರು. ಮಾಜಿ ಉಪಮುಖ್ಯ ಮಂತ್ರಿ ಡಾ.ಸಿ.ಎನ್.ಅಶ್ವತ್ಥ್ ನಾರಾಯಣ, ಶಾಸಕ ಎ.ಬಿ.ರಮೇಶ ಬಂಡಿಸಿದ್ದೇಗೌಡ, ಮಾಜಿ ಶಾಸಕಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ, ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶ್ ಗೌಡ ಸೇರಿದಂತೆ ಎಲೆಚಾಕನಹಳ್ಳಿ ಗ್ರಾಮಸ್ಥರು ಉಪಸ್ಥಿತರಿದ್ದರು.

ವಿಜೃಂಭಣೆಯಿಂದ ಜರುಗಿದ ಶ್ರೀಕಾಲಭೈರವೇಶ್ವರ ಸ್ವಾಮಿ ರಥೋತ್ಸವ

ಭಾರತೀನಗರ.ಏ.7– ಇಲ್ಲಿಗೆ ಸಮೀಪದ ಚಿಕ್ಕರಸಿನಕೆರೆ ಗ್ರಾಮದಲ್ಲಿನ ಇತಿಹಾಸ ಪ್ರಸಿದ್ದ ಶ್ರೀಕಾಲಭೈರವೇಶ್ವರ ಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ಜರುಗಿತು.

ಮಂಗಳವಾರ ಸಂಜೆ 4 ಗಂಟೆಗೆ ಆರಂಭಗೊಂಡ ಕಾಲಭೈರವೇಶ್ವರ ಸ್ವಾಮಿ ಮಹಾರಥೋತ್ಸವಕ್ಕೆ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಡಾ.ನಿರ್ಮಲಾ ನಂದನಾಥ ಸ್ವಾಮೀಜಿ, ಚಾಲನೆ ನೀಡಿ, ಸತ್ಯ ಧರ್ಮದಿಂದ ನಡೆದಾಗ ಮಾತ್ರ ನಾವು ಮುಕ್ತಿಕಾಣಲು ಸಾಧ್ಯ. ಹಾಗಾಗಿ ಪ್ರತಿಯೊಬ್ಬರು ದ್ವೇಷ–ಅಸೂಯೆಗಳನ್ನು ಬಿಟ್ಟು ಸನ್ಮಾರ್ಗದಲ್ಲಿ ನಡೆಯಬೇಕು. ಇತಿಹಾಸ ಪ್ರಸಿದ್ದವಾಗಿರುವ ಚಿಕ್ಕರಸಿನಕೆರೆ ಕಾಲಭೈರವೇಶ್ವರಸ್ವಾಮಿ ರಥೋತ್ಸವಕ್ಕೆ ವಿವಿಧ ಕಡೆಗಳಿಂದ ಭಕ್ತಾದಿಗಳು ಆಗಮಿಸಿ ತಮ್ಮ ಕಷ್ಟಕಾರ್ಪಣ್ಯಗಳು ಈಡೇರಿಸುವಂತೆ ಪ್ರಾರ್ಥಿಸಿದ್ದಾರೆ. ಭಕ್ತರ ಇಷ್ಟಾರ್ಥಗಳನ್ನು ಈಡೇರಿಸಲಿ ಎಂದು ನಾನು ಬಸಪ್ಪನಲ್ಲಿ ಪ್ರಾರ್ಥಿಸುತ್ತೇನೆ ಎಂದರು.



ಚಿಕ್ಕರಸಿನಕೆರೆ ಗ್ರಾಮದಲ್ಲಿ ಶ್ರೀಕಾಲಭೈರವೇಶ್ವರ ಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ಜರುಗಿತು.

ರಥೋತ್ಸವಕ್ಕೂ ಮುನ್ನ ಕಾರ್ಕಹಳ್ಳಿ ಬಸವೇಶ್ವರ, ಬುಳ್ಳಕೆಂಪನದೊಡ್ಡಿ ನಿಶಾನಿ ಕಂಭ, ಮುಟ್ಟನಹಳ್ಳಿ ಏಳೂರಮ್ಮ, ಕಾಳಮ್ಮ, ಚಿಕ್ಕರಸಿನಕೆರೆ ಹೊನ್ನಾರತಿ ಪೂಜೆಗಳು, ಛತ್ರಿ–ಚಾಮರಗಳು, ನಂದಿ ಕಂಭಗಳು ರಥದ ಬಳಿಗೆ ಆಗಮಿಸಿದವು. ತುಸು ಹೊತ್ತು ರಥದ ಮುಂಭಾಗ ದುಬ್ಬಾರೆ, ತಮಟೆ, ನಗಾರಿಗಳ ಸದ್ದಿಗೆ ಜನರು ಕುಣಿತ ಹಾಕಿದರು. ನಂತರ ರಥೋತ್ಸವಕ್ಕೆ ಚಾಲನೆ ಸಿಕ್ಕಿತು. ಇದಲ್ಲದೆ ಡೊಳ್ಳುಕುಣಿತ, ಪೂಜಾಕುಣಿತ, ದೊಣ್ಣೆವರಸೆ, ವೀರಗಾಸೆ, ಗಾರುಡಿಗೊಂಬೆಗಳ ಕುಣಿತವನ್ನೂ ಹಮ್ಮಿಕೊಳ್ಳಲಾಗಿತ್ತು. ರಥವನ್ನು ವಿವಿಧ ಬಣ್ಣದ ಬಟ್ಟೆಗಳಿಂದ ಅಲಂಕರಿಸಲಾಗಿತ್ತಲ್ಲದೆ ರಥದ ಮಧ್ಯ ಭಾಗದಲ್ಲಿ ಕಾಲಭೈರವೇಶ್ವರ ಸ್ವಾಮಿ ದೇವರ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿತ್ತು. ಈ ವಿಗ್ರಹ ಹಾಗೂ ರಥವನ್ನು ವಿವಿಧ ಪುಷ್ಪಗಳಿಂದಲೂ ಅಲಂಕರಿಸಲಾಗಿತ್ತು.

ಟ್ರಸ್ಟ್ ಅಧ್ಯಕ್ಷ, ಯಜಮಾನ್ ಶಿವಲಿಂಗೇಗೌಡ ಮಾತನಾಡಿದರು. ಗ್ರಾಮದ ಮಹಿಳೆಯರು ರಸ್ತೆಯುದ್ದಕ್ಕೂ ರಥೋತ್ಸವಕ್ಕೆ ಪೂಜೆಸಲ್ಲಿಸಿದರು. ರಥೋತ್ಸವಕ್ಕೆ ಬಂದಂತಹ ಭಕ್ತಾದಿಗಳಿಗೆ ಪಾನಕ, ಮಜ್ಜಿಗೆಯನ್ನು ವಿತರಣೆ ಮಾಡಿದರು. ರಥದಲ್ಲಿ ಇರಿಸಲಾದ ಶ್ರೀಕಾಲಭೈರವೇಶ್ವರ ಸ್ವಾಮಿ ವಿಗ್ರಹಕ್ಕೆ ಭಕ್ತಾದಿಗಳು ಹಣ್ಣು–ಜವನಗಳನ್ನು ಎಸೆದು ಭಕ್ತಿಪೂರ್ವವಾಗಿ ನಮನ ಸಲ್ಲಿಸಿದರು.

ರಥೋತ್ಸವದ ವೇಳೆ ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಬಂದೋಬಸ್ತನ್ನು ಏರ್ಪಡಿಸಲಾಗಿತ್ತು. ದೇವಾಲಯದ ಅಭಿವೃದ್ಧಿ ಸಮಿತಿಯ ಯಜಮಾನ್ ಶಿವಲಿಂಗೇಗೌಡ, ಪುಟ್ಟರಾಜು, ಚನ್ನೇಗೌಡ, ಅಜ್ಜಹಳ್ಳಿ ಲೋಕೇಶ್, ರಘು, ನಿವೃತ್ತ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸಿ.ಕೆ.ಶಿವಣ್ಣ ಸೇರಿದಂತೆ ಸದಸ್ಯರುಗಳು ಉಪಸ್ಥಿತರಿದ್ದರು.

ನಾಪತ್ತೆಯಾಗಿದ್ದ ಗುತ್ತಿಗೆದಾರ ಶವವಾಗಿ ಪತ್ತೆ



ಶ್ರೀರಂಗಪಟ್ಟಣ, ಏ.7– ನಾಪತ್ತೆಯಾಗಿದ್ದ ಪ್ರಥಮ ದರ್ಜೆ ಗುತ್ತಿಗೆದಾರನ ಶವ ಪಟ್ಟಣ ಸಮೀಪದ ಗಂಜಾಂ ಬಳಿಯ ಕಾವೇರಿ ನದಿ ಮೇಲ್ಸೆತುವೆ ಕೆಳಗೆ ಭಾನುವಾರ ಸಂಜೆ ಪತ್ತೆಯಾಗಿದೆ.

ತಾಲೂಕಿನ ಹುಣಸನಹಳ್ಳಿ ಗ್ರಾಮದ ನಿವಾಸಿ ಪುಟ್ಟಸ್ವಾಮಿ ಎಂಬುವರ ಪುತ್ರ, ಪ್ರಥಮ ದರ್ಜೆ ಗುತ್ತಿಗೆದಾರ ಹೆಚ್.ಪಿ.ಪವನ್ (28) ಸಾವನ್ನಪ್ಪಿದವರು. ಕೋಟ್ಯಾಂತರ ರೂ.ಗಳ ಕಾಮಗಾರಿಗಳನ್ನು ನಡೆಸುತ್ತಿದ್ದ ಈತ ಕಳೆದ 4 ದಿನಗಳ ಹಿಂದೆ ಕೆಲಸ ಇದೆ ಇಂದು ಮನೆಗೆ ಬರುವುದಿಲ್ಲ ಎಂದು ತಿಳಿಸಿ ತೆರಳಿದ್ದರು. ನಂತರ ಆತ ಮನೆಗೆ ವಾಪಸ್ಸಾಗಿರಲಿಲ್ಲ. ಅಲ್ಲದೇ ಮೊಬೈಲ್ ಸ್ವಿಚ್ ಆಫ್ ಆಗಿರುವ ಜೊತೆಗೆ ಸಾಮಾಜಿಕ ಜಾಲತಾಣ ಖಾತೆಗಳೂ ಡಿ–ಆಕ್ಟಿವ್ ಆಗಿದ್ದವು. ಇದರಿಂದ ಆತಂಕಗೊಂಡ ಕುಟುಂಬಸ್ಥರು ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಆದರೆ ಪವನ್ ಅವರ ಬೈಕ್ ಪಟ್ಟಣದ ವೆಲ್ಲೆಸ್ಲಿ ಸೇತುವೆ ಬಳಿ ಪತ್ತೆಯಾಗಿತ್ತು. ಈತ ವೆಲ್ಲೆಸ್ಲಿ ಸೇತುವೆ ಬಳಿ ಕಾವೇರಿ ನದಿಗೆ ಹಾರಿರುವ ಸಾಧ್ಯತೆ ಇದೆ ಎನ್ನಲಾಗಿದ್ದು, ಗಂಜಾಂ ಬಳಿಯ ಕಾವೇರಿ ನದಿ ಮೇಲ್ಸೆತುವೆ ಕೆಳಗೆ ಶವ ಪತ್ತೆಯಾಗಿದೆ. ಈ ವೇಳೆ ದೇಹದ ಮೇಲೆ ಗಾಯಗಳಿರುವುದು ಕಂಡು ಬಂದ ಹಿನ್ನೆಲೆಯಲ್ಲಿ ಕುಟುಂಬಸ್ಥರು ಕೊಲೆ ಶಂಕೆ ವ್ಯಕ್ತಪಡಿಸಿದ್ದಾರೆ. ಸ್ಥಳಕ್ಕಾಗಮಿಸಿದ ಡಿವೈಎಸ್ಪಿ ಯು.ಡಿ.ಕೃಷ್ಣಕುಮಾರ್, ಸಿಪಿಐ ಬಿ.ಜಿ.ಕುಮಾರ್ ಹಾಗೂ ಶ್ರೀರಂಗಪಟ್ಟಣ ಪೊಲೀಸರು ಪರಿಶೀಲಿಸಿ ಶವವನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದರು. ಶ್ರೀರಂಗಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಕ್ರಮ ಶೆಡ್ ತೆರವಿಗೆ ಆಗ್ರಹಿಸಿ ದಲಿತ ಸಂಘಟನೆಗಳ ಬೃಹತ್ ಪ್ರತಿಭಟನೆ

ಕೆ.ಆರ್.ಪೇಟೆ, ಏ.7–ತಾಲೂಕಿನ ಹರಿಹರಪುರ ಗ್ರಾಮದಲ್ಲಿ 2ಎಕರೆ ಗೋಮಾಳದ ಜಮೀನನ್ನು ಎಲ್ಲಾ ಸಮುದಾಯದ ನಿವೇಶನರಹಿತ ಬಡವರಿಗೆ ವಿತರಣೆ ಮಾಡಲು ಮೀಸಲಿಟ್ಟಿರುವ ಜಾಗದಲ್ಲಿ ಬಲಾಢ್ಯರು ಹಾಗೂ ಶ್ರೀಮಂತರು ಅಕ್ರಮವಾಗಿ ಹಾಕಿರುವ ಶೆಡ್ಡುಗಳನ್ನು ಶೀಘ್ರದಲ್ಲಿ ತೆರವುಗೊಳಿಸಬೇಕು. ಸದರಿ ನಿವೇಶನಗಳನ್ನು ಬಡವರಿಗೆ ಮಾತ್ರ ವಿತರಣೆ ಮಾಡಬೇಕು ಎಂದು ಒತ್ತಾಯಿಸಿ ಹರಿಹರಪುರ ವಿಶ್ವಜ್ಞಾನಿ ಡಾ.ಬಿ.ಆರ್. ಅಂಬೇಡ್ಕರ್ ಸೇವಾ ಸಮಿತಿಯ ಸದಸ್ಯರು ಹಾಗೂ ತಾಲೂಕು ದಲಿತಪರ ಸಂಘಟನೆಗಳ ಮುಖಂಡರು ಹಾಗೂ ಹರಿಹರಪುರ ಗ್ರಾಮಸ್ಥರು. ಮಹಿಳೆಯರು ಗ್ರಾಪಂ ಮುಂದೆ ಪ್ರತಿಭಟನೆ ನಡೆಸಿದರು.



ಸದರಿ ನಿವೇಶನಗಳನ್ನು ಬಡವರಿಗೆ ಮಾತ್ರ ವಿತರಣೆ ಮಾಡಬೇಕು ಎಂದು ಒತ್ತಾಯಿಸಿ ತಾಲೂಕು ದಲಿತ ಪರ ಸಂಘಟನೆಗಳ ಗ್ರಾಮಸ್ಥರು, ಮಹಿಳೆಯರು ಹರಿಹರಪುರ ಗ್ರಾ. ಪಂ ಮುಂದೆ ಪ್ರತಿಭಟನೆ ನಡೆಸಿದರು.

ಸದರಿ ನಿವೇಶನವನ್ನು ಆಶ್ರಯ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಅಲ್ಪಸಂಖ್ಯಾತ ಮತ್ತು ಇತರೆ ಹಿಂದುಳಿದ ವರ್ಗದವರು ತೀರಾ ಕಡುಬಡವರಿಗೆ ಹಾಗೂ ನಿವೇಶನ ನೀಡುವಂತೆ ಹಲವು ಬಾರಿ ಒತ್ತಾಯ ಮಾಡುತ್ತಾ ಬಂದಿದ್ದರೂ ಸಹ ಗ್ರಾಮ ಆಡಳಿತ ಮಂಡಳಿಯು ಸಕಾಲದಲ್ಲಿ ಹಂಚಿಕೆ ಮಾಡಿರಲಿಲ್ಲ. ಇದರಿಂದಾಗಿ ಬಲಾಢ್ಯರು ರಾತ್ರೋರಾತ್ರಿ ಸದರಿ ಸರ್ಕಾರಿ ಜಾಗವನ್ನು ಕಬಳಿಸುವ ಹುನ್ನಾರದಿಂದ ತಮಗಿಷ್ಟ ಬಂದಷ್ಟು ಅಳತೆಯ ನಿವೇಶನಗಳಿಗೆ ಶೆಡ್ಡುಗಳನ್ನು ನಿರ್ಮಾಣ ಮಾಡಿರುತ್ತಾರೆ. ಕೆಲವರು ಶಾಶ್ವತ ಮನೆಗಳನ್ನು ನಿರ್ಮಿಸಲು ಸಹ ಮುಂದಾಗಿದ್ದಾರೆ ಎಂದು ಆರೋಪಿಸಿದರು.

ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ತಹಶೀಲ್ದಾರ್ ಡಾ.ಎಸ್.ಯು.ಅಶೋಕ್, ತಾಪಂ ಇಓ ಅಧಿಕಾರಿ ಡಾ.ಕೆ.ಸುಷ್ಮಾ, ಪಿಡಿಓ ನಾಯಿದಾ ಅಖ್ತರ್, ಆಡಳಿತಾಧಿಕಾರಿ ಡಾ.ಹೆಚ್.ಎಸ್. ದೇವರಾಜು ನೇತೃತ್ವದ ಅಧಿಕಾರಿಗಳು ಈಗಾಗಲೇ ಹಲವಾರು ಗುಡಿಸಲು ಶೆಡ್ಡುಗಳನ್ನು ತೆರವುಗೊಳಿಸಲಾಗಿದೆ. ಉಳಿದ 9ಶೆಡ್ಡುಗಳ ವ್ಯಕ್ತಿಗಳು ಹಾಕಿದ್ದ ಕಬ್ಬಿಣದ ಕಂಬಗಳು, ಶೀಟುಗಳು, ಮೇಲ್ಛಾವಣಿಗಳನ್ನು ನಾಶಪಡಿಸಬೇಡಿ, ನಾವೇ ಬಿಚ್ಚಿಕೊಳ್ಳುತ್ತೇವೆ ಒಂದೆರಡು ದಿನಗಳ ಕಾಲಾವಕಾಶ ನೀಡುವಂತೆ ಮನವಿ ಮಾಡಿಕೊಂಡಿರುತ್ತಾರೆ. ಮಾನವೀಯ ದೃಷ್ಟಿಯಿಂದ ಮೂರು ದಿನಗಳ ಕಾಲ ಬೆಲೆ ಬಾಳುವ ಕಬ್ಬಿಣದ ಕಂಬಗಳು, ಮೇಲ್ಛಾವಣಿಗಳನ್ನು ಬಿಚ್ಚಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಶುಕ್ರವಾರ ಬೆಳಿಗ್ಗೆ 10ಗಂಟೆಯಿಂದಲೇ ಪೂರ್ಣವಾಗಿ ತೆರವುಗೊಳಿಸಿ ನಿವೇಶನ ಹಂಚಿಕೆಗೆ ಸೂಕ್ತ ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದರು. ಶುಕ್ರವಾರ ತೆರವು ಮಾಡದೇ ಇದ್ದಲ್ಲಿ ತಾಪಂ ಕಚೇರಿಯ ಮುಂದೆ ಅನಿರ್ದಿಷ್ಟಾವಧಿ ಬೃಹತ್ ತಮಟೆ ಚಳುವಳಿ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ತಾಲೂಕು ದಲಿತ ಸಂಘಟನೆಗಳ ಮುಖಂಡರಾದ ನರಸಿಂಹ, ಹೆಚ್.ಎಸ್. ಶರ್ಮ, ರಾಜಮ್ಮ, ಚೆಲುವರಾಜು, ರಂಗರಾವು, ದೇವರಾಜು, ಡಿ.ಪ್ರೇಮಕುಮಾರ್, ಬಿ.ಜಿ.ಗಿರೀಶ್, ತಾಲೂಕು ಛಲವಾದಿ ಮಹಾಸಭಾ ಅಧ್ಯಕ್ಷ ಊಚನಹಳ್ಳಿ ನಟರಾಜ್, ರಾಜಯ್ಯ, ಸೋಮಸುಂದರ್, ಚೌಡೇನಹಳ್ಳಿ ದೇವರಾಜು, ಎನ್.ಜೆ. ಮಂಜು, ಲಕ್ಷ್ಮೀಪುರ ರಂಗಸ್ವಾಮಿ, ಬಂಡಿಹೊಳೆ ರಮೇಶ್, ತೆಂಡೇಕೆರೆ ನಿಂಗಯ್ಯ, ಜೆಡಿಎಸ್ ಗಂಗಾಧರ್, ಕಳ್ಳನಕೆರೆ ಶಂಕರ್, ನಾರಾಯಣ್ ಪ್ರತಿಭಟನಾಕಾರರಿದ್ದರು.

ಮೂರನೇ ಪುಟದಿಂದ

ಇತ್ತ ಶೇ.25ರಷ್ಟು ನೀರಿನ ದರ ಏರಿಕೆ!!



ಒಡೆದು ಅಲ್ಲಿ ಕೂಡ ಪ್ರತಿದಿನ ಲಕ್ಷಾಂತರ ಲೀಟರ್ ನೀರು ಪೋಲಾಗುತ್ತಿದೆ. ಇದಲ್ಲದೆ ವಿಜಯನಗರ ವಾಟರ್ ಟ್ಯಾಂಕ್ ಕಾಂಪೌಂಡ್ ಹಿಂಭಾಗದಲ್ಲಿ ಪೈಪ್ ಒಡೆದು ನೀರು ಚರಂಡಿ ಪ್ರತಿ ನಿಮಿಷಕ್ಕೆ 80 ಲೀಟರ್ ನೀರು ಪೋಲಾಗುತ್ತಿದೆ. ಈ ಪ್ರಕಾರ ಒಂದು ಕನಿಷ್ಟ 1.50 ಲಕ್ಷ ಲೀಟರ್ ನೀರು ಸೋರಿಕೆಯಾಗಿ ಚರಂಡಿ ಸೇರುತ್ತಿದೆ. ಈ ಸಂಬಂಧ 2025ರಲ್ಲಿ ಆದಿಪಂಪ ರಸ್ತೆಯಲ್ಲಿರುವ ವಾಣಿ ವಿಲಾಸ ನೀರು ಸರಬರಾಜು ಕಾರ್ಯಾಗಾರದ ಕಚೇರಿಗೆ ಲಿಖಿತ ದೂರು ನೀಡಿದ್ದಾರೆ. ಅಲ್ಲದೆ ಹತ್ತಾರು ಬಾರಿ ಕಚೇರಿಗೆ ಹೋಗಿ ಮೌಖಿಕವಾಗಿ ಕೂಡ ದೂರು ಹೇಳಿದ್ದಾರೆ.

ಬಹಳಷ್ಟು ಕಡೆ ಕುಡಿಯುವ ನೀರಿಗಾಗಿ ಜನರು ಪರಿತಪ್ಪಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಕುಡಿಯುವ ನೀರು ವ್ಯರ್ಥವಾಗದಂತೆ ತಡೆಯಿರಿ ಎಂದು ಎಷ್ಟೆ ವಿನಂತಿಸಿದರೂ ಈ ತನಕ ಇದನ್ನು ರಿಪೇರಿ ಮಾಡುವ ಗೋಜಿಗೆ ಹೋಗಿಲ್ಲ. ಕನಿಷ್ಟ ಪಕ್ಷ ಇಲ್ಲಿ ಏನಾಗುತ್ತಿದೆ ಎಂದು ಪರಿಶೀಲನೆ ನಡೆಸದೆ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದಾರೆ ಎಂದು ಸ್ಥಳಿಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕುಡಿಯುವ ನೀರಿನ ವ್ಯರ್ಥ ಇದೊಂದು ಸ್ಥಳಕ್ಕೆ ಸೀಮಿತವಾಗಿಲ್ಲ. ದೀಪದ ಕೆಳಗೆ ನೆರಳು ಎಂಬಂತೆ ವಾಣಿ ವಿಲಾಸ ನೀರು ಸರಬರಾಜು ಕಾರ್ಯಾಗಾರದ ಎದುರಿನ ಚೆಲುವಾಂಬ ಪಾರ್ಕ್ ಮುಂಭಾಗ ವಾಲ್ವ್ ಪಾಲಾಗುತ್ತಿದೆ. ಇದೇ ವಾಟರ್ ಟ್ಯಾಂಕ್ ಮುಂಭಾಗ ಸಬ್ ರಿಜಿಸ್ಟ್ರಾರ್ ಕಚೇರಿ ಎದುರು ಕೂಡ ಪೈಪ್ ಒಡೆದು ರಸ್ತೆಯಲ್ಲಿ ನೀರು ಧಾರಾಕಾರವಾಗಿ ಹರಿಯುತ್ತಿದೆ. ಇದರಿಂದ ಆಗಿರುವ ಹಳ್ಳಕ್ಕೆ ಬಿದ್ದು ವಾಹನ ಸವಾರರು ಅಪಘಾತಕ್ಕೀಡಾಗದಂತೆ ಪೊಲೀಸರು ಬ್ಯಾರಿಕೇಡ್ ನಿಲ್ಲಿಸಿದ್ದಾರೆ.

ನಗರದ ರಾಮಸ್ವಾಮಿ ವೃತ್ತ, ಬನ್ನಿ ಮಂಟಪ ಎ–ಬಡಾವಣೆ ಸೇರಿದಂತೆ ಬಹಳಷ್ಟು ಸ್ಥಳಗಳಲ್ಲಿ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ಎಲ್ಲಾ ಕಡೆ ಪೈಪ್ ಒಡೆದು, ವಾಲ್ವ್ ಹಾನಿಗೊಳಗಾಗಿ ಲಕ್ಷಾಂತರ ಲೀಟರ್ ನೀರು ಚರಂಡಿ ಸೇರುತ್ತಿದೆ. ಆದರೆ ಇದನ್ನು ರಿಪೇರಿ ಮಾಡಿ ನೀರು ವ್ಯರ್ಥವಾಗುವುದನ್ನು ತಡೆಯಲು ಈ ತನಕ ಅಧಿಕಾರಿಗಳು ಮುಂದಾಗಿಲ್ಲ.

ಇಷ್ಟೆಲ್ಲಾ ಲೋಪವಿರುವಾಗ ಇದನ್ನು ಸರಿಪಡಿಸದೆ ನೀರಿನ ಕರವನ್ನು ಶೇಕಡ 25 ರಷ್ಟು ಪರಿಷ್ಕರಣೆ ಮಾಡಿದ್ದಾರೆ. ತಮ್ಮ ಬೇಜವಾಬ್ದಾರಿಯಿಂದ ಆಗುತ್ತಿರುವ ನಷ್ಟವನ್ನು ಜನ ಸಾಮಾನ್ಯರ ಮೇಲೆ ಹೊರೆಸುತ್ತಿದ್ದಾರೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಎತ್ತರದ ಕಟ್ಟಡಕ್ಕೆ ನಿರ್ಬಂಧ

ಯಾವುದೇ ಕಟ್ಟಡ ಅಥವಾ ನಿರ್ಮಾಣವನ್ನು ಮಾಡುವಂತಿಲ್ಲ ಎಂದು ಎಎಐನಿಂದ ಸ್ಪಷ್ಟನೆ ನೀಡಿದೆ. ಎತ್ತರದ ನಿರ್ಬಂಧಗಳನ್ನು ಉಲ್ಲಂಘಿಸಿದ್ದಲ್ಲಿ (ಕಟ್ಟಡಗಳು ಮತ್ತು ಮರಗಳು ಇತ್ಯಾದಿಗಳಿಂದ ಉಂಟಾಗುವ ಅಡೆತಡೆಗಳನ್ನು ನೆಲಸಮಗೊಳಿಸುವುದು) 1994ರ ಅಡಿಯಲ್ಲಿ ನೆಲಸಮಕ್ಕೆ ಒಳಪಟ್ಟಿರುತ್ತದೆ. ಎಎಐ ಎನ್‌ಓಸಿ ಇಲ್ಲದೆ ಕೆಂಪು ವಲಯದಲ್ಲಿ ಪುರಸಭೆ ಮತ್ತು ಪಟ್ಟಣ ಯೋಜನಾ ಅಧಿಕಾರಿಗಳು ಅನುಮೋದನೆ ನೀಡುವುದು ಊರ್ಜಿತವಾಗುವುದಿಲ್ಲ.

ಎಎಐನಿಂದ ಸಾರ್ವಜನಿಕರಲ್ಲಿ ಮನವಿ: ಎಲ್ಲಾ ಕಟ್ಟಡ ಯೋಜನೆಗಳು ಅಡಚಣೆ ಮಿತಿ ಮೇಲ್ಮೈ (ಅಬ್‌ಸ್ಟ್ರಕ್ಷನ್ ಲಿಮಿಟೇಷನ್ ಸರ್ಫೇಸ್)ಗೆ ಅನುಗುಣವಾಗಿ ಇರುವುದನ್ನು ಖಚಿತಪಡಿಸಿಕೊಳ್ಳುವಲ್ಲಿ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಿಂದ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರವು ಸಂಪೂರ್ಣ ಸಹಕಾರ ಬಯಸಲಿದೆ. ಮೈಸೂರು ವಿಮಾನ ನಿಲ್ದಾಣದಲ್ಲಿ ಕಾರ್ಯಾಚರಣೆಗಳು ಮತ್ತು ಪ್ರಯಾಣಿಕರ ಸುರಕ್ಷತೆಗಾಗಿ ಈ ಕ್ರಮ ಅತ್ಯಗತ್ಯವೂ ಆಗಿದೆ.

ಎನ್‌ಓಸಿ ಪಡೆಯುವುದ್ಹೇಗೆ: ಹೆಚ್ಚಿನ ವಿವರ ಹಾಗೂ ಎತ್ತರಕ್ಕೆ ಸಂಬಂಧಿಸಿ ದಂತೆ ಎನ್‌ಓಸಿ ಪಡೆಯಲು ಅರ್ಜಿ ಸಲ್ಲಿಸಲು https://nocas2. aai.aero ಇಲ್ಲಿಗೆ ಭೇಟಿ ನೀಡ ಬಹುದು. ಅಥವಾ ಮೈಸೂರು ವಿಮಾನ ನಿಲ್ದಾಣದ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬಹುದು ಎಂದು ಎಎಐ ಪ್ರಕಟಣೆಯಲ್ಲಿ ತಿಳಿಸಿದೆ.

ಕಾಮಗಾರಿ 15 ದಿನದಲ್ಲಿ ಆರಂಭ

ಪಾರಂಪರಿಕತೆ ಹಾಗೂ ಪರಿಸರ ಕಾಳಜಿ ಇಟ್ಟುಕೊಂಡು ಕೆಲಸ ಮಾಡಲಿದ್ದೇವೆ. ಪರಿಸರಕ್ಕೆ ಧಕ್ಕೆ ಆಗದಂತೆ ಮುಂಜಾಗ್ರತೆ ವಹಿಸಲು ಗಮನ ಹರಿಸಲಾಗಿದೆ. ಕಾಮಗಾರಿ ನಡೆಯುವ ಸ್ಥಳದಲ್ಲಿರುವ ಎಲ್ಲಾ ಮರಗಳನ್ನು ಬೇರೆಡೆಗೆ ಸ್ಥಳಾಂತರಿಸಲಾಗುವುದು. ಜೊತೆಗೆ ಕುಕ್ಕರಹಳ್ಳಿ ರೈಲ್ವೆ ಕ್ರಾಸಿಂಗ್ ಟಾಂಗಾ ಚೌಕ ಶಿಫ್ಟ್ ಆಗಲಿದೆ ಎಂದರು.

ಮರಗಳ ಸಂರಕ್ಷಣೆ: ಮೈಸೂರು–ಬೆಂಗಳೂರು ಹೆದ್ದಾರಿಯ ಮಣಿಪಾಲ್ ಜಂಕ್ಷನ್ ಬಳಿಯ ಫ್ಲೈ ಓವರ್ ನಿರ್ಮಾಣ ಕಾಮಗಾರಿಗೂ ವೇಗ ಸಿಕ್ಕಿದೆ. ಆ ಭಾಗದಲ್ಲಿರುವ ಸುಮಾರು 40 ಮರಗಳನ್ನು ಬೇರೆಡೆಗೆ ಸ್ಥಳಾಂತರ ಮಾಡಲಾಗುತ್ತದೆ. ಇನ್ನು ಮುಂದೆ ಯಾವುದೇ ಕಾಮಗಾರಿ ನಡೆಸಿದರೂ ಪರಿಸರಕ್ಕೆ ಪೂರಕವಾಗುವಂತೆ ನೋಡಿಕೊಳ್ಳಲಾಗುವುದು ಎಂದು ವಿವರಿಸಿದರು.

ಚಾ.ಬೆಟ್ಟದಲ್ಲಿ ಅಧಿಕಾರಿಗಳ ದರ್ಬಾರು: ಚಾಮುಂಡಿ ಬೆಟ್ಟದಲ್ಲಿ ಅಧಿಕಾರಿಗಳ ದರ್ಬಾರು ನಡೆಯುತ್ತಿದೆ. ಚಾಮುಂಡಿ ಬೆಟ್ಟ ಪ್ರಾಧಿಕಾರ ರಚನೆ ವಿಚಾರ ನ್ಯಾಯಾಲಯದಲ್ಲಿದೆ. ಇಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಯಾರ ಮಾತಿಗೂ ಬೆಲೆ ಕೊಡುತ್ತಿಲ್ಲ. ಈ ಬಗ್ಗೆ ವ್ಯಾಪಕ ದೂರುಗಳು ಕೇಳಿ ಬಂದಿವೆ. ಸ್ಥಳೀಯ ಆಡಳಿತ ಹಾಗೂ ಅಲ್ಲಿನ ನಿವಾಸಿಗಳ ಮಾತಿಗೂ ಪ್ರಾಧಿಕಾರದ ಅಧಿಕಾರಿಗಳು ಬೆಲೆ ಕೊಡುತ್ತಿಲ್ಲ. ಸ್ಥಳೀಯ ನಿವಾಸಿಗಳ ಸಮಸ್ಯೆಗಳಿಗೂ ಸ್ಪಂದಿಸುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅವೈಜ್ಞಾನಿಕ ಸಿಗ್ನಲ್ ಅಳವಡಿಕೆ: ಮೈಸೂರಿನ ಹಲವೆಡೆ ಎಲ್ಲೆಂದರಲ್ಲಿ ಸಿಗ್ನಲ್ ಅಳವಡಿಸಿರುವುದಕ್ಕೆ ಸಾರ್ವಜನಿಕ ವಲಯದಲ್ಲಿ ಭಾರೀ ವಿರೋಧ ವ್ಯಕ್ತವಾಗಿದೆ. ಯಾವ ತಜ್ಞರ ಅಭಿಪ್ರಾಯ ಪಡೆದು ಸಿಗ್ನಲ್ ಅಳವಡಿಸಿದ್ದೀರಿ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕೆಲವೇ ಮೀಟರ್‌ಗಳ ಅಂತರದಲ್ಲಿ ಅವೈಜ್ಞಾನಿಕವಾಗಿ ಸಿಗ್ನಲ್ ಲೈಟ್ ಅಳವಡಿಸಿರುವುದರಿಂದ ವಾಹನ ಸವಾರರಿಗೆ ಬಹಳ ತೊಂದರೆಯಾಗುತ್ತಿದೆ. ಅನಗತ್ಯವಾಗಿ ವಿಳಂಬವಾಗುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ತವರು ಜಿಲ್ಲೆಯಲ್ಲಿ ಅಧಿಕಾರಿಗಳ ದರ್ಬಾರು ನಡೆಯುತ್ತಿದೆ. ಜನಪ್ರತಿನಿಧಿಗಳ ಮಾತಿಗೆ ಬೆಲೆಯೇ ಇಲ್ಲದಂತಾಗಿದೆ ಎಂದು ಕಿಡಿಕಾರಿದರು.

20 ಲಕ್ಷ ಮೌಲ್ಯದ 220 ಮೊಬೈಲ್ ಪತ್ತೆ

ಕಳುವು ಮಾಡಿದರೂ ಅದನ್ನ ಬಳಸಲು ಸಾಧ್ಯವಿಲ್ಲ. ಬೇರೆ ಸಿಮ್ ಅಳವಡಿಸಲು ಆ ಮೊಬೈಲ್‌ನಲ್ಲಿ ಅವಕಾಶವಾಗದು. ಈ ಬಗ್ಗೆ ತಿಳುವಳಿಕೆ ಇಲ್ಲದಿದ್ದರೆ ಸನಿಹದ ಪೊಲೀಸ್ ಠಾಣೆಯಿಂದ ಮಾಹಿತಿ ಪಡೆಯಿರಿ ಎಂದು ಸೀಮಾ ಲಾಟ್ಕರ್ ಅವರು ಸಲಹೆ ನೀಡಿದರು.

ನಾಗರಿಕತೆಯ ಸರ್ವನಾಶ ಮಾಡ್ತೇವೆ!

ದಾಳಿ ಕುರಿತು ಟ್ರಂಪ್ ಹೆಚ್ಚಿನ ವಿವರ ನೀಡಿಲ್ಲ. ಆದರೆ ಇರಾನ್‌ನ ಮೂಲಸೌಕರ್ಯಗಳು, ವಿದ್ಯುತ್ ಸ್ಥಾವರಗಳು ಹಾಗೂ ಸೇತುವೆಗಳು ಅಮೆರಿಕದ ಗುರಿಯಾಗಲಿದೆ ಎಂದು ಅಂದಾಜಿಸಲಾಗಿದೆ. ಮತ್ತೊಂದೆಡೆ ಹೊರ್ಮುಜ್ ಜಲಸಂಧಿ ಮುಕ್ತಗೊಳಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿದ ಗಡುವು ಸಮೀಪಿಸುತ್ತಿರುವಂತೆಯೇ, ಅಮೆರಿಕದ ಬೆದರಿಕೆ ತಾನು ಜಗ್ಗುವುದಿಲ್ಲ ಎಂದು ಇರಾನ್ ಪುನರುಚ್ಚರಿಸಿದೆ.

ವಿಶೇಷ ಕಾಯ್ದೆಯಡಿ ಪ್ರಕರಣ ದಾಖಲು

ಇರ್ಫಾನ್ ಪಾಷ ಅಲಿಯಾಸ್ ಬಟಾಣಿ ಬಂಧಿತ ಆರೋಪಿಯಾಗಿದ್ದಾನೆ ಎಂದು ತಿಳಿಸಿದ್ದಾರೆ. ಇರ್ಫಾನ್ ಪಾಷ 19 ನೇ ವಯಸ್ಸಿನಿಂದ ಮಾದಕ ವಸ್ತುಗಳ ಸಂಗ್ರಹ, ಮಾರಾಟ ಮತ್ತು ಸಾಗಣೆ ಮಾಡುತ್ತಿದ್ದನು. ಈತನ ವಿರುದ್ಧ 2014 ರಿಂದ ಇಲ್ಲಿಯವರೆಗೆ ಎನ್ ಡಿಪಿಎಸ್ ಕಾಯ್ದೆಯಡಿ 9 ಪ್ರಕರಣ ದಾಖಲಾಗಿತ್ತು. ಈತನಿಂದ 28 ಗಾಂಜಾ ವಶಪಡಿಸಿಕೊಳ್ಳಲಾಗಿತ್ತು. ಮೂರು ಪ್ರಕರಣಗಳಲ್ಲಿ ಇರ್ಫಾನ್ ಪಾಷ ಶಿಕ್ಷೆಯಾಗಿತ್ತು ಎಂದು ಸೀಮಾ ಲಾಟ್ಕರ್ ಮಾಹಿತಿ ನೀಡಿದರು.

ಇವನ ಅಕ್ರಮ ಚಟುವಟಿಕೆ ತಡೆಗಟ್ಟಲು ರೌಡಿ ಶೀಟ್ ಕೂಡ ತೆರೆಯಲಾಗಿತ್ತು. ಅಲ್ಲದೆ ಭದ್ರತಾ ಪ್ರಕರಣ ಕೂಡ ದಾಖಲಾಗಿತ್ತು. ಆದರೂ ಬಂಧನವಾದ ನಂತರ ನ್ಯಾಯಾಲಯದಿಂದ ಷರತ್ತು ಬದ್ಧ ಜಾಮೀನು ಪಡೆದು ಹೊರ ಬಂದು ಮತ್ತದೆ ಮಾದಕ ವಸ್ತು ಮಾರಾಟ ಕೃತ್ಯ ಎಸಗುತ್ತಿದ್ದನು ಎಂದು ತಿಳಿಸಿದರು.

ಇವನ ವಿರುದ್ಧ ಎನ್ ಡಿಪಿಎಸ್ ಕಾಯ್ದೆಯಡಿ ಕ್ರಮ ಕೈಗೊಂಡಿದ್ದರೂ ಅಕ್ರಮ ಚಟುವಟಿಕೆಯಲ್ಲಿ ತೊಡಗಿದ್ದನು. ಈ ಹಿನ್ನೆಲೆಯಲ್ಲಿ ಈಗ ಅಕ್ರಮ ಚಟುವಟಿಕೆಗಳನ್ನು ನಿಯಂತ್ರಣದಲ್ಲಿಡಲು ಮೈಸೂರಿನಲ್ಲಿ ಇದೇ ಮೊದಲ ಬಾರಿಗೆ ವಿಶೇಷ ಕಾನೂನು ಪಿಐಟಿ ಎನ್ ಡಿಪಿಎಸ್ 1988 ಕಾಯ್ದೆಯಡಿ ಪ್ರಕರಣ ದಾಖಲಿಸಿ ಬಳ್ಳಾರಿ ಜೈಲಿಗೆ ಕಳುಹಿಸಲಾಗಿದೆ. ಈ ಪ್ರಕರಣ ದಾಖಲಾಗಿರುವುದರಿಂದ ಇರ್ಫಾನ್ ಪಾಷಾಗೆ ಸುಲಭವಾಗಿ ಜಾಮೀನು ದೊರೆಯುವುದಿಲ್ಲ ಎಂದು ಹೇಳಿದರು.

ಇನ್ನು ಮುಂದೆ ಯಾರಾದರೂ ಮಾದಕ ವಸ್ತುಗಳ ಸಂಗ್ರಹ, ಮಾರಾಟ ಹಾಗೂ ಸಾಗಾಣಿಕೆ ಕೃತ್ಯದಲ್ಲಿ ತೊಡಗಿದರೆ ಇದೇ ಪ್ರಕರಣ ದಾಖಲಿಸಲಾಗುವುದು ಎಂದು ಸೀಮಾ ಲಾಟ್ಕರ್ ಎಚ್ಚರಿಸಿದರು.

ಯುದ್ಧ ಭೂಮಿಯಲ್ಲಿ ಮಕ್ಕಳು; ಅಮೆರಿಕ ವಿರುದ್ಧ ಇರಾನ್ ತಂತ್ರ

ಟೆಹರಾನ್, ಏ.7– ಹೊರ್ಮುಜ್ ಜಲಸಂಧಿಯ ಮೇಲಿನ ಹಿಡಿತವನ್ನು ಸಡಿಲಿಸದೇ ಇದ್ದರೆ ಭೀಕರ ದಾಳಿ ನಡೆಸುವುದಾಗಿ ಅಮೆರಿಕ ಇರಾನ್‌ಗೆ ಎಚ್ಚರಿಕೆ ನೀಡಿದೆ. ಈ ನಡುವೆ ಇರಾನ್‌ನ 1.4 ಕೋಟಿ ಜನರು ಪ್ರಾಣತ್ಯಾಗಕ್ಕಾಗಿ ಸಿದ್ಧ ಎಂದು ಅಧ್ಯಕ್ಷ ಮಸೂದ್ ಪೆಜೆಶ್ಕಿಯನ್ ಹೇಳಿಕೆ ನೀಡಿದ್ದಾರೆ.

ಕೆಲವು ದಿನಗಳ ಹಿಂದೆ ರಾಜ್ಯ ವಾಹಿನಿಯ ಮೂಲಕ ಮತ್ತು ಲಿಖಿತ ಸಂದೇಶಗಳಲ್ಲಿ ಸ್ವಯಂ ಪ್ರೇರಿತವಾಗಿ ಯುದ್ಧದಲ್ಲಿ ಪಾಲ್ಗೊಳ್ಳುವಂತೆ ನಾಗರಿಕರಿಗೆ ಕರೆ ನೀಡಲಾಗಿತ್ತು. ಸರ್ಕಾರ ಕೂಡ ನಿವೃತ್ತ ಯೋಧರ ಬಳಿ ಅಮೆರಿಕದ ವಿರುದ್ಧ ಹೋರಾಡಲು ಕೈಜೋಡಿಸುವಂತೆ ಕೇಳಿಕೊಂಡಿತ್ತು.

ಯುದ್ಧದಲ್ಲಿ ಭಾಗಿಯಾಗುತ್ತಿರುವ ಮಕ್ಕಳು: ಇರಾನ್‌ನ ಅರೆಸೈನಿಕ ಕ್ರಾಂತಿಕಾರಿ ಪಡೆ 12 ವರ್ಷದ ಮಕ್ಕಳಿಗೂ ಯುದ್ಧದಲ್ಲಿ ಪಾಲ್ಗೊಳ್ಳಲು ಅವಕಾಶ ನೀಡುತ್ತಿದೆ ಎಂದು ವರದಿಯಾಗಿದೆ. ಈ ಕ್ರಮಕ್ಕೆ ಕಿಡಿಕಾರಿರುವ ಲಂಡನ್ ಮೂಲದ ಮಾನವ ಹಕ್ಕುಗಳ ಅಂತರರಾಷ್ಟ್ರೀಯ ಸಂಸ್ಥೆ ಆಮ್ನೆಸ್ಟಿ ಇಂಟರ್‌ನ್ಯಾಷನಲ್, ಕೆಲವು ಮಕ್ಕಳು ಶಸ್ತ್ರಾಸ್ತ್ರಗಳನ್ನೂ ಹಿಡಿದುಕೊಂಡಿದ್ದಾರೆ. ಇದು ಯುದ್ಧಾಪರಾಧ ಎಂದು ಹೇಳಿದೆ. ಅರೆಸೈನಿಕ ಪಡೆಯ ಸಾಂಸ್ಕೃತಿಕ ಅಧಿಕಾರಿ ರಹೀಮ್ ನಾಡೆಲಿ ಈ ಬಗ್ಗೆ ಮಾತನಾಡಿ, ಮಕ್ಕಳನ್ನು ಗಸ್ತು ತಿರುಗುವುದು, ಚೆಕ್‌ಪಾಯಿಂಟ್ ಮತ್ತು ಲಾಜಿಸ್ಟಿಕ್‌ಗಳಲ್ಲಿ ಮಾತ್ರ ನೇಮಿಸಲಾಗುತ್ತಿದೆ. ಮಕ್ಕಳನ್ನು ಮಿಲಿಟರಿ ಕಾರ್ಯದಲ್ಲಿ ಬಳಸಿಕೊಳ್ಳುವುದಕ್ಕೆ ನಿಷೇಧವಿದೆ ಎಂದಿದ್ದಾರೆ. ಯುದ್ಧದಲ್ಲಿ ಭಾಗಿಯಾಗಲು ಮುಂದೆ ಬರುತ್ತಿರುವವರ ಸಂಖ್ಯೆ ಕಡಿಮೆಯಿದೆ. ಆದರೆ ಮಕ್ಕಳು ಯುದ್ಧದಲ್ಲಿ ಭಾಗವಹಿಸಲು ಕೇಳುತ್ತಿರುವುದರಿಂದ ವಯಸ್ಸಿನ ಮಿತಿಯನ್ನು12ಕ್ಕೆ ಇಳಿಸಲಾಗಿದೆ. ಮಕ್ಕಳು ಎಲ್ಲಿ ಕೆಲಸ ಮಾಡಲು ಇಚ್ಛಿಸುತ್ತಾರೋ ಅಲ್ಲಿ ನಿಯೋಜಿಸಲಾಗುವುದು ಎಂದೂ ಅವರು ತಿಳಿಸಿರುವುದಾಗಿ ಮಾಧ್ಯಮಗಳ ವರದಿ ತಿಳಿಸಿದೆ. ಮಕ್ಕಳನ್ನು ಯುದ್ಧದಲ್ಲಿ ಮುಂಚೂಣಿ ಸೈನಿಕರಂತೆಯೇ ನೇಮಿಸಲಾಗುತ್ತಿದೆ ಎಂದು ಹಲವು ಮಾಧ್ಯಮಗಳ ವರದಿ ತಿಳಿಸಿವೆ.

ದಾಳಿ ತಡೆಗೆ ಮಾನವ ಸರಪಳಿ: ಅಮೆರಿಕ ವಿದ್ಯುತ್ ಸ್ಥಾವರಗಳ ಮೇಲೆ ದಾಳಿ ನಡೆಸುವ ಎಚ್ಚರಿಕೆ ನೀಡಿರುವ ಹಿನ್ನೆಲೆ ಮಾನವ ಸರಪಳಿಯಂತೆ ನಿಲ್ಲುವಂತೆ ನಾಗರಿಕರಿಗೆ ಇರಾನ್ ಸರ್ಕಾರ ಕರೆ ನೀಡಿದೆ. ನಾವೆಲ್ಲರೂ ಕೈಗೆ ಕೈ ಜೋಡಿಸಿ ನಿಲ್ಲೋಣ, ಸಾರ್ವಜನಿಕ ಆಸ್ತಿಗಳ ಮೇಲೆ ದಾಳಿ ನಡೆಸುವುದು ಯುದ್ಧಾಪರಾಧ ಎನ್ನುವುದನ್ನು ಸಾರೋಣ ಎಂದು ಇರಾನ್‌ನ ಯುವ ಮತ್ತು ಕ್ರೀಡಾ ಸಚಿವಾಲಯದ ಉಪ ಸಚಿವ ಅಲಿರೆಜಾ ರೆಹಿಮಿ ಹೇಳಿದ್ದಾರೆ. ಈ ಮೂಲಕ ಅಮೆರಿಕದ ಎಂಥಹದ್ದೇ ದಾಳಿಗೂ ನಾವು ಹೆದರುವುದಿಲ್ಲ, ಇರಾನ್‌ನ ಜನ ಪ್ರಾಣ ತ್ಯಾಗಕ್ಕೂ ಸಿದ್ಧರಿದ್ದಾರೆ ಎಂಬ ಸಂದೇಶವನ್ನು ಸಾರಲು ಮುಂದಾಗಿದೆ ಇರಾನ್.

ಅಧಿಕಾರ ಹಂಚಿಕೆ ವಿಚಾರದಲ್ಲಿ ನನ್ನ, ಸಿಎಂ ಹೇಳಿಕೆ ಮಾತು ಮಾತ್ರ ಮಾನ್ಯ; ಉಳಿದವರದ್ದು ಗೌಣ

- ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಷ್ಟನೆ
- ಸಿದ್ದರಾಮಯ್ಯ 2028ರವರೆಗೂ ಸಿಎಂ ಆಗಿರುತ್ತಾರೆ ಎಂಬ ಡಾ.ಪರಮೇಶ್ವರ್ ಹೇಳಿಕೆಗೆ ಪ್ರತಿಕ್ರಿಯಿಸಲು ನಕಾರ



ಬೆಂಗಳೂರು, ಏ.7(ಕೆಎಂಶಿ)–ನಾನು ಕಾಂಗ್ರೆಸ್ ಪಕ್ಷದ ರಾಜ್ಯ ಅಧ್ಯಕ್ಷ, ಅಧಿಕಾರ ಬದಲಾವಣೆ ವಿಚಾರದಲ್ಲಿ ನನ್ನ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ ಹೊರತಾಗಿ ಬೇರೆಯವರ ಮಾತು ಗೌಣ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2028ರವರೆಗೂ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿರುತ್ತಾರೆ ಎಂಬ ಸಚಿವ ಡಾ.ಪರಮೇಶ್ವರ್ ಹೇಳಿಕೆಗೆ ಪ್ರತಿಕ್ರಿಯೆ ನೀಡುವುದಿಲ್ಲ ಎಂದರು. ಚುನಾವಣೆ ಬಳಿಕ ನಾಯಕತ್ವ ಬದಲಾವಣೆ ಚರ್ಚೆ ವಿಚಾರವನ್ನು ಮಾಧ್ಯಮಗಳು ಸಮಸ್ಯೆ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ, ಎಲ್ಲಕ್ಕೂ ಕಾಲವೇ ಉತ್ತರಿಸಲಿದೆ. ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಕ್ಷೇತ್ರಗಳಲ್ಲಿ ಪಕ್ಷದ ಪರ ಚೆನ್ನಾಗಿ ಪ್ರಚಾರ ನಡೆದಿದೆ. ಎರಡೂ ಕ್ಷೇತ್ರಗಳಲ್ಲಿ ನಾವೇ ಗೆಲ್ಲುತ್ತೇವೆ. ನಮ್ಮ ಸರ್ಕಾರದ ಕಾರ್ಯಕ್ರಮಗಳಿಂದ ಜನ ತೃಪ್ತರಾಗಿದ್ದಾರೆ.

ಪ್ರಸ್ತುತ ಬೆಲೆ ಏರಿಕೆ ಬಗ್ಗೆ ಬಿಜೆಪಿ ನಾಯಕರು ಬಾಯಿ ಬಿಡುತ್ತಿಲ್ಲ. ಕೇಂದ್ರ ಸರ್ಕಾರ ಯಾವುದೇ ಪರಿಹಾರವನ್ನೂ ಪ್ರಕಟಿಸಿಲ್ಲ, ನಮ್ಮ ಐದು ಗ್ಯಾರಂಟಿ ಯೋಜನೆಗಳಿಂದ ಜನರಿಗೆ ಸ್ವಲ್ಪ ಪ್ರಮಾಣದ ನೆರವು ಸಿಕ್ಕಿದೆ. ಅಡುಗೆ ಅನಿಲ ಕೊರತೆ ಸಮಸ್ಯೆಗೆ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ರಾಜ್ಯಕ್ಕೆ ಸಹಾಯ ಮಾಡಬೇಕು. ಕೊಲ್ಲಿ ರಾಷ್ಟ್ರಗಳಿಂದ ಇಂಧನ ತಂದ ಎರಡು ಹಡಗುಗಳು ಗುಜರಾತಿಗೆ ಹೋಗಿದ್ದು ಏಕೆ, ಮಂಗಳೂರು, ಕೇರಳ ಬಂದರಿಗೆ ಏಕೆ ಬರಲಿಲ್ಲ. ಕೇವಲ ಉತ್ತರ ಭಾರತದತ್ತ ಮಾತ್ರ ನೋಡುತ್ತಿದ್ದಾರೆ. ದಕ್ಷಿಣ ಭಾರತವನ್ನು ನಿರ್ಲಕ್ಷಿಸುತ್ತಿದ್ದಾರೆ, ದಕ್ಷಿಣ ಭಾರತದಲ್ಲಿ ಬಿಜೆಪಿಗೆ ನೆಲೆ ಇಲ್ಲ, ಹೀಗಾಗಿ ರಾಜಕೀಯ ಮಾಡುತ್ತಿದ್ದಾರೆ.

ನಾನು ಹಾಗೂ ಕೆಲವು ಶಾಸಕರು ಕೇರಳಂ ವಿಧಾನಸಭಾ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿದ್ದೇವೆ. ಈ ಬಾರಿ ಯುಡಿಎಫ್ ಮೈತ್ರಿಕೂಟಕ್ಕೆ ಮೂರನೇ ಎರಡರಷ್ಟು ಬಹುಮತ ಸಿಗುವ ವಿಶ್ವಾಸವಿದೆ. 10 ವರ್ಷಗಳ ಎಲ್‌ಡಿಎಫ್ ಆಡಳಿತದಿಂದ ಜನ ಬೇಸರಗೊಂಡಿದ್ದಾರೆ. ಬಿಜೆಪಿ ಜತೆ ಒಳಒಪ್ಪಂದ ಮಾಡಿಕೊಂಡಿದ್ದು, ಯಾವುದೇ ಅಭಿವೃದ್ಧಿಯಾಗಿಲ್ಲ ಎಂದರು.

ರಾಜ್ಯದಲ್ಲಿ ಅಪ್ರಾಪ್ತ ಬಾಲಕಿಯರ ಗರ್ಭಧಾರಣೆಯ ಆಡಿಟ್ ಕಡ್ಡಾಯ

ಬೆಂಗಳೂರು: 10 ರಿಂದ 18 ವರ್ಷ ವಯಸ್ಸಿನ ಹುಡುಗಿಯರಲ್ಲಿ ಗರ್ಭಧಾರಣೆಯ ಪ್ರಕರಣಗಳ ಲೆಕ್ಕಪರಿಶೋಧನೆಯನ್ನು ಕಡ್ಡಾಯಗೊಳಿಸಿ ರಾಜ್ಯ ಸರ್ಕಾರ ಮಂಗಳವಾರ ಆದೇಶ ಹೊರಡಿಸಿದೆ. ರಾಜ್ಯ ಸರ್ಕಾರದ ಈ ಕ್ರಮ ಹದಿಹರೆಯದ ಬಾಲಕಿಯರ ಗರ್ಭಧಾರಣೆಗೆ ಮೂಲ ಕಾರಣಗಳನ್ನು ವ್ಯವಸ್ಥಿತವಾಗಿ ಪತ್ತೆಹಚ್ಚುವುದು, ಪರಿಶೀಲಿಸುವುದು ಮತ್ತು ಪರಿಹರಿಸುವ ಗುರಿಯನ್ನು ಹೊಂದಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ರಾಜ್ಯಾದ್ಯಂತ ತಾಲೂಕು ಆರೋಗ್ಯ ಅಧಿಕಾರಿ (ಟಿಎಚ್‌ಒ)ಗೂ 10 ರಿಂದ 18 ವರ್ಷ ವಯಸ್ಸಿನ ಹುಡುಗಿಯರಲ್ಲಿ ಸಂಭವಿಸುವ ಎಲ್ಲಾ ಗರ್ಭಧಾರಣೆಗಳ ಲೆಕ್ಕಪರಿಶೋಧನೆಯನ್ನು ಕಡ್ಡಾಯಗೊಳಿಸುವ ಆದೇಶವು ಇದೆ. ಹದಿಹರೆಯದ ಗರ್ಭಧಾರಣೆಯು ತಾಯಿಯ ಆರೋಗ್ಯ, ನವಜಾತ ಶಿಶುಗಳ ಆರೋಗ್ಯ ಮತ್ತು ಸಾಮಾಜಿಕ–ಆರ್ಥಿಕ ಅಭಿವೃದ್ಧಿಯ ಮೇಲೆ ಪರಿಣಾಮ ಬೀರುವ ಗಮನಾರ್ಹ ಸಾರ್ವಜನಿಕ ಆರೋಗ್ಯ ಮತ್ತು ಸಾಮಾಜಿಕ ಕಾಳಜಿಯಾಗಿ ಉಳಿದಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಆದೇಶದ ಪ್ರಕಾರ, ರಾಜ್ಯದಲ್ಲಿ ಗುರುತಿಸಲಾದ ಎಲ್ಲಾ ಹದಿಹರೆಯದ ಗರ್ಭಧಾರಣೆಯನ್ನು ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ವೇದಿಕೆಯಲ್ಲಿ ಸರ್ಕಾರಿ ಮತ್ತು ಖಾಸಗಿ ಆರೋಗ್ಯ ಸಂಸ್ಥೆಗಳು ಕಡ್ಡಾಯವಾಗಿ ವರದಿ ಮಾಡಬೇಕು ಎಂದು ಸೂಚಿಸಲಾಗಿದೆ.

ಲೆಕ್ಕಪರಿಶೋಧನಾ ಚೌಕಟ್ಟು, ಮದುವೆಯ ವಯಸ್ಸು, ಶೈಕ್ಷಣಿಕ ಸ್ಥಿತಿ, ಸಂತಾನೋತ್ಪತ್ತಿ ಆರೋಗ್ಯದ ಅರಿವು, ಗರ್ಭನಿರೋಧಕ ಮತ್ತು ಕೌಟುಂಬಿಕ ದುರ್ಬಲತೆ ಗಳು ಸೇರಿದಂತೆ ಹಲವು ಸಾಮಾಜಿಕ–ವೈದ್ಯಕೀಯ ಅಂಶಗಳನ್ನು ಪರಿಶೀಲಿಸುತ್ತದೆ. ತಾಲೂಕು ಮಟ್ಟದಲ್ಲಿ, ತಾಲೂಕು ಆರೋಗ್ಯ ಅಧಿಕಾರಿಯ ಅಧ್ಯಕ್ಷತೆಯಲ್ಲಿ ಪ್ರತ್ಯೇಕ ಲೆಕ್ಕಪರಿಶೋಧನಾ ಸಮಿತಿಯನ್ನು ರಚಿಸಲಾಗುತ್ತದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ವಿಶ್ವ ಆರೋಗ್ಯ ದಿನ: ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ವಾಯುವಿಹಾರಿಗಳಿಗೆ ಆರೋಗ್ಯ ತಪಾಸಣೆ



ವಿಶ್ವ ಆರೋಗ್ಯ ದಿನದ ಅಂಗವಾಗಿ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಯಿತು.

ಮೈಸೂರು,ಏ.7(ಎಂಕೆ)– ಮೈಸೂರಿನ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ವಿಶ್ವ ಆರೋಗ್ಯ ದಿನದ ಅಂಗವಾಗಿ ಅರಿವು ಸಂಸ್ಥೆ ಹಾಗೂ ಸುಯೋಗ್ ಆಸ್ಪತ್ರೆ ವತಿಯಿಂದ ವಾಯುವಿಹಾರಿಗಳಿಗೆ ಮಂಗಳವಾರ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

'ಆರೋಗ್ಯಕ್ಕೆ ಜೊತೆಗೂಡಿ ವಿಜ್ಞಾನದೊಂದಿಗೆ ನಿಲ್ಲಿ' ಘೋಷವಾಕ್ಯದೊಂದಿಗೆ ನೂರಾರು ಮಂದಿ ವಾಯುಹಾರಿಗಳಲ್ಲಿ ಆರೋಗ್ಯ ಕಾಪಾಡಿಕೊಳ್ಳುವಂತೆ ಚಿಕಿತ್ಸೆ ಹಾಗೂ ಆಹಾರ ಪದಾರ್ಥಗಳ ಸೇವನೆ ಮತ್ತಿತರ ಸಲಹೆಗಳನ್ನು ನೀಡಿ ಜಾಗೃತಿ ಮೂಡಿಸಲಾಯಿತು.

ಇದಕ್ಕೂ ಮುನ್ನ ಶಿಬಿರಕ್ಕೆ ಚಾಲನೆ ನೀಡಿದ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮಾತನಾಡಿ, ಆರೋಗ್ಯವೇ ಬಹಳ ಮುಖ್ಯ. ಆರೋಗ್ಯ ಇಲ್ಲವಾದರೆ ದುಡಿದ ಹಣವೆಲ್ಲ ಆಸ್ಪತ್ರೆಗೆ ಖರ್ಚು ಮಾಡಬೇಕಾಗುತ್ತದೆ. ಹಾಗಾಗಿ ರೋಗ ಲಕ್ಷಣಗಳು ಕಂಡು ಬಂದ ಕೂಡಲೇ ಆರೋಗ್ಯ ತಪಾಸಣೆ ಮಾಡಿಸಿಕೊಂಡು ವೈದ್ಯರು ನೀಡುವ ಸಲಹೆಗಳನ್ನು ಪಾಲಿಸಬೇಕು ಎಂದು ತಿಳಿಸಿದರು.

ಸುಯೋಗ್ ಆಸ್ಪತ್ರೆ ಮುಖ್ಯಸ್ಥ ಡಾ.ಎಸ್.ಪಿ.ಯೋಗಣ್ಣ ಮಾತನಾಡಿ, 1948ರಲ್ಲಿ ನಡೆದ ವಿಶ್ವ ಆರೋಗ್ಯ ಸಂಸ್ಥೆಯ ಮೊದಲ ಸಭೆಯಲ್ಲಿ ಪ್ರತೀ ವರ್ಷದ ಏ.7ರಂದು ವಿಶ್ವ ಆರೋಗ್ಯ ದಿನ ಆಚರಿಸಲು ನಿರ್ಧರಿಸಲಾಯಿತು. ಸದೃಢ ರಾಜ್ಯ ಮತ್ತು ದೇಶವನ್ನು ಕಟ್ಟುವ ಹಾದಿಯಲ್ಲಿ ಪ್ರತಿಯೊಬ್ಬ ನಾಗರಿಕನ ಆರೋಗ್ಯ ಕಾಳಜಿಯು ಮುಖ್ಯ. ಹಾಗಾಗಿ ರೋಗ ಬಂದ ಮೇಲೆ ಚಿಕಿತ್ಸೆ ಪಡೆಯುವ ಬದಲು, ರೋಗ ಬರದಂತೆ ಮುನ್ನೆಚ್ಚರಿಕೆ ವಹಿಸಬೇಕು. ವಿಜ್ಞಾನದ ಹಾದಿಯಲ್ಲಿ ಸಾಗುತ್ತಾ ಆರೋಗ್ಯವಂತ ಸಮಾಜ ನಿರ್ಮಿಸಲು ನಾವೆಲ್ಲರೂ ಕೈಜೋಡಿಸೋಣ ಎಂದು ಹೇಳಿದರು.

ನಗರಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ, ಕೆಎಮ್‌ಪಿಕೆ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಅರಿವು ಸಂಸ್ಥೆ ಅಧ್ಯಕ್ಷ ಶ್ರೀಕಾಂತ ಕಶ್ಯಪ್, ಮುಖಂಡರಾದ ಜಿ.ರಾಘವೇಂದ್ರ, ಅಜಯ್ ಶಾಸ್ತ್ರಿ, ಶೇಖರ್, ಯೋಗೇಶ್ ನಾಯ್ಡು, ಪ್ರಶಾಂತ್, ಅಪೂರ್ವ ಸುರೇಶ್, ದೂರ ರಾಜಣ್ಣ, ಜತ್ತಿ ಪ್ರಸಾದ್ ಮತ್ತಿತರರಿದ್ದರು.

ಸೂರ್ಯನ ಬೆಳಕಿನ ಉನ್ನತ ಅಧ್ಯಯನಕ್ಕೆ ಅತ್ಯಾಧುನಿಕ ಸ್ಪೆಕ್ಟ್ರೋಸ್ಕೋಪಿ ಬಳಕೆ ಅವಶ್ಯ

ಖ್ಯಾತ ಖಗೋಳ ವಿಜ್ಞಾನಿ ಡಾ.ಶೈಲಜಾ ಪ್ರತಿಪಾದನೆ



ಮೈಸೂರು ವಿವಿ ಭೌತಶಾಸ್ತ್ರ ಅಧ್ಯಯನ ವಿಭಾಗದಲ್ಲಿ 'ಸ್ಪೆಕ್ಟ್ರೋಸ್ಕೋಪಿ–ತಲುಪಲಾಗದ್ದನ್ನು ಅರ್ಥಮಾಡಿಕೊಳ್ಳುವ ಸಾಧನ' ಕುರಿತು ಖ್ಯಾತ ಖಗೋಳ ವಿಜ್ಞಾನಿ ಡಾ.ಬಿ.ಎಸ್.ಶೈಲಜಾ ವಿಶೇಷ ಉಪನ್ಯಾಸ ನೀಡಿದರು.

ಮೈಸೂರು, ಏ.7(ಎಂಕೆ)– ನಕ್ಷತ್ರಗಳ ಆಕಾರ, ಬೆಳಕು ಮತ್ತು ಅವುಗಳ ತಾಪಮಾನದ ಬಗ್ಗೆ ತಿಳಿಯಲು ಸ್ಪೆಕ್ಟ್ರೋಸ್ಕೋಪಿ (Spectroscopy) ಬಳಕೆ ಅವಶ್ಯವಾಗಿದೆ ಎಂದು ಬೆಂಗಳೂರಿನ ಜವಾಹರಲಾಲ್ ನೆಹರೂ ತಾರಾಲಯದ ಮಾಜಿ ನಿರ್ದೇಶಕಿ ಹಾಗೂ ಖ್ಯಾತ ಖಗೋಳ ವಿಜ್ಞಾನಿ ಡಾ.ಬಿ.ಎಸ್.ಶೈಲಜಾ ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ಭೌತಶಾಸ್ತ್ರ ಅಧ್ಯಯನ ವಿಭಾಗದ ಐನ್‌ಸ್ಟೀನ್ ಸಭಾಂಗಣದಲ್ಲಿ ಕಾಸ್ಮೋಸ್ ಮೈಸೂರು, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಸಹಯೋಗದೊಂದಿಗೆ ಮಂಗಳವಾರ ಆಯೋಜಿಸಿದ್ದ 'ಸ್ಪೆಕ್ಟ್ರೋಸ್ಕೋಪಿ–ತಲುಪಲಾಗದ್ದನ್ನು ಅರ್ಥ ಮಾಡಿಕೊಳ್ಳುವ ಸಾಧನ' ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸೂರ್ಯನಿಂದ ಹೊಮ್ಮುವ ಬೆಳಕು ಬಿಳಿಯಾಗಿ ಕಂಡರೂ ಏಳು ಬಣ್ಣಗಳಿಂದ ಕೂಡಿದೆ ಎಂಬ ಬೆಳಕಿನ ಚದುರುವಿಕೆ ಬಗ್ಗೆ ಅಧ್ಯಯನಕ್ಕೆ ಸ್ಪೆಕ್ಟ್ರೋಸ್ಕೋಪಿ ಬಳಸಲಾಗುತ್ತದೆ ಎಂದು ವಿವರಿಸಿದರು.

ಟೆಲಿಸ್ಕೋಪ್ ವೀಕ್ಷಣೆ ಸ್ಥಗಿತ...

"ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಭೌತಶಾಸ್ತ್ರ ಅಧ್ಯಯನ ವಿಭಾಗದಲ್ಲಿ ವಾರಕ್ಕೊಮ್ಮೆ ಟೆಲಿಸ್ಕೋಪ್ ಮೂಲಕ ನಕ್ಷತ್ರಗಳ ವೀಕ್ಷಣೆಗೆ ನೀಡುತ್ತಿದ್ದ ಅವಕಾಶವನ್ನು ಸ್ಥಗಿತಗೊಳಿಸಲಾಗಿದೆ. ವೀಕ್ಷಣೆಗೆ ಬರುವ ಆಸಕ್ತರ ಕೊರತೆ ಹಾಗೂ ವಿದ್ಯಾರ್ಥಿಗಳ ಪರೀಕ್ಷಾ ದೃಷ್ಟಿಯಿಂದ ಸದ್ಯಕ್ಕೆ ಟೆಲಿಸ್ಕೋಪ್ ಮೂಲಕ ವೀಕ್ಷಣೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ. ಈ ಮೊದಲು ವಾರಕ್ಕೊಮ್ಮೆ ಅವಕಾಶ ನೀಡಲಾಗಿತ್ತು.

– ಪ್ರೊ.ಎ.ಪಿ.ಜ್ಞಾನಪ್ರಕಾಶ್, ನಿರ್ದೇಶಕರು, ಮೈಸೂರು ವಿವಿ ಭೌತಶಾಸ್ತ್ರ ಅಧ್ಯಯನ ವಿಭಾಗ


ನಕ್ಷತ್ರಗಳ ಬೆಳಕನ್ನು ವಿಭಜನೆ ಮಾಡಲು, ನಕ್ಷತ್ರಗಳಲ್ಲಿ ಏನಿದೆ, ಅವುಗಳಲ್ಲಿನ ತಾಪಮಾನದ ಕುರಿತು ಅರಿಯಲು ಹಾಗೂ ನಕ್ಷತ್ರಗಳ ಚಲನೆಗಳ ಬಗ್ಗೆ ತಿಳಿಯುವುದಕ್ಕೆ ಟೆಲಿಸ್ಕೋಪ್(ದೂರದರ್ಶಕ) ಜೊತೆಗೆ ಸ್ಪೆಕ್ಟ್ರೋಸ್ಕೋಪಿ ಬಳಕೆ ಮಾಡಲಾಗುತ್ತದೆ ಎಂದು ಮಾಹಿತಿ ನೀಡಿದರಲ್ಲದೆ ವಿದ್ಯಾರ್ಥಿಗಳು ಸರಳ ಸೂತ್ರದೊಂದಿಗೆ ನಕ್ಷತ್ರ ಮತ್ತು ಗ್ರಹಗಳ ತಾಪಮಾನ ತಿಳಿಯುವ ಬಗೆಯನ್ನು ವಿವರಿಸಿದರು.

ಸೂರ್ಯನ ತಾಪಮಾನ ಸುಮಾರು 5–6 ಸಾವಿರ ಕೆಲ್ವಿನ್ ಇದ್ದರೆ, ಇತರೆ ನಕ್ಷತ್ರಗಳ ತಾಪಮಾನ 10 ಸಾವಿರ ಕೆಲ್ವಿನ್ ಇರಲಿದೆ. ಸೂರ್ಯನ ಸುತ್ತ ಸುತ್ತುವ ಗ್ರಹಗಳ ಪೈಕಿ ಶುಕ್ರ ಗ್ರಹ ಅತೀ ಹೆಚ್ಚು ತಾಪಮಾನ ಹೊಂದಿರುವ ಗ್ರಹವಾಗಿದೆ ಎಂದು ತಿಳಿಸಿದರು. ಮೈಸೂರು ವಿವಿ ಭೌತಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ.ಎ.ಪಿ.ಜ್ಞಾನಪ್ರಕಾಶ್, ಪ್ರೊ.ಎಂ.ಎಸ್.ಚಂದ್ರಶೇಖರ್, ಪ್ರೊ.ಹೆಚ್.ಪಿ.ರವಿಕುಮಾರ್, ಪ್ರೊ.ಎಂ.ಮಹೇಂದ್ರ ಮತ್ತಿತರರು ಉಪಸ್ಥಿತರಿದ್ದರು.

ಗುಡುಮಾದನಹಳ್ಳಿ ಬಳಿ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣಕ್ಕೆ ರೈತ ಸಂಘ ತೀವ್ರ ವಿರೋಧ

ಏ.9, ಡಿಸಿ ಕಚೇರಿ ಮುತ್ತಿಗೆ

ಮೈಸೂರು,ಏ.7(ಜಿಎ)–ಗುಡುಮಾದನಹಳ್ಳಿ ಬಳಿ ಸರ್ಕಾರ ನಿಮ್ಹಾನ್ಸ್ ಘಟಕ ನಿರ್ಮಾಣ ಯೋಜನೆ ಕೂಡಲೇ ಕೈಬಿಡಬೇಕು. ಇಲ್ಲದಿದ್ದಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಎಚ್ಚರಿಸಿದರು.



ನಾಗೇಂದ್ರ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆ ಸ್ಥಳ ಕಟ್ಟಡ ನಿರ್ಮಾಣಕ್ಕೆ ಸೂಕ್ತವಾದುದಲ್ಲ. ಇದು ಫಲವತ್ತಾದ ಪ್ರದೇಶ ಇಲ್ಲಿ ರೈತರು ಈಗಾಗಲೇ ಎರಡು ಬೆಳೆ ಬೆಳೆಯುತ್ತಿದ್ದಾರೆ. ಅದು ಸರ್ಕಾರಿ ಜಾಗ ಎಂದು ನಮೂದಾಗಿದ್ದರೂ ದಶಕಗಳ ಹಿಂದಿನಿಂದಲೂ ರೈತ ಕುಟುಂಬಗಳು ಸಾಗುವಳಿ ಮಾಡುತ್ತಿವೆ. ಇಷ್ಟಾದರೂ ಸರ್ಕಾರ ರೈತರನ್ನು ಬೀದಿಪಾಲು ಮಾಡ ಹೊರಟಿರುವುದು ಸರಿಯಲ್ಲ ಎಂದರು.

ಕಾಮಗಾರಿ ನಡೆಯುವುದನ್ನು ವಿರೋಧಿಸಿದ ಓರ್ವನಿಗೆ ಸಬ್ ಇನ್‌ಸ್ಪೆಕ್ಟರ್ ಕೆನ್ನೆಗೆ ಬಾರಿಸಿದ್ದಾರೆ. ಅವರ ಈ ಉದ್ಧಟತನವನ್ನು ರೈತ ಸಂಘ ಖಂಡಿಸಲಿದ್ದು, ಅವರ ಎತ್ತಂಗಡಿವರೆಗೂ ಹೋರಾಟ ನಡೆಸಲಿದೆ. ಜೊತೆಗೆ, ಏ.9 (ಗುರುವಾರ) ಜಿಲ್ಲಾಡಳಿತದ ವಿರುದ್ಧ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಲಾಗುವುದು ಎಂದರು.

ಭಾರತ–ಅಮೆರಿಕಾ, ಭಾರತ ಮತ್ತು ಐರೋಪ್ಯ ಒಕ್ಕೂಟ ಜೊತೆಗಿನ ವಾಣಿಜ್ಯ ಒಪ್ಪಂದಗಳು ದೇಶದ ರೈತರಿಗೆ ಮಾರಕವಾಗಿವೆ. ಇದು ಸಾರ್ವಜನಿಕ ಆರೋಗ್ಯಕ್ಕೆ ಬೆದರಿಕೆಯೊಡ್ಡಲಿದ್ದು, ಇದರ ವಿರುದ್ಧ ರೈತ ಸಂಘಟನೆಗಳು ದೊಡ್ಡ ಹೋರಾಟ ನಡೆಸಲಿವೆ ಎಂದರು. ಸುದ್ದಿಗೋಷ್ಠಿಯಲ್ಲಿ ಹೊಸೂರು ಕುಮಾರ್, ನೇತ್ರಾವತಿ, ಪಿ.ಮರಂಕಯ್ಯ, ಉಮೇಶ್ ಇದ್ದರು.

ನೇಮಕಾತಿ ಪತ್ರ ವಿತರಣೆ...



ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ವಿಜಯನಗರ ವಾರ್ಡ್ ನಂ.20ರಲ್ಲಿ ಸಮಿತಿ ರಚಿಸಿ, ವಾರ್ಡ್ ಅಧ್ಯಕ್ಷರಾಗಿ ಪ್ರಶಾಂತ್, ಉಪಾಧ್ಯಕ್ಷರಾಗಿ ದಿಲೀಪ್, ನಿರಂಜನ್, ಸದಸ್ಯರಾಗಿ ಅರವಿಂದ, ಗಿರೀಶ್ ಅವರನ್ನು ಆಯ್ಕೆ ಮಾಡಿ, ಶಾಸಕ ಕೆ.ಹರೀಶ್‌ಗೌಡ ನೇಮಕಾತಿ ಪತ್ರ ವಿತರಿಸಿದರು. ಈ ವೇಳೆ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ದೇವರಾಜ ಬ್ಲಾಕ್ ಅಧ್ಯಕ್ಷ ನಾಗಭೂಷಣ್, ಮೈಸೂರು ನಗರ ಸಂಶೋಧನಾ ವಿಭಾಗದ ಕಾಂಗ್ರೆಸ್ ಸಮಿತಿ ಅಧ್ಯಕ್ಷ ನಾಗರಾಜು, ಹಿರಿಯ ಮುಖಂಡ ವಿಜಯನಗರ ಗೋಪಾಲಸ್ವಾಮಿ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯರಾದ ಸುರೇಶ್, ವೆಂಕಟೇಶ್, ಬ್ಲಾಕ್ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿ ಜಾಕೋಬ್, ಮಹಿಳಾ ಮುಖಂಡರಾದ ಶುಭ, ರೇಖಾ, ಆಶಾ, ಕುಸುಮ, ಸುಮನ ಇನ್ನಿತರರಿದ್ದರು.

ನಾಳೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು,ಏ.7–ಮೈಸೂರಿನ ಎಂ.ಜಿ. ರಸ್ತೆಯಲ್ಲಿರುವ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಏ.9ರಂದು ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ಮೈಸೂರು ಪ್ರಸೂತಿ, ಸ್ತ್ರೀರೋಗ ಶಾಸ್ತ್ರ ಸಂಘದ ನೂತನ ಪದಾಧಿಕಾರಿಗಳ ಆಯ್ಕೆ



ಮೈಸೂರು ಪ್ರಸೂತಿ, ಸ್ತ್ರೀರೋಗ ಶಾಸ್ತ್ರ ಸಂಘದ ನೂತನ ಪದಾಧಿಕಾರಿಗಳನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು: ಮಹಿಳಾ ಆರೋಗ್ಯ ರಕ್ಷಣೆ ಮತ್ತು ಶೈಕ್ಷಣಿಕ ಶ್ರೇಷ್ಠತೆಯನ್ನು ಹೆಚ್ಚಿಸುವತ್ತ ಗಮನಹರಿಸುವ ಗುರಿಯೊಂದಿಗೆ ಮೈಸೂರು ಪ್ರಸೂತಿ ಮತ್ತು ಸ್ತ್ರೀರೋಗ ಶಾಸ್ತ್ರ ಸಂಘವು 2026–20027ರ ಶೈಕ್ಷಣಿಕ ವರ್ಷಕ್ಕೆ ಹೊಸ ಪದಾಧಿಕಾರಿಗಳನ್ನು ಆಯ್ಕೆ ಮಾಡಿದೆ.

ಹಿರಿಯ ಸದಸ್ಯರು ಮತ್ತು ವೈದ್ಯಕೀಯ ಸಮುದಾಯದ ಗಣ್ಯ ಅತಿಥಿಗಳ ಸಮ್ಮುಖದಲ್ಲಿ ಹೊಸ ತಂಡವು ಅಧಿಕಾರ ವಹಿಸಿಕೊಂಡಿತು. ಅಧ್ಯಕ್ಷರಾಗಿ ಡಾ.ಎ. ಸೋನಿಯಾ ಮಂದಪ್ಪ, ಕಾರ್ಯದರ್ಶಿಯಾಗಿ ಡಾ. ಸಿಂಧು ಲಕ್ಷ್ಮಿ ದುರ್ಗೇಶ್ ಮತ್ತು ಖಜಾಂಚಿಯಾಗಿ ಡಾ. ರಶ್ಮಿ ಎಂ.ಡಿ. ಆಯ್ಕೆಯಾಗಿದ್ದಾರೆ.

ತಂಡವು ಅನುಭೂತಿಯೊಂದಿಗೆ ಶ್ರೇಷ್ಠತೆ ಘೋಷದೊಂದಿಗೆ ಕ್ಲಿನಿಕಲ್ ಶ್ರೇಷ್ಠತೆ ಮತ್ತು ಸಹಾನುಭೂತಿಯ, ರೋಗಿ–ಕೇಂದ್ರಿತ ಆರೈಕೆ ಎರಡನ್ನೂ ಒತ್ತಿ ಹೇಳುತ್ತದೆ. ಕನಿಷ್ಠ ಆಕ್ರಮಣಕಾರಿ ಶಸ್ತ್ರಚಿಕಿತ್ಸೆ ಮತ್ತು ಸಂತಾನೋತ್ಪತ್ತಿ ಆರೋಗ್ಯದಂತಹ ಕ್ಷೇತ್ರಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ಬಲಪಡಿಸಲು, ಪುರಾವೆ ಆಧಾರಿತ ಅಭ್ಯಾಸವನ್ನು ಉತ್ತೇಜಿಸಲು ಮತ್ತು ಕೌಶಲ್ಯ ಅಭಿವೃದ್ಧಿಯನ್ನು ಹೆಚ್ಚಿಸಲು ಸಂಘವು ಯೋಜನೆಯನ್ನು ರೂಪಿಸಿದೆ. ಸಮುದಾಯಗಳಾದ್ಯಂತ ಮಹಿಳೆಯರಿಗೆ ಗುಣಮಟ್ಟದ ಆರೋಗ್ಯ ಸೇವೆಯ ಅರಿವು ಮತ್ತು ಪ್ರವೇಶವನ್ನು ಸುಧಾರಿಸಲು ಸಮಾಜವು ವರ್ಷದಲ್ಲಿ ಕಾರ್ಯಾಗಾರಗಳು, ಸಮ್ಮೇಳನಗಳು ಮತ್ತು ಔಟ್ರೀಚ್ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ ಎಂದು ಸಂಘದ ಪತ್ರಿಕಾ ಪ್ರಕಟಣೆ ತಿಳಿಸಿದೆ.

ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್‌ನಲ್ಲಿ ಏ.11ರಂದು 'ಕ್ರಿಯೇಟಿವಿಟಿ ಕಾಲ್'

ಮೈಸೂರು, ಏ.7(ಜಿಎ)–ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್‌ನಲ್ಲಿ ಏ.11ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 3.30ರವರೆಗೆ 'ಕ್ರಿಯೇಟಿವಿಟಿ ಕಾಲ್' ಶೀರ್ಷಿಕೆಯ ವಿಶಿಷ್ಟ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಡೀನ್ ಮತ್ತು ನಿರ್ದೇಶಕರಾದ ಡಾ.ಹೆಚ್.ಎಸ್.ಚಂಪಾ ಈ ವಿಷಯ ತಿಳಿಸಿ, ಈ ಕಾರ್ಯಕ್ರಮ ಪಿಯುಸಿ ಮತ್ತು ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಆರ್ಕಿಟೆಕ್ಚರ್ ಮತ್ತು ಡಿಸೈನ್ ಕ್ಷೇತ್ರಗಳಲ್ಲಿ ಅವಕಾಶ ಕಲ್ಪಿಸುವ ಉದ್ದೇಶ ಹೊಂದಿದೆ. ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಪೂರ್ವ ವಿಶ್ವವಿದ್ಯಾನಿಲಯ ಶಿಕ್ಷಣ ಇಲಾಖೆ ಸಹಯೋಗದಲ್ಲಿ ನಡೆಯುತ್ತಿದೆ. ಕಾರ್ಯಕ್ರಮದಲ್ಲಿ ಚರ್ಚೆ, ವೃತ್ತಿ ಮಾರ್ಗದರ್ಶನ, ಕಾರ್ಯಾಗಾರ, ವಿವಿಧ ಸ್ಪರ್ಧೆ ನಡೆಯಲಿವೆ. ವಿಜೇತರಿಗೆ ಟ್ರೋಫಿ, ಪ್ರಶಸ್ತಿ ವಿತರಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ವ್ಯವಸ್ಥಾಪಕ ಟ್ರಸ್ಟಿ ಜೆ.ಎನ್.ಪ್ರಶಾಂತ್, ಟ್ರಸ್ಟಿ ಡಾ.ಕೆ.ವಿ.ಲಕ್ಷ್ಮಿದೇವಿ, ಪ್ರೊ. ವಿವಿನಾ ಕುಟ್ಟಯ್ಯ, ವಿದ್ಯಾರ್ಥಿಗಳಾದ ಮರಿಯಂ, ಸಿರಿ, ಜೈದ್, ಗಗನ್ ಉಪಸ್ಥಿತರಿದ್ದರು.

ಏ.12ರಿಂದ ಉಚಿತ ವಸತಿಯುಕ್ತ ಬೇಸಿಗೆ ಶಿಬಿರ

ಮೈಸೂರು,ಏ.7–ಬಸವ ಮಾರ್ಗ ಫೌಂಡೇಷನ್ ವತಿಯಿಂದ ಏ.12ರಿಂದ ಮೇ 10ರವರೆಗೆ 100 ಮಕ್ಕಳಿಗೆ ಉಚಿತ ವಸತಿಯುಕ್ತ ಬೇಸಿಗೆ ಶಿಬಿರ ಆಯೋಜಿಸಲಾಗಿದೆ. ಶಿಬಿರದಲ್ಲಿ ಮೊಬೈಲ್ ಅಡಿಕ್ಷನ್, ಈಜು, ಟ್ರೆಕ್ಕಿಂಗ್, ಪ್ರವಾಸ, ಕ್ರೀಡೆ, ಕರಾಟೆ, ಡ್ಯಾನ್ಸ್, ಸಂಗೀತ, ಮ್ಯಾಜಿಕ್, ಡ್ರಾಯಿಂಗ್, ಕ್ರಾಫ್ಟ್, ಕೌಶಲ ಕಲಿಕೆ, ಓದುವ ತರಬೇತಿ, ಕೌನ್ಸಲಿಂಗ್, ವ್ಯಕ್ತಿತ್ವ ವಿಕಸನ, ಆರೋಗ್ಯ ತಪಾಸಣೆ, ಹೋಳಿ ಹಬ್ಬ, ಸ್ವಚ್ಛತೆ ಅರಿವು, ಯೋಗ ತರಬೇತಿಗಳು ನಡೆಯುತ್ತದೆ. ಈಗಾಗಲೇ ಅರ್ಜಿಗಳನ್ನು ವಿತರಿಸಲಾಗಿದ್ದು, ಅರ್ಜಿ ಪಡೆದ ಪಾಲಕರು ಮಗುವಿನ ಆಧಾರ್ ಕಾರ್ಡ್, ಭಾವಚಿತ್ರದೊಂದಿಗೆ ಭರ್ತಿ ಮಾಡಿದ ಅರ್ಜಿಯನ್ನು ನಿಗದಿತ ದಿನಾಂಕದೊಳಗೆ ತಲುಪಿಸಲು ಕೋರಲಾಗಿದೆ.

ಏ.12 ರಂದು ಸಂಜೆ 5.30ಕ್ಕೆ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಬಸವ ಮಾರ್ಗ ಫೌಂಡೇಷನ್ ಆಶ್ರಮ ಶಾಖೆಯಲ್ಲಿ ಬೇಸಿಗೆ ಶಿಬಿರದ ಉದ್ಘಾಟನಾ ಸಮಾರಂಭ ನಡೆಯಲಿದೆ. ಶಾಸಕ ಕೆ.ಹರೀಶ್‌ಗೌಡ, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಭಾಗವಹಿಸಲಿದ್ದಾರೆ.

ಬಿಎಐ ಮೈಸೂರು ಘಟಕದ ಅಧ್ಯಕ್ಷರಾಗಿ ಪ್ರಭಾಕರ್‌ರಾವ್ ಅಧಿಕಾರ ಸ್ವೀಕಾರ



ಬಿಎಐ ಮೈಸೂರು ಘಟಕದ 2026–27ನೇ ಸಾಲಿಗೆ ಕೆ.ಆರ್.ಪ್ರಭಾಕರ್‌ರಾವ್ ಛೇರ್ಮನ್ ಆಗಿ, ಎಂ.ಡಿ.ಪ್ರಮೀಣ್‌ಪಾಲ್ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಂಡರು.

ಮೈಸೂರು,ಏ.7(ಎಸ್‌ಪಿಎನ್)– ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಘಟಕದ 2026–27ನೇ ಸಾಲಿನ ಕೆ.ಆರ್.ಪ್ರಭಾಕರ್‌ರಾವ್ ಛೇರ್ಮನ್ ಆಗಿ, ಎಂ.ಡಿ.ಪ್ರಮೀಣ್‌ಪಾಲ್ ಕಾರ್ಯದರ್ಶಿಗಳಾಗಿ, ಅಧಿಕಾರ ವಹಿಸಿಕೊಂಡರು.

ಮೈಸೂರಿನ ವಿಶ್ವೇಶ್ವರ ನಗರದ ಇಂಡಸ್ಟ್ರೀಯಲ್ ಸಬರ್ಬನ ಅಕ್ಕಮಹಾದೇವಿ ರಸ್ತೆಯಲ್ಲಿರುವ ಎಂಬಿಸಿಟಿ ಆಡಿಟೋರಿಯಂನಲ್ಲಿ 2026–27ನೇ ಸಾಲಿನ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಅಧಿಕಾರ ಸ್ವೀಕರಿಸಿದರು. ಈ ವೇಳೆ ಸಿ.ಡಿ.ಕೃಷ್ಣ ವೈಸ್ ಛೇರ್ಮನ್, ಜಿ.ಅಶೋಕ್ ಜಂಟಿ ಕಾರ್ಯದರ್ಶಿ ಹಾಗೂ ಖಜಾಂಚಿಯಾಗಿ ಎಸ್.ಶಶಿರಾಜ್ ಅಧಿಕಾರ ಸ್ವೀಕರಿಸಿದರು.

ಕಾರ್ಯಕಾರಿ ಸಮಿತಿ ಸದಸ್ಯರಾದ ಎಂ.ಎಸ್.ಬಾಲಾಜಿ, ಭಾರ್ಗವ್ ವಿ.ಶಿಂಧೆ, ಸಿ.ಯು.ದಿವಾಕರ್, ಟಿ.ಎಸ್.ಗುರುದತ್, ಕೆ.ಎಲ್. ನಂದಕುಮಾರ್, ವಿ.ಮೋಹನ್‌ಕುಮಾರ್, ಕೆ.ಎಂ.ರಘುನಾಥ್, ಆರ್. ರಮೇಶ್‌ರಾವ್, ಕೆ.ಎನ್.ರವಿಶಂಕರ್, ಡಿ.ಶ್ರೀಹರಿ, ಸಿ.ಎಸ್.ಶ್ರೀಕಾಂತ್, ಎಸ್.ವಾಸುದೇವನ್, ಎಂ.ವಿ.ವಿನೋದ್‌ಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.


ಉದ್ಯಮಿ ಎಸ್.ರಾಮಕೃಷ್ಣನ್ ಮಾತನಾಡಿ, ದೇಶ ಕಟ್ಟುವಲ್ಲಿ ಬಿಲ್ಡರ್ಸ್‌ಗಳ ಪಾತ್ರ ಮಹತ್ವದ್ದಾಗಿದೆ. ಹಾಗಾಗಿ ಹೊಸದಾಗಿ ಅಧಿಕಾರವಹಿಸಿಕೊಂಡಿರುವ ತಂಡ ಒಗ್ಗಟ್ಟಿನಿಂದ ಮಾದರಿಯಾಗಿ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಘಟಕದ ಪದಾಧಿಕಾರಿಗಳು ಹಲವು ಸೇವಾಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಅವರ ಮಾರ್ಗದರ್ಶನದಲ್ಲಿ ನಾವೆಲ್ಲಾ ಸಾಗಬೇಕು ಎಂದರು. ಬಿಎಐ ರಾಷ್ಟ್ರೀಯ ಉಪಾಧ್ಯಕ್ಷ ಸತ್ಯಮೂರ್ತಿ, ಕಾರ್ಯದರ್ಶಿ ಶಿವಪ್ರಕಾಶ್, ನಿಕಟಪೂರ್ವ ಅಧ್ಯಕ್ಷ ವಿ.ಶ್ರೀನಾಥ್ ಸೇರಿದಂತೆ ಇತರರಿದ್ದರು.

ದೇಶ – ವಿದೇಶ

ಮಣಿಪುರದಲ್ಲಿ ಮನೆಯೊಂದರ ಮೇಲೆ ಬಾಂಬ್ ದಾಳಿ: ಇಬ್ಬರು ಮಕ್ಕಳು ಸಾವು

ಇಂಫಾಲ: ಮಣಿಪುರದ ಬಿಷ್ಣುಪುರ ಜಿಲ್ಲೆಯಲ್ಲಿ ನಡೆದ ಬಾಂಬ್ ದಾಳಿಯಲ್ಲಿ ಇಬ್ಬರು ಮಕ್ಕಳು ಸ್ಥಳದಲ್ಲೇ ಮೃತಪಟ್ಟು, ತಾಯಿ ಗಂಭೀರವಾಗಿ ಗಾಯಗೊಂಡಿರುವ ಘಟನೆ ಮಂಗಳವಾರ ನಡೆದಿದೆ. ಮೋಯಿರಾಂಗ್ ಟ್ರೊಂಗ್ಲಾವೊಬಿ ಪ್ರದೇಶದ ಮನೆ ಮೇಲೆ ಶಂಕಿತ ಉಗ್ರರು ಮಧ್ಯರಾತ್ರಿ ಬಾಂಬ್ ಎಸೆದಿದ್ದಾರೆ. ಘಟನೆಯಲ್ಲಿ 5 ವರ್ಷದ ಬಾಲಕ, 6 ತಿಂಗಳ ಹೆಣ್ಣು ಮಗು ಮೃತಪಟ್ಟಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ತಾಯಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಹೇಳಿದ್ದಾರೆ. ಘಟನೆಗೆ ಮಣಿಪುರ ಮುಖ್ಯಮಂತ್ರಿ ಬಿರೇನ್ ಸಿಂಗ್ ತೀವ್ರವಾಗಿ ಖಂಡನೆ ವ್ಯಕ್ತಪಡಿಸಿದ್ದಾರೆ. ಇದು ಅನಾಗರಿಕ ಕೃತ್ಯ ಮತ್ತು ಮಾನವೀಯತೆಯ ಮೇಲಿನ ನೇರ ದಾಳಿ ಎಂದು ಖಂಡಿಸಿದ್ದಾರೆ. ಅಪರಾಧಿಗಳನ್ನು ಗುರುತಿಸಿ ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದ್ದಾರೆ. ರಾಜ್ಯದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದ್ದಾರೆ. ಪೆಟ್ರೋಲ್ ಬಂಕ್ ಬಳಿಯಿದ್ದ ಒಂದು ಟ್ರಕ್, ಎರಡು ತೈಲ ಟ್ಯಾಂಕರ್‌ಗಳಿಗೆ ಬೆಂಕಿ ಹಚ್ಚಿದ್ದಾರೆ. ಅಲ್ಲದೆ, ಮೋಯಿರಾಂಗ್ ಪೊಲೀಸ್ ಠಾಣೆಯ ಮುಂದೆ ಟೈರ್‌ಗಳನ್ನು ಸುಟ್ಟು ಆಕ್ರೋಶ ವ್ಯಕ್ತಪಡಿಸಿದ್ದಲ್ಲದೆ, ಪೊಲೀಸ್ ಚೌಕಿಯನ್ನು ಧ್ವಂಸಗೊಳಿಸಿದ್ದಾರೆ.



ಇರಾನ್ ಮೇಲೆ ಟೂಲ್ ಕಿಟ್‌ನಲ್ಲಿರುವ ಅಸ್ತ್ರ ಬಳಸಲು ನಿರ್ಧರಿಸಿಲ್ಲ


ಬುಡಾಪೆಸ್ಟ್: ಅಮೆರಿಕದ ಟೂಲ್‌ಕಿಟ್‌ನಲ್ಲಿರುವ ಟೂಲ್‌ಗಳನ್ನು ಇರಾನ್ ಮೇಲೆ ಬಳಸಲು ನಾವಿನ್ನು ನಿರ್ಧರಿಸಿಲ್ಲ ಎಂಬುದು ಅವರ ಗಮನದಲ್ಲಿರಲಿ ಎಂದು ಅಮೆರಿಕ ಉಪಾ ಧ್ಯಕ್ಷ ಜೆ.ಡಿ. ವ್ಯಾನ್ಸ್ ಅವರು ಎಚ್ಚರಿಕೆ ನೀಡಿದ್ದಾರೆ.



ಇರಾನ್‌ನೊಂದಿಗಿನ ಮಾತುಕತೆಯು ಯಶಸ್ವಿಯಾಗುವ ಸಾಧ್ಯತೆಯಿದೆ. ಹಾಗಾದರೆ ಮಾತ್ರ ನಾವು ಆ ಅಸ್ತ್ರಗಳನ್ನು ಬಳಸುವುದು ತಪ್ಪುತ್ತದೆ ಎಂದು ಹೇಳಿದ್ದಾರೆ. ನಮ್ಮ ಟೂಲ್‌ಕಿಟ್‌ನಲ್ಲಿರುವ ಟೂಲ್‌ಗಳನ್ನು ಯಾವಾಗ ಬಳಸಬೇಕು ಎನ್ನುವುದನ್ನು ಅಧ್ಯಕ್ಷ ಟ್ರಂಪ್ ನಿರ್ಧರಿಸುತ್ತಾರೆ. ಇರಾನ್ ತನ್ನ ನಿಲುವು ಬದಲಾಯಿಸಿಕೊಳ್ಳದೇ ಇದ್ದರೆ, ಅವುಗಳನ್ನು ಬಳಸಬೇಕಾಗುತ್ತದೆ ಎಂದು ಹೇಳಿದ್ದಾರೆ. ಅಮೆರಿಕವು ತನ್ನ ಮಿಲಿಟರಿ ಉದ್ದೇಶಗಳನ್ನು ಪೂರ್ಣಗೊಳಿಸಿದೆ. ಕದನವಿರಾಮಕ್ಕಾಗಿ ಅಮೆರಿಕ ನೀಡಿರುವ ಗಡುವು ಮುಗಿದ ನಂತರ, ಇರಾನ್ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕು ಎಂದು ಆಲೋಚಿಸುತ್ತೇವೆ ಎಂದು ಹೇಳಿದ್ದಾರೆ. ಅಮೆರಿಕ ನೀಡಿರುವ ಗಡುವಿನ ಒಳಗೆ ಕದನವಿರಾಮ ಒಪ್ಪಂದಕ್ಕೆ ಸಹಿ ಹಾಕದೇ ಇದ್ದರೆ, ಇರಾನ್ ನಾಗರಿಕತೆಯು ಸರ್ವನಾಶವಾಗಲಿದೆ ಎಂದು ಅಧ್ಯಕ್ಷ ಟ್ರಂಪ್, ಇರಾನ್‌ಗೆ ಎಚ್ಚರಿಕೆ ನೀಡಿದ್ದರು.

ಪಶ್ಚಿಮ ಬಂಗಾಳ SIR: ಮತದಾರರ ಪಟ್ಟಿಯಿಂದ 91 ಲಕ್ಷ ಹೆಸರು ಡಿಲೀಟ್


ಕೋಲ್ಕತ್ತಾ: ಚುನಾವಣಾ ಆಯೋಗದ ಮಾಹಿತಿಯ ಪ್ರಕಾರ, ಪಶ್ಚಿಮ ಬಂಗಾಳದಲ್ಲಿ ವಿಶೇಷ ತೀವ್ರ ಪರಿಷ್ಕರಣೆ (SIR) ಪ್ರಕ್ರಿಯೆಯ ನಂತರ ಸುಮಾರು 91 ಲಕ್ಷ ಮತದಾರರ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿದೆ.



ಈ ಪರಿಷ್ಕರಣೆ ಪ್ರಕ್ರಿಯೆ ನಂತರ ರಾಜ್ಯದ ಅಂತಿಮ ಮತದಾರರ ಸಂಖ್ಯೆಯನ್ನು ಚುನಾವಣಾ ಆಯೋಗ ಇನ್ನೂ ಅಧಿಕೃತವಾಗಿ ಪ್ರಕಟಿಸಿಲ್ಲ. ಫೆಬ್ರವರಿ 28ರಂದು ಪ್ರಕಟಿಸಿದ ಪ್ರಾಥಮಿಕ ಅಂಕಿಅಂಶಗಳ ಪ್ರಕಾರ, ನವೆಂಬರ್‌ನಿಂದ ಆರಂಭವಾದ ಪರಿಷ್ಕರಣೆ ಬಳಿಕ 63.66 ಲಕ್ಷ ಹೆಸರುಗಳು (ಸುಮಾರು 8.3% ಮತದಾರರು) ತೆಗೆದುಹಾಕಲ್ಪಟ್ಟಿದ್ದು, ಒಟ್ಟು ಮತದಾರರ ಸಂಖ್ಯೆ 7.66 ಕೋಟಿಯಿಂದ 7.04 ಕೋಟಿಗೆ ಇಳಿದಿತ್ತು. ಇದರಲ್ಲಿ 60.06 ಲಕ್ಷ ಮಂದಿ ಪರಿಶೀಲನೆಯಲ್ಲಿರುವವರು ಎಂದು ಗುರುತಿಸಲ್ಪಟ್ಟಿದ್ದರು. ನಂತರ ನ್ಯಾಯಾಂಗ ಅಧಿಕಾರಿಗಳ ಪರಿಶೀಲನೆಯ ಬಳಿಕ, ಈ ವಿವಾದಿತ ದಾಖಲೆಗಳಲ್ಲಿ ಸುಮಾರು 27.16 ಲಕ್ಷ ಹೆಸರುಗಳನ್ನು ಅಳಿಸಲಾಗಿದೆ. ಇನ್ನೂ ಸುಮಾರು 32.68 ಲಕ್ಷ ಹೆಸರನ್ನು ಉಳಿಸಿ ಅಂತಿಮ ಪಟ್ಟಿಗೆ ಸೇರಿಸಲಾಗಿದೆ. ಒಟ್ಟಾರೆ, SIR ಪ್ರಕ್ರಿಯೆಯಲ್ಲಿ ತೆಗೆದುಹಾಕಲ್ಪಟ್ಟ ಮತದಾರರ ಸಂಖ್ಯೆ ಈಗ ಸುಮಾರು 90.83 ಲಕ್ಷಕ್ಕೆ ತಲುಪಿದೆ. ಚುನಾವಣಾ ಆಯೋಗದ ಪ್ರಕಾರ, ಈ ಪರಿಷ್ಕರಣೆ ಪಾರದರ್ಶಕವಾಗಿ ನಡೆಸಲಾಗಿದೆ. ಜಿಲ್ಲಾವಾರು ಮಾಹಿತಿ ಸಾರ್ವಜನಿಕವಾಗಿ ಪ್ರಕಟಿಸಲಾಗಿದೆ ಎಂದು ತಿಳಿಸಲಾಗಿದೆ.

ಇಸ್ರೇಲ್ ರಾಯಭಾರ ಕಚೇರಿ ಮೇಲೆ ಗುಂಡಿನ ದಾಳಿ; ದಾಳಿಕೋರ ಸಾವು

ಇಸ್ತಾನ್‌ಬುಲ್: ಇಲ್ಲಿನ ಇಸ್ರೇಲ್ ರಾಯಭಾರ ಕಚೇರಿ ಕಟ್ಟಡದ ಹೊರಗೆ ಮೂವರು ಆಕ್ರಮಣಕಾರರು ಪೊಲೀಸರ ಮೇಲೆ ಗುಂಡು ಹಾರಿಸಿದ್ದು, ಗುಂಡಿನ ಚಕಮಕಿಯಲ್ಲಿ ಒಬ್ಬ ದಾಳಿಕೋರ ಸಾವಿಗೀಡಾಗಿದ್ದಾನೆ. ಇತರ ಇಬ್ಬರು ದಾಳಿಕೋರರನ್ನು ಸೆರೆಹಿಡಿಯಲಾಗಿದ್ದು, ಅವರು ಗಾಯಗೊಂಡಿದ್ದಾರೆ ಎನ್ನಲಾಗಿದೆ. ಘರ್ಷಣೆಯಲ್ಲಿ ಇಬ್ಬರು ಪೊಲೀಸ್ ಅಧಿಕಾರಿಗಳಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಲಾಂಗ್ ಬ್ಯಾರೆಲ್ ಆಯುಧಗಳನ್ನು ಹೊಂದಿದ್ದ ದಾಳಿಕೋರರು ನೆರೆಯ ನಗರವಾದ ಇಜ್ಮಿತ್‌ನಿಂದ ಇಸ್ತಾನ್‌ಬುಲ್‌ಗೆ ಬಾಡಿಗೆ ಕಾರಿನಲ್ಲಿ ಪ್ರಯಾಣಿಸಿದ್ದಾರೆ. ದಾಳಿಕೋರರಲ್ಲಿ ಒಬ್ಬಾತ ಸಂಘಟನೆಯನ್ನು ಹೆಸರಿಸದೆ ಧರ್ಮವನ್ನು ಶೋಷಿಸುವ' ಗುಂಪಿಗೆ ಸೇರಿದವನು ಎಂದು ಆಂತರಿಕ ಸಚಿವ ಮುಸ್ತಫಾ ಸಿಫ್ಟಿ ಎಕ್ಸ್‌ನಲ್ಲಿ ಬರೆದಿದ್ದಾರೆ.



ಟರ್ಕಿಯಲ್ಲಿ ಇಸ್ಲಾಮಿಕ್ ಸ್ಟೇಟ್ ಗುಂಪು ಈ ಹಿಂದೆ ಮಾರಕ ದಾಳಿಗಳನ್ನು ನಡೆಸಿದೆ.ದಾಳಿಕೋರರಲ್ಲಿ ಇಬ್ಬರು ಸಹೋದರರಾಗಿದ್ದು, ಒಬ್ಬ ಮಾದಕವಸ್ತುಗಳಿಗೆ ಸಂಬಂಧಿಸಿದ ಕ್ರಿಮಿನಲ್ ಹಿನ್ನೆಲೆಯನ್ನು ಹೊಂದಿದ್ದಾನೆ. ಇಸ್ರೇಲಿ ರಾಯಭಾರ ಕಚೇರಿಯು ಬಹುಮಹಡಿ ಕಟ್ಟಡದಲ್ಲಿದೆ. ಟರ್ಕಿಯಲ್ಲಿರುವ ಇಸ್ರೇಲ್ ಕಾನ್ಸುಲೇಟ್‌ನಲ್ಲಿ ಸದ್ಯ ಯಾವುದೇ ಇಸ್ರೇಲಿ ರಾಜತಾಂತ್ರಿಕರು ಇರಲಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಘಟನೆ ನಡೆದ ನಂತರ, ಅಧಿಕಾರಿಗಳು ಕಟ್ಟಡದ ಸುತ್ತಲಿನ ಪ್ರದೇಶವನ್ನು ನಿರ್ಬಂಧಿಸಿದ್ದು, ಭದ್ರತೆ ಹೆಚ್ಚಿಸಿದ್ದಾರೆ.

400 ಕೋಟಿ ಸೈಬರ್ ವಂಚನೆ ಜಾಲ ಭೇದಿಸಿ, ಐದು ಆರೋಪಿಗಳ ಬಂಧನ

ಜೈಪುರ: ವಿದೇಶಾಂಗ ವ್ಯಾಪಾರ ನಿರ್ದೇಶನಾಲಯ ಪೋರ್ಟಲ್‌ನಲ್ಲಿ ದೇಶದಾದ್ಯಂತ 400 ಕಂಪನಿಗಳ ನಿರ್ದೇಶಕರ ಪ್ರೊಫೈಲ್‌ಗಳನ್ನು ಮೋಸದಿಂದ ಬದಲಾಯಿಸಿದ ಪ್ರಮುಖ ಸೈಬರ್ ವಂಚನೆ ಜಾಲವನ್ನು ಜೈಪುರ ಪೊಲೀಸರು ಬಯಲು ಮಾಡಿದ್ದಾರೆ.



ದುಬೈ ನಂಟು ಹೊಂದಿರುವ ಈ DGFT-ICEGATE ಸ್ಕ್ರಿಪ್ ಹಗರಣವು ಕೋಟ್ಯಂತರ ರೂ. ನಷ್ಟವನ್ನುಂಟು ಮಾಡಿದೆ ಎಂದು ಜೈಪುರ ಪೊಲೀಸ್ ಕಮಿಷನರೇಟ್ ಹೇಳಿದೆ. ದುಬೈನಿಂದ ನಡೆಸಲಾಗುತ್ತಿದೆ ಎಂದು ನಂಬಲಾದ ಈ ಸಂಘಟಿತ ಸೈಬರ್ ವಂಚನೆಗೆ ಸಂಬಂಧಿಸಿದಂತೆ ಐವರನ್ನು ಬಂಧಿಸಲಾಗಿದೆ. ಪೊಲೀಸರ ಪ್ರಕಾರ, ಈ ಜಾಲವು 400ಕ್ಕೂ ಹೆಚ್ಚು ಕಂಪನಿಗಳ ನಿರ್ದೇಶಕರ ಪ್ರೊಫೈಲ್‌ಗಳನ್ನು ಅತ್ಯಂತ ಹೆಚ್ಚು ಕುಶಲತೆಯಿಂದ ನಿರ್ವಹಿಸಿ ಕೋಟಿಗಟ್ಟಲೆ ನಷ್ಟವನ್ನುಂಟು ಮಾಡಿದ್ದಾರೆ. ಇಲ್ಲಿವರೆಗೆ ಐದು ಆರೋಪಿಗಳನ್ನು ಬಂಧಿಸಲಾಗಿದೆ. ಆರೋಪಿಗಳು ನಕಲಿ ಆಧಾರ್ ಮತ್ತು ಪ್ಯಾನ್ ಕಾರ್ಡ್‌ಗಳನ್ನು ಬಳಸಿ ಡಿಜಿಟಲ್ ಸಿಗ್ನೇಚರ್ ಪ್ರಮಾಣ ಪತ್ರಗಳನ್ನು ಪಡೆದುಕೊಂಡಿದ್ದಾರೆ ಎಂದು ತಿಳಿದುಬಂದಿದೆ. ಈ ಜಾಲವು ಜೋಧ್‌ಪುರ, ಪಾಲಿ ಸೇರಿದಂತೆ ಹಲವು ಸ್ಥಳಗಳಲ್ಲಿ ವ್ಯಾಪಿಸಿದೆ. ಒಟ್ಟು 13 ಶಂಕಿತರನ್ನು ಗುರುತಿಸಲಾಗಿದೆ. ಬಂಧಿತರಲ್ಲಿ ಸುಲ್ತಾನ್‌ಖಾನ್, ನಂದ್ ಕಿಶೋರ್, ಅಶೋಕ್‌ಕುಮಾರ್ ಭಂಡಾರಿ, ಪ್ರಮೋದ್ ಖತ್ರಿ, ಮತ್ತು ಪಾಲಿಯ ನಿರ್ಮಲ್ ಸೋನಿ ಎಂದು ಗುರುತಿಸಲಾಗಿದೆ.

ಶರಣ್ಯ ನಾಪತ್ತೆ ಪ್ರಕರಣ ಸೂಕ್ತ ತನಿಖೆಗೆ ಆಗ್ರಹ


ಶರಣ್ಯ ಪ್ರಕರಣದ ಸೂಕ್ತ ತನಿಖೆಗೆ ಆಗ್ರಹಿಸಿ ಬಿಜೆಪಿ ಪೊಲೀಸರಿಗೆ ದೂರು ನೀಡಿತು.

ಮಡಿಕೇರಿ, ಏ.7– ಕಕ್ಕಬ್ಬೆ ಬಳಿಯ ತಡಿಯಂಡಮೋಳ್ ಬೆಟ್ಟದಲ್ಲಿ ಚಾರಣಕ್ಕೆ ತೆರಳಿದ ಕೇರಳದ ಯುವತಿ ಶರಣ್ಯ ನಡವಳಿಕೆ ಸಂಶಯಕ್ಕೆ ಎಡೆ ಮಾಡಿದ್ದು ಸೂಕ್ತ ತನಿಖೆ ನಡೆಸುವಂತೆ ಬಿಜೆಪಿ ಗ್ರಾಮಾಂತರ ಮಂಡಲದ ಪ್ರಮುಖರು ಪೊಲೀಸರಿಗೆ ದೂರು ನೀಡಿದ್ದಾರೆ.

ಈ ಘಟನೆಯಲ್ಲಿ ಶರಣ್ಯಳ ನಡವಳಿಕೆಯಿಂದ ಸಂಶಯ ವ್ಯಕ್ತವಾಗಿದೆ. ಇದರಲ್ಲಿ ಕಾಣದ ಕೈಗಳ ಕೈವಾಡವಿದೆ. ದಟ್ಟಾರಣ್ಯದಲ್ಲಿ ಆಹಾರವಿಲ್ಲದೆ ಯಾವುದೇ ಕಾರಣಕ್ಕೂ 4 ದಿನಗಳ ಕಾಲ ಇರಲು ಸಾಧ್ಯವಿಲ್ಲ. ಎಲ್ಲ ಭಾಗಗಳಲ್ಲೂ ನಕ್ಸಲ್ ಚಟುವಟಿಕೆ ಕಾರ್ಯಗಳು ನಡೆಯುತ್ತಿದ್ದು, ಈ ಪ್ರಕರಣ ಮತ್ತಷ್ಟು ಸಂಶಯಕ್ಕೆ ಎಡೆ ಮಾಡಿಕೊಟ್ಟಿದೆ. ಇದರಿಂದ ಪೊಲೀಸ್ ಇಲಾಖೆ ಸೂಕ್ತ ತನಿಖೆ ನಡೆಸಿ ಜನರಿಗೆ ಸತ್ಯಾಸತ್ಯತೆಯನ್ನು ತಿಳಿಸಬೇಕೆಂದು ಸುದ್ದಿಗಾರರ ಬಳಿ ಒತ್ತಾಯಿಸಿದರು.

ನಾಪೋಕ್ಲು ಬಿಜೆಪಿ ಶಕ್ತಿ ಕೇಂದ್ರದ ಅಧ್ಯಕ್ಷ ಶಿವಚಾಳಿಯಂಡ ಅಂಬಿ ಕಾರ್ಯಪ್ಪ ಮಾತನಾಡಿ, ಶರಣ್ಯ ನಾಪತ್ತೆ ಪ್ರಕರಣ ಮೇಲ್ನೋಟಕ್ಕೆ ಪ್ರಚಾರಕ್ಕೋಸ್ಕರ ಮಾಡಿದ ರೀತಿಯಲ್ಲಿದೆ. ನಮ್ಮ ಜಿಲ್ಲೆಯ ಪ್ರವಾಸೋದ್ಯಮಕ್ಕೆ ಕೆಟ್ಟ ಹೆಸರು ತರಲು ನಾಟಕವಾಡುವ ರೀತಿಯಲ್ಲಿ ಕಾಣುತ್ತಿದೆ. ಅದಲ್ಲದೆ ಕಳೆದ 4 ದಿನಗಳಿಂದ ದಟ್ಟಾರಣ್ಯದಲ್ಲಿದ್ದ ಶರಣ್ಯಳಿಗೆ ಯಾವುದೇ ಆಯಾಸವಾಗದ ರೀತಿಯಲ್ಲಿ ಪತ್ತೆಯಾಗಿರುವುದರಲ್ಲಿ ಸಂಶಯ ವ್ಯಕ್ತವಾಗಿದೆ. ಆದ್ದರಿಂದ ಪೊಲೀಸ್ ಇಲಾಖೆ ಸೂಕ್ತ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕೆಂದು ಅಂಬಿ ಕಾರ್ಯಪ್ಪ ಆಗ್ರಹಿಸಿದರು.

ಈ ಸಂದರ್ಭ ಬಿಜೆಪಿ ಮಹಾಶಕ್ತಿ ಕೇಂದ್ರದ ಗ್ರಾಮಾಂತರ ಮಂಡಲದ ಅಧ್ಯಕ್ಷ ಬಿದ್ದಂಡ ರಾಜೇಶ್ ಅಚ್ಚಯ್ಯ, ಉಪಾಧ್ಯಕ್ಷ ಪಾಡಿಯಂಡ ಕಟ್ಟಿಕುಶಾಲಪ್ಪ, ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಬೊಳಿಯಾಡಿರ ಸಂತು ಸುಬ್ರಮಣಿ ಮತ್ತಿತರರು ಶರಣ್ಯ ಪ್ರಕರಣವನ್ನು ಕುಲಂಕುಶವಾಗಿ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ದೂರು ಸ್ವೀಕರಿಸಿದ ಠಾಣಾಧಿಕಾರಿ ರಾಘವೇಂದ್ರ ಅವರು ತನಿಖೆ ನಡೆಸುವ ಭರವಸೆ ನೀಡಿದರು.

ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಉಮಾಪ್ರಭು, ಪವನ್ ತೋಟಂಬೈಲು, ಗ್ರಾ ಪಂ. ಮಾಜಿ ಸದಸ್ಯೆ ಕೋಟೆರ ನೀಲಮ್ಮ, ಕಲಿಯಂಡ ಸುನಂದ, ಬಿಜೆಪಿಯ ಪ್ರಮುಖರಾದ ಮನು ಮಹೇಶ್, ಬಿದ್ದಾಟಂಡ ಸಂಪತ್, ಸುರಾ ನಾಣಯ್ಯ, ಕಂಗಂಡ ಜಾಲಿ ಪೂವಪ್ಪ, ನಿರನ್ ಕಾರ್ಯಪ್ಪ ನಿಡುಮಂಡ ಕೃತಿ ಮತ್ತಿತರರು ಹಾಜರಿದ್ದರು.

ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮಡಿಕೇರಿ,ಏ.7– ಅಂಬೇಡ್ಕರ್ ಜಯಂತಿ ಪ್ರಯುಕ್ತ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ

ಏ.14 ರಂದು ಅಂಬೇಡ್ಕರ್ ಭವನ ಸಮಿತಿ ಹಾಗೂ ಅಶೋಕಪುರ ಅನ್ನಪೂರ್ಣೇಶ್ವರಿ ಸಮುದಾಯ ಭವನ ಸಮಿತಿ ವತಿಯಿಂದ ನಡೆಯುವ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಲಾಗುವುದು.

ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಅತ್ಯಧಿಕ ಅಂಕ ಗಳಿಸಿದ ಸಮುದಾಯದ ತಲಾ ಇಬ್ಬರು ವಿದ್ಯಾರ್ಥಿಗಳಿಗೆ ರೂ. 5 ಸಾವಿರ ನಗದು ಜೊತೆಗೆ ಪ್ರಶಸ್ತಿ ಪತ್ರದೊಂದಿಗೆ ಗೌರವಿಸಲಾಗುವುದು. ಅರ್ಹ ವಿದ್ಯಾರ್ಥಿಗಳು ಅಂಕಪಟ್ಟಿ, ಭಾವಚಿತ್ರ, ಜಾತಿದೃಢೀಕರಣ ಪತ್ರದೊಂದಿಗೆ ಸ್ವವಿವರವನ್ನು ಏ.12 ರೊಳಗಾಗಿ 9480870210 ಸಂಖ್ಯೆಗೆ ವಾಟ್ಸಾಪ್ ಮೂಲಕ ಕಳುಹಿಸಿಕೊಡಬೇಕು. ಹೆಚ್ಚಿನ ಮಾಹಿತಿಗೆ 94496 34753 ಸಂಖ್ಯೆಯನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಮೂಲಸೌಕರ್ಯದಿಂದ ವಂಚಿತ ಹುಣಸೇಪಾರೆ ಹಾಡಿ


ಮೂಲ ಸೌಕರ್ಯಗಳಿಲ್ಲದೆ ನಲುಗುತ್ತಿರುವ ಹಾಡಿಯ ಮನೆಯ ದುಸ್ಥಿತಿ

ಮಡಿಕೇರಿ, ಏ.7–ಕುಶಾಲನಗರ ತಾಲೂಕಿನ ಕೂಡಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸೀಗೆಹೊಸೂರು ಹುಣಸೆ ಪಾರೆ ಹಾಡಿಯ ಜೇನು ಕುರುಬ ಸಮುದಾಯ ಮೂಲ ಸೌಕರ್ಯಗಳಿಲ್ಲದೆ ನಲುಗುತ್ತಿದ್ದಾರೆ. 20 ವರ್ಷಗಳ ಹಿಂದೆ ಕಟ್ಟಿರುವಂತಹ ಮನೆಗಳು ಸಂಪೂರ್ಣ ಶಿಥಿಲಾವಸ್ಥೆಗೆ ತಲುಪಿದ್ದು ದುರಸ್ಥಿಗೂ ಬಡ ಮಂದಿ ಪರದಾಡುತ್ತಿದ್ದಾರೆ. ಈ ಮನೆಗಳಲ್ಲಿ ಶೌಚಾಲಯ ಹಾಗೂ ಸ್ನಾನಗೃಹದ ವ್ಯವಸ್ಥೆಯೂ ಇಲ್ಲದೇ ಮನೆಯ ಹೆಣ್ಣು ಮಕ್ಕಳು ಬಯಲನ್ನೇ ಅವಲಂಬಿಸಿದ್ದಾರೆ. ಈ ಸಮುದಾಯದ ಮಂದಿ ಸರಕಾರದಿಂದ ನೀಡಲಾಗುವ ದಾಖಲಾತಿಗಳಿಂದಲೂ ವಂಚಿತರಾಗಿ ಹಾಡಿಯಲ್ಲಿ ಬದುಕನ್ನು ಸವೆಸುತ್ತಿದೆ.

ಶಾಸಕ ಡಾ.ಮಂತರ್‌ಗೌಡ ಸೀಗೆ ಹೊಸೂರು ಹಾಗೂ ಹುಣಸೆಪಾರೆ ಹಾಡಿ ಗಳಿಗೆ ಭೇಟಿ ನೀಡಿದ ಸಂದರ್ಭ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಈ ಜೇನು ಕುರುಬ ಜನಾಂಗದವರಿಗೆ ಆಧಾರ್ ಕಾರ್ಡ್, ಬಿಪಿಎಲ್ ಕಾರ್ಡ್, ಚುನಾವಣಾ ಗುರುತಿನ ಚೀಟಿ ಹಾಗೂ ಜಾತಿ ಪ್ರಮಾಣ ಪತ್ರಗಳನ್ನು ಒದಗಿಸಲು ಹುಣಸೆಪಾರೆ ಹಾಡಿ ಯಲ್ಲಿ ಶಿಬಿರ ಆಯೋಜಿಸುವಂತೆ ಸೂಚಿಸಿದ್ದರು. ಆದರೆ ಇಂದಿಗೂ ಯಾವುದೇ ಅಧಿಕಾರಿಗಳು ಇತ್ತ ತಿರುಗಿ ನೋಡಿಲ್ಲ ಎಂದು ಹಾಡಿ ನಿವಾಸಿಗಳು ತಮ್ಮ ಅಳಲನ್ನು ತೋಡಿಕೊಳ್ಳುತ್ತಿದ್ದಾರೆ.

ಹುಣಸೆಪಾರೆ ಹಾಡಿಯ ನಿವಾಸಿಗಳು ಶೌಚಕ್ಕಾಗಿ ಬಯಲನ್ನೇ ಅವಲಂಬಿಸಿದ್ದೇವೆ. ಕುಡಿಯುವ ನೀರಿಗಾಗಿ ಪರದಾಡಬೇಕಾಗಿದೆ. ಕಳೆದ ಹಲವು ದಿನಗಳಿಂದ ಕುಡಿಯುವ ನೀರು ಸಿಗದೇ ನಮ್ಮ ಪರಿಸ್ಥಿತಿ ದುಸ್ಥರವಾಗಿದೆ ಎಂದು ಅಳಲು ತೋಡಿಕೊಳ್ಳುತ್ತಿದ್ದಾರೆ. ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಇತ್ತ ಕಡೆ ಗಮನ ಹರಿಸಿ ಮನೆ ದುರಸ್ಥಿ ಹಾಗೂ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಿಕೊಡಬೇಕು ಎಂದು ಇಲ್ಲಿನ ನಿವಾಸಿಗಳಾದ ಶಿವಪ್ಪ, ಸರಿತಾ, ಪ್ರವೀಣ್, ಶೈಲಾ, ಕುಮಾರ, ಅನಂತ್, ರೇಣು, ಶೋಭಾ, ಪಾಪು, ಅಕ್ಕಮ್ಮ, ಜಯಮ್ಮ, ಪ್ರಮೋದ್, ಅಜಿತ್, ಸೌಭಾಗ್ಯ ಆಗ್ರಹಿಸಿದ್ದಾರೆ.

ನಮ್ಮ ಮನವಿಯಂತೆ ಶಾಸಕರು ದಾಖಲಾತಿ ಮಾಡಿಕೊಡುವಂತೆ ಸೂಚಿಸಿದ್ದರೂ ಯಾವ ಅಧಿಕಾರಿಗಳು ಈವರೆಗೂ ಇತ್ತ ಕಡೆ ಗಮನ ಹರಿಸಿಲ್ಲ. ಇನ್ನಾದರೂ ಶಾಸಕರು ಅಧಿಕಾರಿಗಳು ಗಮನ ಹರಿಸಬೇಕೆಂದು ಹಾಡಿ ನಿವಾಸಿ ಶಿವಪ್ಪ ಒತ್ತಾಯಿಸಿದ್ದಾರೆ.

ಕೊಡವ ಸಂಸ್ಕೃತಿಯ ಆಟ್ ಪಾಟ್ ಪಡಿಪು ಶಿಬಿರಕ್ಕೆ ಚಾಲನೆ



ವಿರಾಜಪೇಟೆ, ಏ.7– ಕೊಡವ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕೊಡವ ಅಂತರಕೇರಿ ಸಾಂಸ್ಕೃತಿಕ ಪೈಪೋಟಿಯನ್ನು ನಡೆಸಲಾಗುವುದು ಎಂದು ಕೊಡವ ಸಮಾಜದ ಅಧ್ಯಕ್ಷ ಅಮ್ಮಣಿಚಂಡ ರವಿ ಉತ್ತಪ್ಪ ಹೇಳಿದರು.

ವಿರಾಜಪೇಟೆಯ ಏಳು ಕೊಡವ ಸಂಘಗಳು ಹಾಗೂ ಕೊಡವ ಸಮಾಜದ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿದ್ದ ಕೊಡವ ಸಾಂಸ್ಕೃತಿಯ ಆಟ್ ಪಾಟ್ ಪಡಿಪು ಶಿಬಿರದಲ್ಲಿ ದುಡಿ ಬಾರಿಸುವ ಮೂಲಕ ಉದ್ಘಾಟಿಸಿದ ಅವರು, ಏಳು ಕೇರಿಗಳನ್ನು ಒಂದುಗೂಡಿಸಿ ಮುಂದಿನ ದಿನಗಳಲ್ಲಿ ಬಾಳುಗೋಡುವಿನಲ್ಲಿರುವ ಫೆಡರೇಶನ್ ಆಫ್ ಕೊಡವ ಸಮಾಜದಲ್ಲಿ ನಡೆಯುವ ಕೊಡವ ನಮ್ಮೆ ಸಂದರ್ಭ ಅಂತರ ಕೇರಿ ಸಾಂಸ್ಕೃತಿಕ ಪೈಪೋಟಿ ಕಾರ್ಯಕ್ರಮ ನಡೆಸುವುದಾಗಿ ತಿಳಿಸಿದರು.

ಕೊಡವ ಸಂಘಗಳ ಒಕ್ಕೂಟದ ಅಧ್ಯಕ್ಷ ಮಾದಂಡ ಎಸ್.ಪೂವಯ್ಯ ಅಧ್ಯಕ್ಷತೆ ವಹಿಸಿದ್ದರು. ಪಂಜರುಪೇಟೆ ಕೊಡವ ಕೇರಿ ಅಧ್ಯಕ್ಷ ವಂಚೀರ ನಾಣಯ್ಯ ಮಾತನಾಡಿ ಆಟ್ ಪಾಟ್ ಪಡಿಪು ಉದ್ದೇಶವನ್ನು ಸಭೆಗೆ ತಿಳಿಸಿದರು, ಶಿಬಿರದ ಸಂಪನ್ಮೂಲ ವ್ಯಕ್ತಿಯಾಗಿ ಅಚ್ಚಪಂಡ ಪಟ್ಟು ಅಯ್ಯಪ್ಪ ಭಾಗವಹಿಸಿ ಮಾತನಾಡಿದರು, ಶಿಬಿರದ ಸಂಚಾಲಕರಾದ ಕ್ಯಾಪ್ಟನ್ ಬಿದ್ದಂಡ ನಾಣಯ್ಯ ಹಾಗೂ ಮೂಕೊಂಡ ಪ್ರೀತ್ ಈರಪ್ಪ, ಶಿಬಿರದ ಸಂಪನ್ಮೂಲ ವ್ಯಕ್ತಿಗಳಾಗಿ ಅಪ್ಪನೆರವಂಡ ರತಿ ಕಾವೇರಪ್ಪ, ಚೊಟ್ಟಂಡ ತಶ್ವಿ ಸೋಮಯ್ಯ ಭಾಗವಹಿಸಿದ್ದರು.

ಚೇನಂಡ ಕಪ್ ಹಾಕಿ ಉತ್ಸವ

ಗೋಲಿಗೊಂದು ಗಿಡ ನೆಟ್ಟು ಪರಿಸರಕ್ಕೂ ಆದ್ಯತೆ


ಹಾಕಿ ಉತ್ಸವ ಆಯೋಜನಾ ಸಮಿತಿ ಪ್ರಮುಖರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು

ಮಡಿಕೇರಿ,ಏ.7–ಚೇನಂಡ ಕಪ್ ಹಾಕಿ ಉತ್ಸವದ ಪಂದ್ಯಾವಳಿಯಲ್ಲಿ ದಾಖಲಾಗುವ ಪ್ರತಿ ಗೋಲಿಗೂ ಒಂದು ಗಿಡ ಎನ್ನುವ ಗುರಿ ಹೊಂದಿದ್ದು, ಈಗಾಗಲೆ ಜಿಲ್ಲೆಯ ವಿವಿಧೆಡೆಗಳಲ್ಲಿ 2800ಕ್ಕೂ ಹೆಚ್ಚಿನ ಗಿಡಗಳನ್ನು ನೆಟ್ಟಿರುವುದಾಗಿ ಚೇನಂಡ ಕಪ್ ಹಾಕಿ ಉತ್ಸವ ಆಯೋಜನಾ ಸಮಿತಿಯ ಪ್ರಮುಖರು ತಿಳಿಸಿದರು.

ಕ್ರೀಡೆಯೊಂದಿಗೆ ಪರಿಸರಕ್ಕೂ ಒತ್ತು ನೀಡುವ ಚಿಂತನೆಯಂತೆ ಚೇನಂಡ ಕುಟುಂಬಸ್ಥರು ಈಗಾಗಲೆ ಟಿ.ಶೆಟ್ಟಿಗೇರಿ ಅಯ್ಯಪ್ಪ ದೇವಸ್ಥಾನಕ್ಕೆ ಒಳಪಟ್ಟ ಜಾಗದಲ್ಲಿ 1500 ಗಿಡಗಳನ್ನು, ಕರಡ ಮಲೆತಿರಿಕೆಯಲ್ಲಿ, ಕೋಕೇರಿ ಭಗವತಿ ದೇವಸ್ಥಾನದ ಆವರಣ, ಸಿದ್ದಾಪುರದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ವೃಕ್ಷಾರೋಹಣ ಮಾಡಿದೆ. ಸೋಮವಾರ ಪೇಟೆಯಲ್ಲಿ ಶಾಸಕ ಡಾ.ಮಂತರ್ ಗೌಡ ಅವರು ಗಿಡ ನೆಡುವ ಕಾರ್ಯದಲ್ಲಿ ಕೈ ಜೋಡಿಸಿ ಗಮನ ಸೆಳೆದಿರುವುದಾಗಿ ಹೇಳಿದರು.

ಜೇನು ಪೆಟ್ಟಿಗೆ ಕೊಡುಗೆ: ಪಂದ್ಯಾವಳಿಯಲ್ಲಿ 383 ತಂಡಗಳು ಪಾಲ್ಗೊಂಡಿದ್ದು, ಆರಂಭಿಕ ಸುತ್ತಿನ ಪಂದ್ಯಗಳು ಕುತೂಹಲ ಭರಿತವಾಗಿ ನಡೆಯುತ್ತಿವೆ. ಮೊದಲ ಸುತ್ತಿನ ಪಂದ್ಯಗಳಲ್ಲಿ ಪರಾಭವಗೊಂಡ ತಂಡಗಳಿಗೆ ಒಂದು ಜೇನು ಪೆಟ್ಟಿಗೆಯನ್ನು ಪಂದ್ಯಾವಳಿಯ ಸವಿ ನೆನಪಿಗಾಗಿ ಹಾಗೂ ಜೇನು ಕೃಷಿಯ ಪುನಶ್ಚೇತನಕ್ಕೆ ಪೂರಕವಾಗಿ ನೀಡಲಾಗುತ್ತಿದೆ ಎಂದು ಮಾಹಿತಿ ನೀಡಿದರು. ಪಂದ್ಯಾವಳಿಯ ಜೊತೆಯಲ್ಲೆ ಕಾಫಿ ಮಂಡಳಿಯ ಸಹಕಾರದೊಂದಿಗೆ ಏ.12 ರಂದು ಕಾಫಿ ಕೃಷಿಯ ಕುರಿತಾದ ವಿಚಾರ ಸಂಕಿರಣವನ್ನು, ಏ.19ರಂದು ಪೊನ್ನಂಪೇಟೆ ಅರಣ್ಯ ಕಾಲೇಜಿನ ಸಹಕಾರದೊಂದಿಗೆ ಜೇನು ಕೃಷಿಯ ನಿರ್ವಹಣೆ ವಿಷಯದ ಕುರಿತ ವಿಚಾರ ಸಂಕಿರಣವನ್ನು ಆಯೋಜಿಸಲಾಗಿದೆ. ಈ ವಿಚಾರ ಸಂಕಿರಣಗಳು ಆಯಾ ದಿನದಂದು ಬೆ.11ಗಂಟೆಗೆ ಆರಂಭಗೊಳ್ಳಲಿದೆ ಎಂದು ತಿಳಿಸಿದರು.

ಕಲಾ ಸಂಸ್ಕೃತಿ ತರಬೇತಿ: ಚೇನಂಡ ಹಾಕಿ ಉತ್ಸವ ಸಮಿತಿಯು ನಾಪೋಕ್ಲು ಕೊಡವ ಸಮಾಜದ ಸಹಕಾರದೊಂದಿಗೆ ಏ.10ರಂದು ಕೊಡವ ಸಮುದಾಯದ ಸಾಂಸ್ಕೃತಿಕ ಕಲಾ ಪ್ರಕಾರಗಳಾದ ಬಾಳೋಪಾಟ್, ಉಮ್ಮತ್ತಾಟ್‌ಗಳ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಾಗಿ ವಿವರಿಸಿದರು. ಈ ಎಲ್ಲಾ ಚಟುವಟಿಕೆಗಳ ಜೊತೆಯಲ್ಲೆ ಮುಂದಿನ ದಿನಗಳಲ್ಲಿ ಕೊಡವ ಕುಟುಂಬಗಳ ನಡುವಣ 100x4 ರಿಲೇ ಸ್ಪರ್ಧೆ, ಮ್ಯಾರಥಾನ್ ಸ್ಪರ್ಧೆಗಳನ್ನು ಹಾಗೂ ಆಕರ್ಷಕ ಶ್ವಾನ ಪ್ರದರ್ಶನವನ್ನೂ ನಡೆಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಮಿತಿಯ ಪ್ರಧಾನ ಕಾರ್ಯದರ್ಶಿ ಚೇನಂಡ ಮನು ಮಾದಯ್ಯ, ಮಾಧ್ಯಮ ವಕ್ತಾರ ಚೇನಂಡ ಸುರೇಶ್ ನಾಣಯ್ಯ, ನಿರ್ದೇಶಕರುಗಳಾದ ದೇವಯ್ಯ, ಗಿರೀಶ್, ಅಜಿತ್ ಉಪಸ್ಥಿತರಿದ್ದರು.

ಇಂದು ಮಿನಿ ಉದ್ಯೋಗ ಮೇಳ

ಮಡಿಕೇರಿ ಏ.7–ಜಿಲ್ಲಾ ಉದ್ಯೋಗ ವಿನಿಮಯ ಇಲಾಖೆ ವತಿಯಿಂದ ಏ. 8 ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಮಿನಿ "ಉದ್ಯೋಗಮೇಳ" ನಡೆಯಲಿದೆ.

ಈ ಉದ್ಯೋಗ ಮೇಳದಲ್ಲಿ ಜೋಯ್ ಆಲುಕಾಸ್ ಜ್ಯುವೆಲ್ಲರಿ, ಮೈಸೂರು, ಕಲ್ಯಾಣಿ ಮೋಟಾರ್ಸ್ ಕಾರ್ ಶೋರೂಂ, ಮಡಿಕೇರಿ, ಕೂರ್ಗ್ ಕ್ಲಿಫ್ಸ್ ರೆಸಾರ್ಟ್, ಮಡಿಕೇರಿ, ಹ್ಯೂಂಡಾಯಿ ಕಾರ್ ಶೋ ರೂಮ್, ಮಡಿಕೇರಿ, ಇವೊಲೋಬ್ಯಾಕ್ ರೆಸಾರ್ಟ್, ಮಡಿಕೇರಿ ಇವರು ತಮ್ಮ ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಿದ್ದಾರೆ.

ಈ ಮೇಳದಲ್ಲಿ ಖಾಸಗಿ ಕಂಪನಿಗಳು ಭಾಗವಹಿಸಿ ತಮ್ಮಲ್ಲಿ ಖಾಲಿಯಿರುವ ಹುದ್ದೆಗಳನ್ನು ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳಲಿದ್ದಾರೆ. ಈ ಮೇಳದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೋಮ, ಪದವಿ ಹಾಗೂ ಸ್ನಾತಕೋತರ ಪದವಿ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಭಾಗವಹಿಸಿ ಉದ್ಯೋಗದ ನೆರವನ್ನು ಪಡೆಯಬಹುದಾಗಿದೆ.

ಅಭ್ಯರ್ಥಿಗಳು ವಿದ್ಯಾರ್ಹತೆಯ ಮೂಲ ದಾಖಲಾತಿಗಳು, ಅನುಭವ ಪ್ರಮಾಣ ಪತ್ರ(ಅನ್ವಯಿಸುವವರಿಗೆ ಮಾತ್ರ) ಹಾಗೂ ಸ್ವ-ವಿವರಗಳ ಪ್ರತಿಗಳೊಂದಿಗೆ ಉದ್ಯೋಗ ಮೇಳಕ್ಕೆ ಹಾಜರಾಗುವಂತೆ ಜಿಲ್ಲಾ ಉದ್ಯೋಗಾಧಿಕಾರಿ ಸಿ.ಬಿ.ಮಂಜುನಾಥ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಜಾಬ್ ಕೋಆರ್ಡಿನೇಟರ್ 8296020826 ನ್ನು ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

ಇಂದು ಲೋಕಾಯುಕ್ತದಿಂದ ದೂರು ಅರ್ಜಿ ಸ್ವೀಕಾರ

ಮಡಿಕೇರಿ ಏ.7– ಲೋಕಾಯುಕ್ತ ಮಡಿಕೇರಿಯ ಅಧಿಕಾರಿಗಳು ಏ.8ರ ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1ಗಂಟೆಯವರೆಗೆ ಮಡಿಕೇರಿ ತಾಲೂಕು ಕಚೇರಿ ಸಭಾಂಗಣದಲ್ಲಿ ರಾಜ್ಯ ಲೋಕಾಯುಕ್ತ ಕಾಯಿದೆಯಡಿ ದೂರು ಅರ್ಜಿ ಸ್ವೀಕರಿಸಲಿದ್ದಾರೆ. ಭರ್ತಿ ಮಾಡಿದ ಮತ್ತು ನೋಟರಿಯಿಂದ ಅಫಿಡವಿಟ್ ಮಾಡಿಸಿದ ಅರ್ಜಿ ಸ್ವೀಕರಿಸಲಿದ್ದಾರೆ. ಕಚೇರಿಗಳಲ್ಲಿ ಅಧಿಕೃತ ಕೆಲಸಗಳಲ್ಲಿ ವಿಳಂಬ ಹಾಗೂ ಇನ್ನಿತರ ತೊಂದರೆ ನೀಡುತ್ತಿರುವ ಅಧಿಕಾರಿ/ನೌಕರರ ವಿರುದ್ದ ದೂರುಗಳನ್ನು ನಿಗದಿತ ಪತ್ರದಲ್ಲಿ ನೀಡಬಹುದಾಗಿದೆ. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ 08272–295297ನ್ನು ಸಂಪರ್ಕಿಸಬಹುದು ಎಂದು ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ತಿಳಿಸಿದ್ದಾರೆ.

ಬೈಕ್‌ಗೆ ಈಚರ್ ಮಿನಿ ಲಾರಿ ಡಿಕ್ಕಿ: ಮಹಿಳೆ ಸಾವು





ಬೇಗೂರು, ಏ.7– ಬೈಕ್‌ಗೆ ಈಚರ್ ಮಿನಿ ಲಾರಿ ಡಿಕ್ಕಿ ಹೊಡೆದ ಪರಿಣಾಮ ಮಹಿಳೆ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಇಲ್ಲಿಗೆ ಸಮೀಪದ ಮೈಸೂರು–ಊಟಿ ರಾಷ್ಟ್ರೀಯ ಹೆದ್ದಾರಿ 766ರ ಅರೇಪುರ ಗೇಟ್ ಬಳಿ ಮಂಗಳವಾರ ಸಂಜೆ ನಡೆದಿದೆ.

ನಂಜನಗೂಡು ತಾಲೂಕಿನ ಕರಳಪುರ ಗ್ರಾಮದ ನಿವಾಸಿ ಶಿವಮ್ಮ(55) ಸಾವನ್ನಪ್ಪಿದವರು. ಈಕೆ ಬೈಕ್‌ನಲ್ಲಿ ಪತಿ ಮಹದೇವಶೆಟ್ಟಿ ಹಾಗೂ ಇಬ್ಬರು ಮೊಮ್ಮಕ್ಕಳೊಂದಿಗೆ ಬೈಕ್‌ನಲ್ಲಿ ಕರಳಪುರ ಗ್ರಾಮಕ್ಕೆ ತೆರಳುತ್ತಿದ್ದರು. ಈ ವೇಳೆ ಹಿಂಬದಿಯಿಂದ ಬಂದ ಈಚರ್ ಮಿನಿ ಲಾರಿ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಅಪಘಾತದ ರಭಸಕ್ಕೆ ಮಹಿಳೆ ರಸ್ತೆಗೆ ಬಿದ್ದಿದ್ದು, ಆಕೆಯ ತಲೆ ಮೇಲೆ ವಾಹನದ ಚಕ್ರ ಹರಿದಿದ್ದು, ತೀವ್ರ ಗಾಯಗೊಂಡು ಶಿವಮ್ಮ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಅಪಘಾತದಲ್ಲಿ ಪತಿ ಮಹದೇವಶೆಟ್ಟಿ, ಇಬ್ಬರು ಮೊಮ್ಮಕ್ಕಳು ಸಣ್ಣ ಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬೇಗೂರು ಠಾಣೆ ಪೊಲೀಸರು ಪರಿಶೀಲನೆ ನಡೆಸಿ, ಶವವನ್ನು ಬೇಗೂರು ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗೆ ರವಾನಿಸಿದರು. ಬಳಿಕ ಗಾಯಾಳುಗಳಿಗೆ ಬೇಗೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಎರಡೂ ವಾಹನಗಳನ್ನು ವಶಕ್ಕೆ ಪಡೆದಿರುವ ಬೇಗೂರು ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಕೊಳ್ಳೇಗಾಲ ರಸ್ತೆಗಳ ಅಭಿವೃದ್ಧಿಗೆ 56 ಕೋಟಿ ಅನುದಾನ

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಎ.ಆರ್.ಕೃಷ್ಣಮೂರ್ತಿ ಚಾಲನೆ


ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎ.ಆರ್.ಕೃಷ್ಣಮೂರ್ತಿ ಗುದ್ದಲಿ ಪೂಜೆ ನೆರವೇರಿಸಿದರು.

ಚಾಮರಾಜನಗರ, ಏ.7– ಕೊಳ್ಳೇಗಾಲ ಕ್ಷೇತ್ರ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿಗೆ ಎರಡೂವರೆ ವರ್ಷಗಳ ಅವಧಿಯಲ್ಲಿ ರಾಜ್ಯ ಸರ್ಕಾರ 56 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದ್ದು, ಪ್ರತಿ ಹಳ್ಳಿಗಳಲ್ಲೂ ಒಂದಲ್ಲ ಒಂದು ಕಾಮಗಾರಿ ನಡೆಯುತ್ತಿದೆ ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ತಿಳಿಸಿದರು.

ತಾಲೂಕಿನ ಆಲೂರು ಹೊಮ್ಮ ಗ್ರಾಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ನಾನು ಶಾಸಕನಾದ ಬಳಿಕ ಬಹಳಷ್ಟು ಯೋಜನೆಗಳನ್ನು ಜಾರಿಗೊಳಿಸಿದ್ದೇನೆ. ಮುಖ್ಯಮಂತ್ರಿಗಳ ವಿಶೇಷ ಯೋಜನೆ, ವಿವಿಧ ಇಲಾಖೆಗಳ ಅಡಿ ವಿಶೇಷ ಒತ್ತು ನೀಡಿ ಆಯಾಯ ಇಲಾಖೆ ಸಚಿವರ ಮೂಲಕ ನೂರಾರು ಕೋಟಿ ರೂ. ಅನುದಾನ ಬಿಡುಗಡೆ ಮಾಡಿಸಿದ್ದು, ಕ್ಷೇತ್ರದಲ್ಲಿ ಅಭಿವೃದ್ಧಿ ಪರ್ವ ಆರಂಭವಾಗಿದೆ ಎಂದರು.

ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಆಲೂರು ಹೊಮ್ಮದಿಂದ ಕಂದಹಳ್ಳಿ ಮಹದೇಶ್ವರ ದೇವಸ್ಥಾನವರೆಗಿನ 5 ಕಿಮೀ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿಗೆ ಮುಖ್ಯಮಂತ್ರಿಗಳ ಅನುದಾನದಡಿ 5 ಕೋಟಿ ಬಿಡುಗಡೆಯಾಗಿದ್ದು, ಇಂದಿನಿಂದ ಕಾಮಗಾರಿ ಆರಂಭವಾಗಲಿದೆ. ನಾನು ಗ್ರಾಮಕ್ಕೆ ಬಂದಾಗಲೆಲ್ಲಾ ಗ್ರಾಮಸ್ಥರು ರಸ್ತೆ ಮಾಡಿಕೊಡುವಂತೆ ಮನವಿ ಮಾಡುತ್ತಿದ್ದರು. ಹೀಗಾಗಿ ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ಹಣ ಬಿಡುಗಡೆಗೊಳಿಸಿದ್ದು, ಇಂದು ಅಧಿಕಾರಿಗಳೊಂದಿಗೆ ಭೂಮಿ ಪೂಜೆ ನೆರವೇರಿಸಿದ್ದೇನೆ ಎಂದರು.

ನಾನು ಮೊದಲ ಬಾರಿ ಶಾಸಕನಾದ ವೇಳೆ ಈ ರಸ್ತೆ ಅಭಿವೃದ್ಧಿಗೊಳಿಸಿದ್ದೆ. 20 ವರ್ಷಗಳ ಬಳಿಕ ಹಳ್ಳ ಬಿದ್ದು ಹಾಳಾಗಿದ್ದ ರಸ್ತೆ ಅಭಿವೃದ್ಧಿಗೆ ಮತ್ತೆ ಚಾಲನೆ ನೀಡಿದ್ದೇನೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆ ಸಮಿತಿ ಅಧ್ಯಕ್ಷ ಹೆಚ್.ವಿ.ಚಂದ್ರು, ಮುಖಂಡರಾದ ಕಂದಹಳ್ಳಿ ನಂಜುಂಡಸ್ವಾಮಿ, ಎಪಿಎಂಸಿ ನಿರ್ದೇಶಕ ಹೊಮ್ಮ ರವಿಶಂಕರ ಮೂರ್ತಿ, ಗ್ರಾಪಂ ಮಾಜಿ ಅಧ್ಯಕ್ಷ ರಾಮು, ಪಿಡಬ್ಲ್ಯೂಡಿ ಎಇಇ ಪುರುಷೋತ್ತಮ್, ಸುರೇಂದ್ರ, ಕೆಆರ್‌ಐಡಿಎಲ್ ಎಇಇ ಚಿಕ್ಕಲಿಂಗಯ್ಯ, ಪಿಡಿಓ ವಸಂತ್, ಜಿಲ್ಲಾ ಪ್ರಗತಿ ಪರಿಶೀಲನಾ ಸಮಿತಿ ಸದಸ್ಯ ಬೂದಂಬಳ್ಳಿ ಶಂಕರ್, ಅಶ್ವಥ್, ರಾಜೇಶ್, ವೆಂಕಟೇಶ್, ಮಯೂರ, ವೆಂಕಟರಂಗನಾಯಕ, ಚಂದ್ರೇಗೌಡ, ಶಿವಣ್ಣ, ಪರಶಿವ, ನಾಗೇಂದ್ರ, ಕುಮಾರ್, ಸುರೇಂದ್ರ ಇತರರಿದ್ದರು.

> “ಹೊಮ್ಮ ಗ್ರಾಮ ಪರಿಮಿತಿಯಲ್ಲಿ ಕೆಆರ್ ಐಡಿಎಲ್‌ನಿಂದ ಗ್ರಾಮದ ನಾಯಕರ ಬೀದಿ, ಲಿಂಗಾಯತರ ಬೀದಿ, ಕುರುಬರ ಬೀದಿ, ಪ.ಜಾತಿಗೆ ಸೇರಿದ ಬೀದಿಗಳಲ್ಲಿ 56 ಲಕ್ಷ ರೂ. ವೆಚ್ಚದ ಸಿಮೆಂಟ್ ರಸ್ತೆ, ಚರಂಡಿ ನಿರ್ಮಾಣಕ್ಕೆ ಚಾಲನೆ ನೀಡಿದ್ದು, ಕಾಮಗಾರಿಯನ್ನು ಗುಣಮಟ್ಟದಿಂದ ಮಾಡಿಸಿಕೊಳ್ಳಬೇಕು. ಪಕ್ಕದ ಬಸವರಾಜಪುರದಲ್ಲಿ 30 ಲಕ್ಷ ರೂ. ವೆಚ್ಚದಲ್ಲಿ ರಸ್ತೆ, ಚರಂಡಿ, ಸಿ.ಸಿ.ರಸ್ತೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದ್ದೇನೆ. ಗ್ರಾಮದಲ್ಲಿ ಈ ಮೊದಲು ಮೂಲ ಸೌಕರ್ಯ ಇರಲಿಲ್ಲ. ಚುನಾವಣೆ ವೇಳೆ ಮೂಲ ಸೌಕರ್ಯ ಕಲ್ಪಿಸುವಂತೆ ಗ್ರಾಮಸ್ಥರು ಮನವಿ ಮಾಡಿದ್ದ ಮೇರೆಗೆ ಅನುದಾನ ನೀಡಿ ಕಾಮಗಾರಿಗೆ ಚಾಲನೆ ನೀಡಿದ್ದೇನೆ.
> – ಎ.ಆರ್.ಕೃಷ್ಣಮೂರ್ತಿ, ಶಾಸಕ

ಏ.21ರಂದು 600 ಕೋಟಿ ವೆಚ್ಚದ ಕಾಮಗಾರಿಗಳಿಗೆ ಸಿಎಂ ಚಾಲನೆ

ಪೂರ್ವಭಾವಿ ಸಭೆಯಲ್ಲಿ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಮಾಹಿತಿ


ಪೂರ್ವಭಾವಿ ಸಭೆಯಲ್ಲಿ ಶಾಸಕ ಹೆಚ್.ಎಂ.ಗಣೇಶಪ್ರಸಾದ್ ಮಾತನಾಡಿದರು.

ಗುಂಡ್ಲುಪೇಟೆ, ಏ.7(ಸೋಮ್.ಜಿ)– ತಾಲೂಕಿನ 110 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ 475 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು, ಬೊಮ್ಮನಹಳ್ಳಿ ಅಂಬೇಡ್ಕರ್ ವಸತಿ ಶಾಲೆ, ಬೇಗೂರು ಹತ್ತಿ ಮಾರುಕಟ್ಟೆ, ತೆರಕಣಾಂಬಿ ಆಸ್ಪತ್ರೆ, ವಾಲ್ಮೀಕಿ ಭವನ ಉದ್ಘಾಟನೆ ಸೇರಿದಂತೆ 600 ಕೋಟಿಗೂ ಅಧಿಕ ವೆಚ್ಚದ ಕಾಮಗಾರಿಗಳಿಗೆ ಏ.21ರಂದು ಸಿಎಂ ಸಿದ್ದರಾಮಯ್ಯ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ ಎಂದು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ತಿಳಿಸಿದರು.

ತಾಲೂಕಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಪಟ್ಟಣದ ಖಾಸಗಿ ಕಲ್ಯಾಣ ಮಂಟಪದಲ್ಲಿ ಗುಂಡ್ಲುಪೇಟೆ ಮತ್ತು ಬೇಗೂರು ಬ್ಲಾಕ್ ಕಾಂಗ್ರೆಸ್ ವತಿಯಿಂದ ಆಯೋಜಿಸಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಪಟ್ಟಣದ ಡಿ.ದೇವರಾಜ ಅರಸು ಕ್ರೀಡಾಂಗಣದಲ್ಲಿ ಏ.21 ರಂದು ಬೃಹತ್ ಕಾರ್ಯಕ್ರಮ ನಡೆಯಲಿದ್ದು, ಸಿಎಂ ಸಿದ್ದರಾಮಯ್ಯ ಜೊತೆಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್, ಸಮಾಜ ಕಲ್ಯಾಣ ಇಲಾಖೆ ಸಚಿವ ಹೆಚ್.ಸಿ.ಮಹದೇವಪ್ಪ, ಸಚಿವರಾದ ಸತೀಶ್ ಜಾರಕಿಹೊಳಿ, ಶಿವಾನಂದ ಪಾಟೀಲ್, ದಿನೇಶ್ ಗುಂಡುರಾವ್, ಸಂಸದ ಸುನೀಲ್ ಬೋಸ್ ಸೇರಿದಂತೆ ಚಾ.ನಗರ–ಮೈಸೂರು ಭಾಗದ ಎಲ್ಲಾ ಶಾಸಕರು ಭಾಗವಹಿಸಲಿದ್ದಾರೆ. ಈ ಬೃಹತ್ ಸಮಾವೇಶ ಮೂಲಕ ಕಾಂಗ್ರೆಸ್ ಶಕ್ತಿ ತೋರಿಸಬೇಕು ಎಂದರು.

ಬೃಹತ್ ಸಮಾವೇಶಕ್ಕೆ 10 ರಿಂದ 15 ಸಾವಿರ ಜನರನ್ನು ಸೇರಿಸಬೇಕು. ಇದಕ್ಕಾಗಿ ಪ್ರತಿ ಗ್ರಾಮದಿಂದ ಕನಿಷ್ಟ 100 ಮಂದಿಯಾದರು ಬರಬೇಕು. ಕಾರ್ಯಕ್ರಮಕ್ಕೆ ಜನರನ್ನು ಕರೆತರಲು ಗ್ರಾಪಂ ವ್ಯಾಪ್ತಿಯಲ್ಲಿ ಮುಖಂಡರನ್ನು ನೇಮಕ ಮಾಡಿ ವಾಹನ ವ್ಯವಸ್ಥೆ ಸೇರಿದಂತೆ ಇನ್ನಿತರ ವ್ಯವಸ್ಥೆ ಕಲ್ಪಿಸಲಾಗಿದೆ. ಗ್ಯಾರಂಟಿ ಮೂಲಕ ಮಹಿಳೆಯರು ಹೆಚ್ಚು ಸೌಲಭ್ಯ ಪಡೆದಿರುವ ಹಿನ್ನಲೆಯಲ್ಲಿ ಸಮಾವೇಶಕ್ಕೆ ಅಧಿಕ ಸಂಖ್ಯೆಯಲ್ಲಿ ಮಹಿಳೆಯರನ್ನು ಕರೆ ತರಬೇಕು. ಜೊತೆಗೆ ಕಾಂಗ್ರೆಸ್ ಸರ್ಕಾರದ ಸಾಧನೆಯನ್ನು ಜನರಿಗೆ ತಿಳಿಸುವ ಕೆಲಸ ಮಾಡಬೇಕು. ನಮ್ಮ ಕ್ಷೇತ್ರದ ಅಭಿವೃದ್ಧಿಯೂ ಕೂಡ ಕಣ್ಮುಂದೆ ಇದ್ದು, ಯಾರೇ ಬಂದರು ಉತ್ತರಿಸಲು ಸವಾಲು ಸ್ವೀಕರಿಸಲು ಸಿದ್ದನಿದ್ದೇನೆ ಎಂದು ಚಾಲೆಂಜ್ ಹಾಕಿದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ, ಕಾಡಾ ಅಧ್ಯಕ್ಷ ಮರಿಸ್ವಾಮಿ ಮಾತನಾಡಿ, ತಾಲೂಕಿನಲ್ಲಿ ಕಾಂಗ್ರೆಸ್ ಭದ್ರವಾಗಿದೆ. ಆಧುನಿಕ ಭಗೀರಥ ಎನಿಸಿರುವ ಶಾಸಕ ಗಣೇಶ ಪ್ರಸಾದ್ ಅವರು 110 ಕೆರೆಗಳಿಗೆ ನೀರು ತುಂಬಿಸಲು 475 ಕೋಟಿ ಬಿಡುಗಡೆ ಮಾಡಿಸಿದ್ದಾರೆ. ಈ ಹಿಂದೆ ಮಾಜಿ ಸಚಿವ ಮಹದೇವಪ್ರಸಾದ್ ಪ್ರಯತ್ನದಿಂದ ತಾಲೂಕಿನ ಕೆರೆಗಳಿಗೆ ನೀರು ತುಂಬಿಸಲಾಗಿತ್ತು. ಅವರಂತೆ ಅವರ ಪುತ್ರ ಗಣೇಶ ಪ್ರಸಾದ್ ಜನರ ಕಷ್ಟ ಸುಖಗಳಿಗೆ ಸ್ಪಂದಿಸಿ ಜನಮನ್ನಣೆ ಪಡೆಯುತ್ತಿದ್ದಾರೆ. ಆದ್ದರಿಂದ ಮುಂಬರುವ ಚುನಾವಣೆಯಲ್ಲಿ ಹಿಂದಿನ 36 ಸಾವಿರ ಲೀಡ್ 50 ಸಾವಿರ ಆಗಬೇಕು ಎಂದರು.

ಸಭೆಯಲ್ಲಿ ಪುರಸಭೆ ಮಾಜಿ ಉಪಾಧ್ಯಕ್ಷ ಅಣ್ಣಯ್ಯಸ್ವಾಮಿ, ಜಿಪಂ ಮಾಜಿ ಸದಸ್ಯರಾದ ಕಬ್ಬಹಳ್ಳಿ ಮಹೇಶ್, ಕೆರೆಹಳ್ಳಿ ನವೀನ್, ಕಾಂಗ್ರೆಸ್ ವಕ್ತಾರ ಬಿ.ಜಿ.ಶಿವಕುಮಾರ್, ತಾಪಂ ಮಾಜಿ ಅಧ್ಯಕ್ಷ ಬಸವರಾಜು, ಡಾ.ರತ್ನಮ್ಮ, ಚಾಮುಲ್ ನಿರ್ದೇಶಕ ನಂಜುಂಡ ಪ್ರಸಾದ್, ರಾಜೇಶ್, ಚಿಕ್ಕಾಟಿ ಬಂಗಾರನಾಯಕ ಮಾತನಾಡಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಜಶೇಖರ್, ಜಿಪಂ ಮಾಜಿ ಸದಸ್ಯರಾದ ಚನ್ನಪ್ಪ, ಬೊಮ್ಮಯ್ಯ, ಟಿಎಪಿಸಿಎಂಎಸ್ ಅಧ್ಯಕ್ಷ ಮಡಿವಾಳಪ್ಪ, ಎಪಿಎಂಸಿ ಅಧ್ಯಕ್ಷ ರಂಗೂಪುರ ನಾಗರಾಜು, ಸೋಮಹಳ್ಳಿ ಶಿವನಾಗಪ್ಪ, ಕುಮಾರಸ್ವಾಮಿ ಸೇರಿದಂತೆ ಹಲವು ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಜರಿದ್ದರು.

> “ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಾಲೂಕಿಗೆ ಹೊಸದಾಗಿ ಟ್ರಾಫಿಕ್ ಠಾಣೆ, ಪಟ್ಟಣದಲ್ಲಿ ಯುಜಿಡಿ ನಿರ್ಮಾಣಕ್ಕೆ ಬಜೆಟ್‌ನಲ್ಲಿ ಅನುದಾನ ಮಂಜೂರು ಮಾಡಿದ್ದಾರೆ. ಜೊತೆಗೆ ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ಸಮುದಾಯ ಭವನ, ದೇವಸ್ಥಾನ, ರಸ್ತೆ ಕಾಮಗಾರಿಗೆ ಹೆಚ್ಚಿನ ಒತ್ತು ನೀಡಲಾಗಿದೆ. 40 ಕೋಟಿ ವೆಚ್ಚದಲ್ಲಿ ವಿವಿಧೆಡೆ ಕೆಇಬಿ ಉಪಕೇಂದ್ರ, ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ಇಷ್ಟಾದರೂ ವಿಪಕ್ಷದವರು ಸರ್ಕಾರದಲ್ಲಿ ಹಣವಿಲ್ಲ ಎಂದು ಹೇಳುತ್ತಿರುವುದು ಸುಳ್ಳು.
> – ಹೆಚ್.ಎಂ.ಗಣೇಶಪ್ರಸಾದ್, ಶಾಸಕ.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆ ಅಧಿಸೂಚನೆ ಪ್ರಕಟ

ಚಾಮರಾಜನಗರ, ಏ.7– ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದಿಂದ 2026–31ನೇ ಸಾಲಿಗೆ ವಿವಿಧ ಹಂತಗಳಲ್ಲಿ ಚುನಾವಣೆ ನಡೆಸಲು ಚುನಾವಣಾಧಿಕಾರಿ ನೇಮಕ ಮಾಡಿ ಅಧಿಸೂಚನೆ ಹೊರಡಿಸಲಾಗಿದೆ.

ಸಂಘದ ತಾಲೂಕು ಘಟಕದ ಕಾರ್ಯಕಾರಿ ಸಮಿತಿ ನಿರ್ದೇಶಕರ ಆಯ್ಕೆ ಚುನಾವಣೆ ಏ.19 ರಂದು ನಡೆಯಲಿದ್ದು, ಏ.11, 12 ರಂದು ಬೆಳಗ್ಗೆ 11 ರಿಂದ ಸಂಜೆ 6ರವರೆಗೆ ನಾಮಪತ್ರ ಸಲ್ಲಿಕೆ, ಏ.13ರಂದು ನಾಮಪತ್ರಗಳ ಪರಿಶೀಲನೆ, ಏ.14 ರಂದು ಸಂಜೆ 6ವರೆಗೆ ನಾಮ ಪತ್ರ ವಾಪಸ್ ಪಡೆಯಬಹುದು. 19 ರಂದು ಬೆಳಗ್ಗೆ 8.30 ರಿಂದ ಸಂಜೆ 4.30 ವರೆಗೆ ಮತದಾನ ನಡೆಯಲಿದೆ. ನಂತರ ಅದೇ ದಿನ ಮತಗಳ ಎಣಿಕೆ ನಡೆದು ಫಲಿತಾಂಶ ಪ್ರಕಟಿಸಲಾಗುತ್ತದೆ.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಘಟಕದ ಪದಾಧಿಕಾರಿಗಳ ಆಯ್ಕೆ ಚುನಾವಣೆಗೆ ಏ.22 ರಂದು ಅಧಿಸೂಚನೆ ಪ್ರಕಟಣೆಯಾಗಲಿದೆ. ಏ.23, 24ರ ಬೆಳಗ್ಗೆ 11ರಿಂದ ಸಂಜೆ 6ರವರೆಗೆ ನಾಮಪತ್ರ ಸಲ್ಲಿಸಬಹುದು. ಏ.25ರಂದು ನಾಮಪತ್ರ ಪರಿಶೀಲನೆ, ಏ.26ರ ಸಂಜೆ 6 ರವರೆಗೆ ನಾಮಪತ್ರ ವಾಪಸ್ ಪಡೆಯಬಹುದು. ಅಗತ್ಯ ಬಿದ್ದರೆ ಏ.30ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 12ರವರೆಗೆ ಮತದಾನ ನಡೆಯಲಿದೆ. ಅದೇ ದಿನ ಮಧ್ಯಾಹ್ನ 12.30 ರಿಂದ ಮತಗಳ ಎಣಿಕೆ ನಡೆಯುತ್ತದೆ. ಎಣಿಕೆ ನಂತರ ಫಲಿತಾಂಶದ ಘೋಷಣೆ ಆಗಲಿದೆ. ಚಾಮರಾಜ ನಗರ ತಾಲೂಕಿನ ಶಿಕ್ಷಕರು ಚುನಾವಣೆಯಲ್ಲಿ ಭಾಗವಹಿಸುವಂತೆ ಪ್ರಾಥಮಿಕ ಶಾಲಾ ಶಿಕ್ಷರ ಸಂಘದ ತಾಲೂಕು ಅಧ್ಯಕ್ಷ ಸಿ.ಕೆ.ರಾಮಸ್ವಾಮಿ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಇಂದು ಬಸವ ಜಯಂತಿ ಪೂರ್ವಭಾವಿ ಸಭೆ

ಚಾಮರಾಜನಗರ, ಏ.7– ಜಿಲ್ಲಾ ಮಟ್ಟದಲ್ಲಿ ಬಸವ ಜಯಂತಿ ಆಚರಿಸುವ ಸಂಬಂಧ ಏ.8 ರಂದು ಬೆಳಗ್ಗೆ 11 ಗಂಟೆಗೆ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಏರ್ಪಡಿಸಲಾಗಿದೆ.

ಜಿಲ್ಲೆಯ ಸಮಾಜದ ಅಧ್ಯಕ್ಷರು, ಪದಾಧಿಕಾರಿಗಳು, ವಿವಿಧ ಸಂಘ–ಸಂಸ್ಥೆಗಳ ಅಧ್ಯಕ್ಷರು, ಪದಾಧಿಕಾರಿಗಳು, ವಿವಿಧ ಸಮುದಾಯದ ಮುಖಂಡರು ಸಭೆಗೆ ಹಾಜರಾಗಿ ತಮ್ಮ ಸಲಹೆ ಸೂಚನೆಗಳನ್ನು ನೀಡುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಯೂರಿಯಾ ಖರೀದಿಸಲು ರೈತರಿಗೆ ಗುರುತಿನ ಚೀಟಿ ಕಡ್ಡಾಯ

ಕೃಷಿ ಇಲಾಖೆ ಸ್ಪಷ್ಟನೆ

ಶಿವಮೊಗ್ಗ, ಏ.7– ಯೂರಿಯಾ ರಸಗೊಬ್ಬರ ಖರೀದಿಸಲು ರೈತರು ಇನ್ನು ಮುಂದೆ ರೈತ ಗುರುತಿನ ಚೀಟಿ (FID) ಹೊಂದಿರಬೇಕು ಎಂದು ಕೃಷಿ ಜಂಟಿ ನಿರ್ದೇಶಕ ಕಿರಣ್ ಕುಮಾರ್ ತಿಳಿಸಿದ್ದಾರೆ.

ಹೊಸ ನಿಯಮವು 2026–27 ಖಾರಿಫ್ ಋತುವಿನಿಂದ ಜಾರಿಗೆ ಬರುತ್ತದೆ. ರಸಗೊಬ್ಬರ ವಿತರಣೆಯಲ್ಲಿ ಪಾರದರ್ಶಕತೆ ತರುವ ಮತ್ತು ಕಪ್ಪು ಮಾರುಕಟ್ಟೆ ಮಾರಾಟವನ್ನು ತಡೆಯುವ ಗುರಿಯನ್ನು ಈ ಕ್ರಮ ಹೊಂದಿದೆ ಎಂದು ಕುಮಾರ್ ಹೇಳಿದರು.

ಈ ವ್ಯವಸ್ಥೆಯಡಿಯಲ್ಲಿ, ಪ್ರತಿಯೊಬ್ಬ ರೈತರ ಭೂ ಹಿಡುವಳಿ ಗಾತ್ರ ಮತ್ತು ಬೆಳೆಯ ಆಧಾರದ ಮೇಲೆ ಕೆ–ಕಿಸಾನ್ ಸಾಫ್ಟ್‌ವೇರ್ ಮೂಲಕ ರಸಗೊಬ್ಬರವನ್ನು ವಿತರಿಸಲಾಗುವುದು. ಅಗತ್ಯವಿರುವ ಪ್ರಮಾಣವನ್ನು ಮಾತ್ರ ಹಂಚಿಕೆ ಮಾಡಲಾಗಿದೆ ಎಂದು ಖಚಿತಪಡಿಸಿಕೊಳ್ಳಲಾಗುತ್ತದೆ.

ಇನ್ನೂ ರೈತ ಗುರುತಿನ ಚೀಟಿ ಹೊಂದಿರದ ರೈತರು ತಮ್ಮ ಪಹಣಿ (ಭೂ ದಾಖಲೆಗಳು), ಬ್ಯಾಂಕ್ ಪಾಸ್‌ಬುಕ್ ಮತ್ತು ಆಧಾರ್ ಕಾರ್ಡ್‌ನೊಂದಿಗೆ ನೋಂದಾಯಿಸಲು ತಮ್ಮ ಹತ್ತಿರದ ರೈತ ಸಂಪರ್ಕ ಕೇಂದ್ರ, ತೋಟಗಾರಿಕೆ ಇಲಾಖೆ ಕಚೇರಿ ಅಥವಾ ಸಾಮಾನ್ಯ ಸೇವಾ ಕೇಂದ್ರಕ್ಕೆ ಭೇಟಿ ನೀಡಬೇಕೆಂದು ತಿಳಿಸಲಾಗಿದೆ.

ಈಗಾಗಲೇ ಎಫ್‌ಐಡಿ ಹೊಂದಿರುವವರು ತಮ್ಮ ಎಲ್ಲಾ ಸರ್ವೆ ಸಂಖ್ಯೆಗಳನ್ನು ಅದಕ್ಕೆ ಲಿಂಕ್ ಮಾಡಬಹುದು. ಪರವಾನಗಿ ಪಡೆದ ರಸಗೊಬ್ಬರ ವಿತರಕರು ಯಾವುದೇ ಮಾರಾಟವನ್ನು ಪೂರ್ಣಗೊಳಿಸುವ ಮೊದಲು ಕೆ–ಕಿಸಾನ್ ಸಾಫ್ಟ್‌ವೇರ್‌ನಲ್ಲಿ ರೈತರ ಎಫ್‌ಐಡಿಯನ್ನು ಕಡ್ಡಾಯವಾಗಿ ನಮೂದಿಸಬೇಕು ಎಂದು ಹೇಳಲಾಗಿದೆ. ಚಿಲ್ಲರೆ ವ್ಯಾಪಾರಿಗಳು ತಮ್ಮ ಎಲ್ಲಾ ಒ–ಫಾರ್ಮ್ ನೋಂದಣಿಗಳನ್ನು ನವೀಕರಿಸಬೇಕಾಗುತ್ತದೆ.

O-ಫಾರ್ಮ್ ನೋಂದಣಿ ಇಲ್ಲದೆ ರಸಗೊಬ್ಬರಗಳನ್ನು ಮಾರಾಟ ಮಾಡುವ, ಅನುಮತಿಸಲಾದ ಬೆಲೆಗಿಂತ ಹೆಚ್ಚಿನ ಶುಲ್ಕ ವಿಧಿಸುವ ಅಥವಾ ಕೃಷಿಯೇತರ ಉದ್ದೇಶಗಳಿಗಾಗಿ ರಸಗೊಬ್ಬರವನ್ನು ಪೂರೈಸುವ ವ್ಯಾಪಾರಿಗಳ ಪರವಾನಗಿ ರದ್ದು ಮಾಡಲಾಗುತ್ತದೆ ಎಂದು ಕುಮಾರ್ ಎಚ್ಚರಿಸಿದ್ದಾರೆ.

ದಾವಣಗೆರೆ ದಕ್ಷಿಣ, ಬಾಗಲಕೋಟೆ ಉಪಚುನಾವಣೆ

ಬಹಿರಂಗ ಪ್ರಚಾರಕ್ಕೆ ತೆರೆ: ಇಂದು ಮನೆ–ಮನೆ ಪ್ರಚಾರ; ನಾಳೆ ಮತದಾನ

ಬೆಂಗಳೂರು: ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯ ಬಹಿರಂಗ ಪ್ರಚಾರಕ್ಕೆ ಮಂಗಳವಾರ ಸಂಜೆ ತೆರೆಬಿದ್ದಿತು.

ಆಡಳಿತಾರೂಢ ಕಾಂಗ್ರೆಸ್, ಮೈತ್ರಿ ಪಕ್ಷಗಳಾದ ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಉಭಯ ಕ್ಷೇತ್ರಗಳಲ್ಲೂ ಕಳೆದ 15 ದಿನಗಳಿಂದ ಅಬ್ಬರದ ಬಿರುಸಿನ ಪ್ರಚಾರ ನಡೆಸಿದರು. ಬಹಿರಂಗ ಪ್ರಚಾರದ ಕಡೇ ದಿನವಾದ ಇಂದು ಅಂತಿಮ ಕಸರತ್ತು ನಡೆಸಿ, ಸಂಜೆಯಾಗುತ್ತಿದ್ದಂತೆ ನೀತಿ ಸಂಹಿತೆ ಅನ್ವಯ ಕ್ಷೇತ್ರದ ಮತದಾರರಲ್ಲದ ಎಲ್ಲಾ ಪಕ್ಷಗಳ ನಾಯಕರೂ ವಾಪಸ್ಸಾದರು.

ಬುಧವಾರ ಅಭ್ಯರ್ಥಿಗಳು ಹಾಗೂ ಬೆಂಬಲಿಗರು ನಿಯಮಾನುಸಾರ ಮನೆ–ಮನೆಗೆ ತೆರಳಿ ಮತಯಾಚಿಸಲು ಅವಕಾಶವಿದೆ. ಏ.9ಕ್ಕೆ ಮತದಾನ ನಡೆಯಲಿದ್ದು, ಮೇ 4ರಂದು ಫಲಿತಾಂಶ ಪ್ರಕಟವಾಗಲಿದೆ. ಬಾಗಲಕೋಟೆ ಕ್ಷೇತ್ರದಲ್ಲಿ 9 ಹಾಗೂ ದಾವಣಗೆರೆ ಕ್ಷೇತ್ರದಲ್ಲಿ 25 ಅಭ್ಯರ್ಥಿಗಳು ಅಂತಿಮ ಕಣದಲ್ಲಿದ್ದಾರೆ.

'ಬಿಜೆಪಿ ಕರ್ನಾಟಕದ ಮಹಾರಥರು' ಪುಸ್ತಕ ಬಿಡುಗಡೆ

ದೇಶ ವಿಭಜನೆ ಮೂಲಕ ರಾಷ್ಟ್ರದ ಜನತೆಗೆ ಕಾಂಗ್ರೆಸ್ ಅಂದೇ ದ್ರೋಹವೆಸಗಿತು

ವಿಧಾನ ಪರಿಷತ್ ಮಾಜಿ ಸದಸ್ಯ ತೋಂಟದಾರ್ಯ ಕಿಡಿ

ಮೈಸೂರು,ಏ.7(ಪಿಎಂ)– ದೇಶದ ವಿಭಜನೆ ಮೂಲಕ ಈ ರಾಷ್ಟ್ರದ ಜನತೆಯ ನಂಬಿಕೆಗೆ ಅಂದು ಆಘಾತ ಉಂಟು ಮಾಡಿದ ಪಾರ್ಟಿ ಕಾಂಗ್ರೆಸ್ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ತೋಂಟದಾರ್ಯ ಕಿಡಿಕಾರಿದರು.

ಮೈಸೂರಿನ ಬಿಜೆಪಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 'ಬಿಜೆಪಿ ಕರ್ನಾಟಕದ ಮಹಾರಥರು' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ದೇಶದ ಹಲವು ರಾಜ್ಯಗಳಲ್ಲಿ ಬಿಜೆಪಿ ಆಡಳಿತ ನಡೆಸುತ್ತಿದ್ದು, ಇದಕ್ಕೆ ಕಾರಣವಾದ ವಿಚಾರಗಳೇನು ಎಂಬುದನ್ನು ನಮ್ಮ ಕಾರ್ಯಕರ್ತರು ಅರ್ಥ ಮಾಡಿಕೊಳ್ಳಬೇಕು. ವಿಶೇಷವಾಗಿ ಜವಾಬ್ದಾರಿಯುತ ಕಾರ್ಯಕರ್ತರು ಅಧ್ಯಯನ ಮಾಡಬೇಕು. ಭಾರತೀಯ ಜನಸಂಘ ಸ್ಥಾಪನೆಯು ಒಂದು ರೋಚಕ ಹಿನ್ನಲೆಯೊಂದಿದೆ ಎಂದು ತಿಳಿಸಿದರು.

ದೇಶ ವಿಭಜನೆ ವೇಳೆ ದೇಶದಲ್ಲಿ ಪ್ರಾಮುಖ್ಯತೆ ಹೊಂದಿದ್ದ ಸಂಘಟನೆಯಾಗಿ ಕಾಂಗ್ರೆಸ್ ಇತ್ತು. ಕಾಂಗ್ರೆಸ್ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟಿತು ಎಂಬಿತ್ಯಾದಿಯಾಗಿ ಹೇಳುವುದು ಕೇವಲ ಅರ್ಧ ಸತ್ಯ. ಅಖಂಡ ಭಾರತ ಕಲ್ಪನೆ ಹಾಗೂ ಸಂಪೂರ್ಣ ಸ್ವಾತಂತ್ರ್ಯ ನಮ್ಮ ಮೂಲ ಮಂತ್ರವೆಂದು ಕಾಂಗ್ರೆಸ್ ಜನತೆಯ ವಿಶ್ವಾಸ ಗಳಿಸಿತ್ತು. 1929ರ ಲಾಹೋರ್‌ನ ಕಾಂಗ್ರೆಸ್ ಅಧಿವೇಶನದ ವೇಳೆಗೂ ಪೂರ್ವದಲ್ಲಿ ಹುಟ್ಟಿಕೊಂಡಿದ್ದ ಮುಸ್ಲಿಂ ಲೀಗ್ ಮುಸಲ್ಮಾನರಿಗೆ ಪ್ರತ್ಯೇಕ ದೇಶದ ಬೇಡಿಕೆ ಇಟ್ಟಿತ್ತು. ಆಗ ಸ್ವತಃ ನೆಹರು ರಾವಿ ನದಿ ಮೇಲೆ ಆಣೆ ಮಾಡಿ ಈ ದೇಶದ ವಿಭಜನೆಗೆ ಅವಕಾಶ ನೀಡುವುದಿಲ್ಲವೆಂದು ಹೇಳಿದ್ದರು. ದುರಂತವೆಂದರೆ ವಿಭಜಿತ ಭಾರತದ ಮೊದಲ ಪ್ರಧಾನಿ ಅವರೇ ಆಗುತ್ತಾರೆ ಎಂದು ಬೇಸರ ವ್ಯಕ್ತಪಡಿಸಿದರು.

ವಿಭಜನೆ ಮಾಡದಿದ್ದರೆ ದೇಶದಲ್ಲಿ ರಕ್ತಕ್ರಾಂತಿ ಆಗುತ್ತದೆ ಎಂದು ಮುಸ್ಲಿಂ ಲೀಗ್ ಬೆದರಿಕೆ ಹಾಕಿದ್ದ ಸಂಬಂಧ ಉಗ್ರವಾಗಿ ಪ್ರತಿಕ್ರಿಯಿಸಿದ್ದ ಸರ್ದಾರ್ ವಲ್ಲಭಭಾಯಿ ಪಟೇಲ್, ವಿಭಜಿತ ಭಾರತದ ಮೊದಲ ಗೃಹಮಂತ್ರಿ ಆಗುತ್ತಾರೆ. ಅಂತೆಯೇ ವಿಭಜನೆ ಎನ್ನುವುದು ಮೂರ್ಖತನದ ಪರಮಾವಧಿ ಎಂದಿದ್ದ ಬಾಬು ರಾಜೇಂದ್ರ ಪ್ರಸಾದ್ ವಿಭಜಿತ ಭಾರತದ ಮೊದಲ ರಾಷ್ಟ್ರಾಧ್ಯಕ್ಷರಾಗುತ್ತಾರೆ. ಅಷ್ಟೇ ಅಲ್ಲದೆ, ಮಹಾತ್ಮ ಗಾಂಧಿಯವರು ಮುಸಲ್ಮಾನರು, ಹಿಂದುಗಳು ನನ್ನೆರಡು ಕಣ್ಣುಗಳು. ದೇಶ ವಿಭಜನೆಗೂ ಮುನ್ನ ನನ್ನ ದೇಹ ವಿಭಜಿಸಿ ಎಂದಿದ್ದರು. ಆದರೆ 1947ರ ಆಗಸ್ಟ್ 15ರಂದು ವಿಭಜನೆ ಆಗಿಯೇ ತೀರುತ್ತದೆ. ಆ ಮೂಲಕ ಅಂದು ಕಾಂಗ್ರೆಸ್ ದೇಶದ ಜನತೆಯ ನಂಬಿಕೆಗೆ ದೊಡ್ಡ ಆಘಾತ ನೀಡುತ್ತದೆ ಎಂದು ಟೀಕಿಸಿದರು.

ಆ ಬಳಿಕ ಕಾಂಗ್ರೆಸ್ ವಿಭಜನೆ ಅನಿವಾರ್ಯ ಎಂಬಿತ್ಯಾದಿ ಕಾರಣ ನೀಡುತ್ತದೆ. ಆರ್‌ಎಸ್‌ಎಸ್‌ನ ಪ್ರಮುಖರು ವಿಭಜನೆಯ ಬೇಡಿಕೆಯ ಸುಳಿವು ಸಿಕ್ಕಾಗಲೇ ಕಾಂಗ್ರೆಸ್‌ಗೆ ಎಚ್ಚರಿಸಿದ್ದರು. ಯಾವುದೇ ಕಾರಣಕ್ಕೂ ವಿಭಜನೆ ತೀರ್ಮಾನಕ್ಕೆ ಬಾರದಂತೆ ಮನವಿ ಸಹ ಮಾಡಿದ್ದರು. ಅದಾಗ್ಯೂ ವಿಭಜನೆ ಆದ ಹಿನ್ನೆಲೆಯಲ್ಲಿ ದೇಶಕ್ಕೆ ಸರಿಯಾದ ಸಿದ್ಧಾಂತ ಹೊಂದಿರುವ ಪಾರ್ಟಿ ಅಗತ್ಯತೆ ಅರಿತು ಭಾರತೀಯ ಜನಸಂಘವನ್ನು ಅಸ್ತಿತ್ವಕ್ಕೆ ತರಲಾಯಿತು. ಹಿಂದೂ ಮಹಾಸಭಾದ ನೇತೃತ್ವ ವಹಿಸಿದ್ದ ಶ್ಯಾಮ ಪ್ರಸಾದ್ ಮುಖರ್ಜಿ ಅವರು ಆರ್‌ಎಸ್‌ಎಸ್ ಪ್ರಮುಖರೊಂದಿಗೆ ಚರ್ಚಿಸಿ ಜನಸಂಘ ಸ್ಥಾಪಿಸಿದರು. ಅಲ್ಲದೆ, ಜಮ್ಮು–ಕಾಶ್ಮೀರಕ್ಕೆ ಸಂವಿಧಾನದ 370ನೇ ವಿಧಿಯಡಿ ನೀಡಿದ್ದ ವಿಶೇಷ ಸ್ವಾಯತ್ತ ಸ್ಥಾನಮಾನವನ್ನು ತೀವ್ರವಾಗಿ ಖಂಡಿಸಿದ್ದರು.

ಈ ವಿಧಿಯಡಿ ಜಮ್ಮು–ಕಾಶ್ಮೀರ ಪ್ರವೇಶಿಸಲು ವಿದೇಶಕ್ಕೆ ಹೋಗುವಂತೆ ಅನುಮತಿ ಕಡ್ಡಾಯವಾಗಿತ್ತು. ಇದನ್ನು ಪ್ರತಿಭಟಿಸಿ ಯಾವುದೇ ಅನುಮತಿ ಇಲ್ಲದೇ ಪ್ರವೇಶಿಸಿದ ಹಿನ್ನೆಲೆಯಲ್ಲಿ ಶ್ಯಾಮ್ ಪ್ರಸಾದ್ ಮುಖರ್ಜಿಯವರನ್ನು ಬಂಧಿಸಲಾಯಿತು. ನಂತರದಲ್ಲಿ ಅವರು ಹೇಗೆ ಸಾವನ್ನಪ್ಪಿದರು ಎಂಬುದೇ ನಿಗೂಢವಾಗಿ ಉಳಿಯಿತು. ಅವರ ದೊಡ್ಡ ಬಲಿದಾನದಿಂದ ಜನಸಂಘ ಇನ್ನು ಪ್ರಖರವಾಗಿ ಬೆಳೆಯಿತು ಎಂದರು.

1977ರಲ್ಲಿ ಮೇ 1ರಂದು ಅಧಿಕೃತವಾಗಿ ಜನಸಂಘ ವಿಸರ್ಜನೆ ಮಾಡಲಾಯಿತು. ಮೊದಲು ದೇಶ, ನಂತರ ಪಾರ್ಟಿ ಎಂಬ ನಿಲುವಿನಡಿ ನಮ್ಮ ನಾಯಕರು ಈ ನೆಲದಲ್ಲಿ ಪರಿವರ್ತನೆ ತಂದಿದ್ದಾರೆ. 1980 ಏ.6ರಂದು ಭಾರತೀಯ ಜನತಾ ಪಾರ್ಟಿ ಸ್ಥಾಪನೆ ಮಾಡಲಾಯಿತು. ನಮ್ಮ ನಾಯಕರು ನೀಡಿದ ಕೊಡುಗೆ ಬಗ್ಗೆ ತಿಳಿದುಕೊಳ್ಳಲು ಇಂತಹ ಪುಸ್ತಕಗಳು ಸಹಕಾರಿ. ಕರ್ನಾಟಕದ ನಮ್ಮ ನಾಯಕರ ಬಗ್ಗೆ ಗೋಪಾಲರಾವ್ ಪುಸ್ತಕ ರಚಿಸಿರುವುದು ಹೆಮ್ಮೆಯ ವಿಚಾರ. ಸಿದ್ಧಾಂತ–ವಿಚಾರಕ್ಕಾಗಿ ಬದ್ಧತೆಯಿಂದ ನಡೆದುಕೊಂಡಿರುವ ನಮ್ಮ ನಾಯಕರ ಬಗ್ಗೆ ನಾವು ತಿಳಿದುಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಪುಸ್ತಕ ಬಿಡುಗಡೆ ಮಾಡಿದರು. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಮಾಧ್ಯಮ ಸಮನ್ವಯಾಧಿಕಾರಿಯಾಗಿದ್ದ ಎಸ್.ಶಾಂತಾರಾಮ್, ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ರಾಜ್ಯಾಧ್ಯಕ್ಷ ಅನಿಲ್ ಥಾಮಸ್, ಬಿಜೆಪಿ ಜಿಲ್ಲಾಧ್ಯಕ್ಷ ಸುಬ್ಬಣ್ಣ, ರಾಜ್ಯ ಬಿಜೆಪಿ ವಕ್ತಾರ ಎಂ.ಜಿ. ಮಹೇಶ್, ಕೃತಿ ಕರ್ತೃ ಎಸ್.ಆರ್. ಗೋಪಾಲ್ ರಾವ್ ಮತ್ತಿತರರು ಹಾಜರಿದ್ದರು.



ಬಿಜೆಪಿ ಕಚೇರಿಯಲ್ಲಿ ಮಂಗಳವಾರ 'ಬಿಜೆಪಿ ಕರ್ನಾಟಕದ ಮಹಾರಥರು' ಪುಸ್ತಕ ಬಿಡುಗಡೆ ಮಾಡಲಾಯಿತು.

> ನಾನು ಎರಡು ವರ್ಷಗಳ ಹಿಂದೆಯಷ್ಟೇ ಪಕ್ಷ ಸೇರಿದ ಕೂಡಲೇ ಚುನಾವಣೆ ಎದುರಿಸಬೇಕಾಯಿತು. ಪಕ್ಷದ ಇತಿಹಾಸ ಮತ್ತು ಸಿದ್ಧಾಂತದ ಬಗ್ಗೆ ಈಗ ತಿಳುವಳಿಕೆ ಹೊಂದಿದ್ದೇನೆ. ರಾಜ್ಯದಲ್ಲಿ ಪಕ್ಷದ ನಾಯಕರು ನೀಡಿದ ಕೊಡುಗೆ ಬಗ್ಗೆ ಗೋಪಾಲ್ ರಾವ್ ಅವರು ಒಳ್ಳೆಯ ಪುಸ್ತಕ ರಚಿಸಿದ್ದಾರೆ. ಅವರಿಗೆ ಅಭಿನಂದಿಸುತ್ತೇನೆ. ಹಿಂದಿನದ್ದನ್ನು ಅರಿಯದೇ ಮುಂದಿನ ದಾರಿ ಸುಗಮವಾಗದು. ಈ ನಿಟ್ಟಿನಲ್ಲಿ ಸದರಿ ಪುಸ್ತಕ ಪಕ್ಷ ಸಂಘಟನೆಗೆ ಸಹಕಾರಿ. ನಮ್ಮ ನಾಯಕರು ಹಾಕಿಕೊಟ್ಟ ಆದರ್ಶಗಳೊಂದಿಗೆ ನಾವು ಮುಂದುವರೆಯಬೇಕಿದೆ. ಆ ಮೂಲಕ ಪಕ್ಷ ಇನ್ನೂ ದೊಡ್ಡ ಮಟ್ಟಕ್ಕೆ ಬೆಳೆಯಬೇಕಿದೆ. ಬಿಜೆಪಿಯಲ್ಲಿ ನಾನಿನ್ನೂ ವಿದ್ಯಾರ್ಥಿ ಎಂಬ ಭಾವದಲ್ಲಿ ಮುಂದುವರೆಯುತ್ತೇನೆ.
>
> **–ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್,** ಸಂಸದರು.

ಪ್ರಧಾನಿ ಮೋದಿ ನೀತಿಯಿಂದ ಐದು ಲಕ್ಷ ಆಟೋ ಚಾಲಕರ ಬದುಕು ಬೀದಿಗೆ ಬಿದ್ದಿದೆ

- ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ವಾಗ್ದಾಳಿ
- ಯುದ್ಧದಿಂದ ಆಟೋ ಗ್ಯಾಸ್, ವಾಣಿಜ್ಯ ಗ್ಯಾಸ್ ಸಿಗದೇ ಜನರು ಸಂಕಷ್ಟಕ್ಕೆ

ಬೆಂಗಳೂರು, ಏ.7(ಕೆಎಂಶಿ)–ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರದ ವಿದೇಶಾಂಗ ನೀತಿಯಿಂದ ಸುಮಾರು 5 ಲಕ್ಷಕ್ಕೂ ಹೆಚ್ಚು ಆಟೋ ಚಾಲಕರ ಜೀವನ ಸರ್ವನಾಶವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಎಐಸಿಸಿ ಪ್ರಧಾನಕಾರ್ಯದರ್ಶಿ ಹಾಗೂ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಇಂದಿಲ್ಲಿ ಕಿಡಿಕಾರಿದ್ದಾರೆ.

ಮೂವರೂ ಜಂಟಿ ಪತ್ರಿಕಾ ಹೇಳಿಕೆ ನೀಡಿ, ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದ ತೈಲ ಬೆಲೆ ಏರಿಕೆ ಜೊತೆಗೆ ಆಟೋ ಗ್ಯಾಸ್, ಎಲ್‌ಪಿಜಿ ಸಮಸ್ಯೆ ಉಲ್ಬಣಗೊಂಡಿದೆ.

ತೈಲ ಸಮಸ್ಯೆ ನಿಭಾಯಿಸುವಲ್ಲಿ ಕೇಂದ್ರ ಸರ್ಕಾರ ಪೂರ್ಣ ವಿಫಲವಾಗಿದೆ ಇದರಿಂದ ಹೋಟೆಲ್ ಉದ್ಯಮ ಹಾಗೂ ಆಟೋ ಚಾಲಕರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಎಲ್‌ಪಿಜಿ ಸಮಸ್ಯೆಯಿಂದ ಜನರ ಬದುಕಿನ ಮೇಲೆ ಆಗಿರುವ ಪರಿಣಾಮ ಹಾಗೂ ಉದ್ಯೋಗವಿಲ್ಲದೆ ಸಂಕಷ್ಟದಲ್ಲಿರುವ ಲಕ್ಷಾಂತರ ಕನ್ನಡಿಗರಿಗೆ ಈಗ ಮತ್ತೊಂದು ದುಸ್ಥಿತಿ ಎದುರಾಗಿದೆ.

ವಾಣಿಜ್ಯ ಸಿಲಿಂಡರ್ ಬೆಲೆ 200 ರೂ. ಏರಿಕೆ ಆಗಿದ್ದು, ಪ್ರತಿ ಸಿಲಿಂಡರ್ ದರ 2,000 ರೂ. ದಾಟಿದೆ, ಇದು ಇನ್ನೂ ಹೆಚ್ಚಾಗಬಹುದು, ಕಾಳಸಂತೆಯಲ್ಲಿ 4 ರಿಂದ 6,000 ರೂ.ವರೆಗೆ ಮಾರಾಟವಾಗುತ್ತಿದೆ.

ಬೆಲೆ ಹೆಚ್ಚಳ ಮತ್ತು ಕಾಳಸಂತೆಕೋರರ ಹೊಡೆತಕ್ಕೆ ಸಿಲುಕಿ ಲಕ್ಷಾಂತರ ಸಣ್ಣ ಹೋಟೆಲ್‌ಗಳು, ರಸ್ತೆ ಬದಿ ಡಾಬಾ, ತಳ್ಳುಗಾಡಿ ವ್ಯಾಪಾರಿಗಳು, ಫುಡ್ ಪ್ಯಾಕೆಟ್ ಡಿಲಿವರಿ ಕಾರ್ಮಿಕರು ಸಂಕಷ್ಟದಲ್ಲಿದ್ದಾರೆ.

ರಾಷ್ಟ್ರದಲ್ಲಿ ಎಲ್‌ಪಿಜಿ ಪೂರೈಕೆಯನ್ನು ಕೇಂದ್ರ ಸರ್ಕಾರ ಒಎಂಸಿಗಳ ಮೂಲಕ ನಿಯಂತ್ರಿಸುತ್ತದೆ, ಇದರ ಜವಾಬ್ದಾರಿ ಪ್ರಧಾನಿ ಮೋದಿ ಸರ್ಕಾರದ್ದಾಗಿದೆ.

ಅನಿಲ ಇಂಧನ ಸಂಗ್ರಹ ಹಾಗೂ ಪೂರೈಕೆ ಸಂಪೂರ್ಣ ಕೇಂದ್ರದ ಹಿಡಿತದಲ್ಲಿದೆ, ಇದರಲ್ಲಿ ರಾಜ್ಯಗಳ ಪಾತ್ರವಿಲ್ಲ ಎಂದಿದ್ದಾರೆ.

ಎಲ್‌ಪಿಜಿ ಸಮಸ್ಯೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಉದಾಸೀನತೆ, ಅಹಂಕಾರ ಮತ್ತು ಆಡಳಿತಾತ್ಮಕ ದುರಂತಕ್ಕೆ ಸಾಕ್ಷಿಯಾಗಿದೆ.

ಕೇಂದ್ರ ಸಂಪುಟದಲ್ಲಿನ ಕರ್ನಾಟಕದ ಬಿಜೆಪಿ/ಜೆಡಿಎಸ್ ಸಚಿವರು ಆನಂದದಿಂದ ಅಧಿಕಾರ ಅನುಭವಿಸುತ್ತಿದ್ದು, ಜನಸಾಮಾನ್ಯರ ಈ ಸ್ಥಿತಿಗೆ ಉತ್ತರದಾಯಿ ಆಗಬೇಕು. ಇಲ್ಲವೇ ಸಚಿವ ಸ್ಥಾನಗಳಿಗೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ.



ಮಾರ್ಚ್ 2026ರಲ್ಲಿ ಆಟೋ ಗ್ಯಾಸ್/ಎಲ್‌ಪಿಜಿ ಬೆಲೆ ಪ್ರತಿ ಲೀಟರ್‌ಗೆ 58 ರಿಂದ 61 ರೂ. ಇತ್ತು, ಇಂದು 105 ರಿಂದ 120 ರೂ.ಗೆ ಏರಿಕೆಯಾಗಿದ್ದು, ಕೆಲವೇ ವಾರಗಳಲ್ಲಿ ಶೇ.106ರಷ್ಟು ಬೆಲೆ ಏರಿಕೆ ಆದಂತಾಗಿದೆ.

ಖಾಸಗಿ ಅನಿಲ ಪೂರೈಕೆ ಕೇಂದ್ರಗಳಲ್ಲಿ ಲೀಟರ್‌ಗೆ 125 ರಿಂದ 135 ರೂ.ವರೆಗೆ ವಸೂಲಿ ಮಾಡಲಾಗುತ್ತಿದೆ.

ಸಿಎನ್‌ಜಿ ಆಟೋಗಳು ತೀವ್ರ ಕೊರತೆ ಎದುರಿಸುತ್ತಿವೆ. ಬೆಲೆ ಏರಿಕೆ ಮತ್ತು ಇಂಧನ ಕೊರತೆಯಿಂದ ಆಟೋ ಚಾಲಕರು ಕಂಗಾಲಾಗಿದ್ದಾರೆ. ಇಷ್ಟಾದರೂ ಬಿಜೆಪಿ ನಾಯಕರು ಬಾಯಿಗೆ ಬೀಗ ಹಾಕಿಕೊಂಡಿದ್ದಾರೆ.

ಕಡಿಮೆ ಬೆಲೆಗೆ ಅನಿಲ ಪೂರೈಕೆ ಮಾಡುವ ಸರ್ಕಾರಿ ಕೇಂದ್ರಗಳು ಮುಚ್ಚಲ್ಪಟ್ಟಿವೆ. ಇದು ಶ್ರಮಿಕ ವರ್ಗದ ಮೇಲೆ ನಡೆಸುತ್ತಿರುವ ಆರ್ಥಿಕ ದೌರ್ಜನ್ಯ.

ಬೆಂಗಳೂರಿನಲ್ಲಿ 60 ರಿಂದ 70 ಎಲ್‌ಪಿಜಿ/ಸಿಎನ್‌ಜಿ ತಾಣಗಳಿದ್ದವು. ಈಗ ಕೇವಲ 10 ರಿಂದ 15 ಮಾತ್ರ ಕಾರ್ಯನಿರ್ವಹಿಸುತ್ತಿವೆ, ಶೇ.80 ಬಂದ್ ಆಗಿವೆ.

ದೈನಂದಿನ ಪೂರೈಕೆ 12,000 ಲೀಟರ್‌ನಿಂದ 6,000 ಲೀಟರ್‌ಗೆ ಕುಸಿದಿದೆ. ಆಟೋ ಚಾಲಕರು ಬೆಳಗ್ಗೆ 5 ರಿಂದ 3 ಕಿಲೋ ಮೀಟರ್ ಉದ್ದದ ಸಾಲಿನಲ್ಲಿ ನಿಂತರೂ ಖಾಲಿ ಕೈಯಲ್ಲಿ ಮರಳುತ್ತಿದ್ದಾರೆ. ಸರದಿ ಸಾಲಿನಲ್ಲಿ ಕಳೆಯುವ ಪ್ರತಿಯೊಂದು ಗಂಟೆಯೂ ಅವರ ಕುಟುಂಬದ ಅನ್ನ ಕಸಿಯುತ್ತಿದೆ.


ಆಟೋ ಚಾಲಕರು ದಿನಗೂಲಿ ನೌಕರರಂತೆ, ಪ್ರತಿನಿತ್ಯ ಬಾಡಿಗೆ ಸಂಪಾದನೆ ಮೇಲೆ ಜೀವನ ನಿರ್ವಹಿಸುತ್ತಿದ್ದಾರೆ. ರಾಜ್ಯದಲ್ಲಿನ ಅರ್ಧದಷ್ಟು ಆಟೋಗಳು ರಸ್ತೆಗೆ ಇಳಿಯುತ್ತಿಲ್ಲ. ಆಟೋಗಳು ಇಂಧನಕ್ಕಾಗಿ ಅರ್ಧ ದಿನ ಸರತಿ ಸಾಲಿನಲ್ಲಿ ಕಳೆಯುತ್ತಿವೆ. ಇದು ಕೇವಲ ಇಂಧನದ ಬಿಕ್ಕಟ್ಟಲ್ಲ. ಕೋಟ್ಯಾಂತರ ಜನರ ಬದುಕಿನ ತುರ್ತು ಪರಿಸ್ಥಿತಿ, ಶ್ರಮಿಕ ವರ್ಗವನ್ನು ಹತಾಶೆಗೆ ನೂಕಿ ಮೋದಿ ಸರ್ಕಾರ ಮೂಕ ಪ್ರೇಕ್ಷಕನಂತೆ ನೋಡುತ್ತಿದೆ.

ಕೇಂದ್ರದ ನೀತಿಯಿಂದಾದ ದುಷ್ಪರಿಣಾಮಕ್ಕೆ ಕರ್ನಾಟಕದ ಜನ ಕ್ಷಮಿಸುವುದಿಲ್ಲ. ಮೋದಿ ಸರ್ಕಾರದ ಮೌನ, ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಉಪಚುನಾವಣೆ ಹಾಗೂ ಇತರ ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿಗೆ ಸೋಲಾಗಿ ಪ್ರತಿಧ್ವನಿಸಲಿದೆ ಎಂದಿದ್ದಾರೆ.

ಬಂಗಾಳದ ಮೇಲೆ ಕಣ್ಣು ನೆಟ್ಟರೆ ಪಾಕ್ ಮತ್ತಷ್ಟು ಹೋಳು

ಗೃಹ ಸಚಿವ ರಾಜನಾಥ ಎಚ್ಚರಿಕೆ

ಕೋಲ್ಕತ್ತ: ಕೋಲ್ಕತ್ತ ಮೇಲೆ ದಾಳಿ ನಡೆಸುವ ಕುರಿತು ಪಾಕಿಸ್ತಾನದ ಬೆದರಿಕೆಗೆ ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ತಿರುಗೇಟು ನೀಡಿದ್ದಾರೆ.



55 ವರ್ಷಗಳ ಹಿಂದೆಯೇ ಪಾಕಿಸ್ತಾನ ಎರಡಾಗಿ ವಿಭಜನೆಗೊಂಡಾಗ ಅದರ ಪರಿಣಾಮಗಳನ್ನು ಎದುರಿಸಿತ್ತು ಎಂದು ಹೇಳಿದ್ದಾರೆ.

ಪಾಕಿಸ್ತಾನದ ರಕ್ಷಣಾ ಸಚಿವರು ಇಂತಹ ಪ್ರಚೋದನಕಾರಿ ಹೇಳಿಕೆಯನ್ನು ನೀಡಬಾರದು. ಮತ್ತೆ ಬಂಗಾಳದ ಮೇಲೆ ಕಣ್ಣು ನೆಟ್ಟರೆ ಪಾಕಿಸ್ತಾನ ಎಷ್ಟು ಭಾಗಗಳಾಗಿ ವಿಭಜನೆಯಾಗುತ್ತದೆ ಎಂಬುದನ್ನು ದೇವರೇ ಬಲ್ಲ ಎಂದು ಎಚ್ಚರಿಸಿದ್ದಾರೆ. ಪಾಕಿಸ್ತಾನದ ರಕ್ಷಣಾ ಸಚಿವ ಖ್ವಾಜಾ ಆಸೀಫ್ ಕೋಲ್ಕತ್ತ ಮೇಲೆ ದಾಳಿ ನಡೆಸುವುದಾಗಿ ಹೇಳಿಕೆ ನೀಡಿದ್ದರು. ಆದರೆ ಪಾಕಿಸ್ತಾನದ ಬೆದರಿಕೆಗೆ ಪ್ರಧಾನಿ ನರೇಂದ್ರ ಮೋದಿ ಯಾಕೆ ಪ್ರತಿಕ್ರಿಯಿಸುತ್ತಿಲ್ಲ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪ್ರಶ್ನಿಸಿದ್ದರು.

ಮೃಗಾಲಯದ ಹುಲಿ 'ಪೃಥ್ವಿ' ಆರೋಗ್ಯ ಗಂಭೀರ

ಮೈಸೂರು, ಏ.7– ಮೈಸೂರು ಮೃಗಾಲಯದ 13 ವರ್ಷದ ಹುಲಿ 'ಪೃಥ್ವಿ' ತೀವ್ರ ಅನಾರೋಗ್ಯದಿಂದ ಗಂಭೀರ ಸ್ಥಿತಿಯಲ್ಲಿದೆ.

ಸೋಮವಾರ ಬೆಳಗ್ಗೆ ಆರೋಗ್ಯ ಗಣನೀಯವಾಗಿ ಹದಗೆಟ್ಟ ಹಿನ್ನೆಲೆಯಲ್ಲಿ ಕೂಡಲೇ ಚಿಕಿತ್ಸೆ ಆರಂಭಿಸಲಾಯಿತು. ನಂತರ ಹೆಚ್ಚಿನ ನಿಗಾ ಹಾಗೂ ಚಿಕಿತ್ಸೆಗಾಗಿ ಹುಲಿಯನ್ನು ಇಲವಾಲ ಸಮೀಪದ ಚಾಮುಂಡಿ ವನ್ಯಜೀವಿ ಸಂರಕ್ಷಣಾ ಮತ್ತು ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ. ತಜ್ಞ ಪಶುವೈದ್ಯರ ತಂಡ ತೀವ್ರ ನಿಗಾ ಘಟಕದಲ್ಲಿಟ್ಟು ಚಿಕಿತ್ಸೆ ನೀಡುತ್ತಿದ್ದಾರೆ. ಈ ಹುಲಿಯು ದೀರ್ಘಕಾಲದ ನರಮಂಡಲ ಕಾಯಿಲೆ (congenital paresis)ಯಿಂದ ಬಳಲುತ್ತಿದೆ ಎಂದು ತಿಳಿದುಬಂದಿದೆ.

ಆಂಧ್ರಪ್ರದೇಶ ಅಧಿಕೃತ ರಾಜಧಾನಿ ಅಮರಾವತಿ

ರಾಷ್ಟ್ರಪತಿಗಳ ಅಂಕಿತ; ಸಿಎಂ ನಾಯ್ಡು ಅಭಿನಂದನೆ!

ಅಮರಾವತಿ, ಏ.7– ಪ್ರತ್ಯೇಕ ತೆಲುಗು ರಾಜ್ಯಗಳಾಗಿ ಆಂಧ್ರ ಪ್ರದೇಶ ಮತ್ತು ತೆಲಂಗಾಣ ವಿಭಜನೆಯಾದ ದಶಕಗಳ ಬಳಿಕ ಕೊನೆಗೂ ಆಂಧ್ರಕ್ಕೆ ರಾಜಧಾನಿ ಘೋಷಣೆಯಾಗಿದ್ದು ಅಮರಾವತಿಯನ್ನು ನೂತನ ರಾಜಧಾನಿಯಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅಂಕಿತ ಹಾಕಿದ್ದಾರೆ.

ಆಂಧ್ರ ಪ್ರದೇಶದ ರಾಜಧಾನಿಯಾಗಿ ಅಮರಾವತಿ ಎನ್ನುವ ಅಧಿಕೃತ ಘೋಷಣೆ ಹೊರಬಿದ್ದಿದ್ದು, ಆ ಮೂಲಕ, ಹನ್ನೆರಡು ವರ್ಷಗಳ ಕಾಲ ಇದ್ದ ಅನಿಶ್ಚಿತತೆಗೆ ಕೊನೆಗೂ ತೆರೆಬಿದ್ದಿದೆ. ಸ್ವತಃ ಆಂಧ್ರ ಪ್ರದೇಶ ಸಿಎಂ ಎನ್.ಚಂದ್ರಬಾಬು ನಾಯ್ಡು ಅವರು ಅಧಿಕೃತ ಘೋಷಣೆ ಮಾಡಿದ್ದಾರೆ. ಅಲ್ಲದೆ ರಾಜಧಾನಿಗೆ ಅಂಕಿತ ಹಾಕಿದ್ದಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಕೇಂದ್ರ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ.

ಹಲವಾರು ಕಾರಣಗಳಿಂದ ರಾಜಧಾನಿ ಘೋಷಣೆ ಮುಂದಕ್ಕೆ ಹೋಗುತ್ತಲೇ ಇತ್ತು. ಅಖಂಡ ಆಂಧ್ರ ವಿಭಜನೆ ಆದಾಗಿನಿಂದಲೂ, ಆಂಧ್ರದ ರಾಜಧಾನಿಯ ಬಗ್ಗೆ ಹಲವು ಗೊಂದಲಗಳಿದ್ದವು. ವೈಎಸ್ ಜಗನ್ಮೋಹನ್ ರೆಡ್ಡಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಮೂರು ರಾಜಧಾನಿ ಎನ್ನುವ ವಿಷಯ ಪ್ರಸ್ತಾವನೆಯಿತ್ತು. ಆದರೆ, ಅದನ್ನು ಕೇಂದ್ರ ಸರ್ಕಾರ ತಿರಸ್ಕರಿಸಿತ್ತು. ಇದೀಗ ಹಾಲಿ ಸಿಎಂ ಚಂದ್ರಬಾಬು ನಾಯ್ಡು ಅವರ ವಿಶೇಷ ಪರಿಶ್ರಮದಿಂದ ಇದು ಸಾಕಾರಗೊಂಡಿದೆ.

ಗೆಜೆಟ್ ಅಧಿಸೂಚನೆ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 2026ರ ಆಂಧ್ರಪ್ರದೇಶ ಮರುಸಂಘಟನೆ (ತಿದ್ದುಪಡಿ) ಮಸೂದೆಯನ್ನು ಅನುಮೋದಿಸಿದ ನಂತರ, ಕೇಂದ್ರ ಸರ್ಕಾರವು ಗೆಜೆಟ್ ಅಧಿಸೂಚನೆಯನ್ನು ಹೊರಡಿಸಿ, ಆಂಧ್ರಪ್ರದೇಶದ ಅಧಿಕೃತ ರಾಜಧಾನಿಯಾಗಿ ಘೋಷಿಸಲಾಗಿದೆ. ಇದನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 111ನೇ ವಿಧಿಯ ಅಡಿಯಲ್ಲಿ, ಆಂಧ್ರ ಪ್ರದೇಶ ಮರುಸಂಘಟನೆ ಕಾಯ್ದೆ ಸೆಕ್ಷನ್ 5(2) ಅನ್ನು ತಿದ್ದುಪಡಿ ಮಾಡಿದ್ದಾರೆ.

ಆಂಧ್ರಪ್ರದೇಶ ವಿಧಾನಸಭೆಯು ಮಾರ್ಚ್ 28ರಂದು ನಿರ್ಣಯವನ್ನು ಅಂಗೀಕರಿಸಿತು ಮತ್ತು ಏಪ್ರಿಲ್ 1, 2ರಂದು ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ 260 ನಿಮಿಷಗಳ ಚರ್ಚೆಯ ನಂತರ ಸಂಸತ್ತು ಮಸೂದೆಯನ್ನು ತಿದ್ದುಪಡಿ ಮಾಡಿತು. ಇದನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು ಮತ್ತು ರಾಜಧಾನಿ ಸ್ಥಾನಮಾನವು ಜೂನ್ 2, 2024ರಿಂದಲೇ ಜಾರಿಗೆ ಬರುತ್ತದೆ.

ಸಿಎಂ ನಾಯ್ಡು ಪೋಸ್ಟ್: ಸಾಮಾಜಿಕ ಮಾಧ್ಯಮ ವೇದಿಕೆ Xನಲ್ಲಿನ ಪೋಸ್ಟ್‌ನಲ್ಲಿ, ಆಂಧ್ರಪ್ರದೇಶದ ಸಿಎಂ ಚಂದ್ರಬಾಬು ನಾಯ್ಡು ಅವರು ಆಂಧ್ರಪ್ರದೇಶದ ರಾಜಧಾನಿ ಅಮರಾವತಿ ಎಂದು ಘೋಷಿಸಿದರು. ಆಂಧ್ರಪ್ರದೇಶದ ನನ್ನ ಜನರ ಪರವಾಗಿ, ನಮ್ಮ ರಾಜಧಾನಿಯ ಬಹುಕಾಲದ ಕನಸನ್ನು ಈಡೇರಿಸುವ ಮೂಲಕ 2026 ರ ಆಂಧ್ರಪ್ರದೇಶ ಮರುಸಂಘಟನೆ (ತಿದ್ದುಪಡಿ) ಕಾಯ್ದೆಗೆ ಅವರ ದಯೆಯಿಂದ ಒಪ್ಪಿಗೆ ನೀಡಿದ್ದಕ್ಕಾಗಿ ಗೌರವಾನ್ವಿತ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಅವರಿಗೆ ನಾನು ಹೃತ್ಪೂರ್ವಕ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತೇನೆ ಎಂದು ಟ್ವೀಟ್ ಮಾಡಿದ್ದಾರೆ.

ಅಂತೆಯೇ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರಸರ್ಕಾರವು ಆಂಧ್ರಪ್ರದೇಶಕ್ಕೆ ನೀಡಿದ ಬದ್ಧತೆ ಮತ್ತು ಮಸೂದೆಯನ್ನು ಬೆಂಬಲಿಸಿದ ಎಲ್ಲಾ ಸಂಸದರಿಗೆ ಅವರು ಧನ್ಯವಾದ ಅರ್ಪಿಸಿದರು. ಇದು ಆಂಧ್ರ ಪ್ರದೇಶದ ನನ್ನ ಜನರಿಗೆ, ವಿಶೇಷವಾಗಿ ಅಮರಾವತಿಯ ನನ್ನ ರೈತರಿಗೆ ಸಿಕ್ಕ ಜಯ ಎಂದು ಅವರು ಹೇಳಿದರು.



ರಾಜಧಾನಿ ಇತಿಹಾಸ

2014ರಲ್ಲಿ ಅಖಂಡ ಆಂಧ್ರ ಪ್ರದೇಶ ವಿಭಜನೆಯಾಗಿ ತೆಲಂಗಾಣ ಹುಟ್ಟಿಕೊಂಡಿತ್ತು. ಅಂದಿನಿಂದ, ಹತ್ತು ವರ್ಷಗಳ ಕಾಲ, ಆಂಧ್ರ ಪ್ರದೇಶ ಮತ್ತು ತೆಲಂಗಾಣಕ್ಕೆ ಹೈದರಾಬಾದ್ ರಾಜಧಾನಿ ಎನ್ನುವ ಘೋಷಣೆಯನ್ನು ಮಾಡಲಾಗಿತ್ತು. ಆದರೆ, ಈ ಅವಧಿ ಮುಗಿದು ಎರಡು ವರ್ಷವಾದ ನಂತರ ಈಗ, ಅಮರಾವತಿಯನ್ನು ರಾಜಧಾನಿ ಎಂದು ಘೋಷಿಸಲಾಗಿದೆ.

12 ವರ್ಷ ರಾಜಧಾನಿ ಘೋಷಣೆಯಾಗಿರಲಿಲ್ಲ: ದಕ್ಷಿಣ ಭಾರತದ ಇತರ ರಾಜ್ಯಗಳಾದ ತಮಿಳುನಾಡಿಗೆ ಚೆನ್ನೈ, ಕರ್ನಾಟಕಕ್ಕೆ ಬೆಂಗಳೂರು ಮತ್ತು ಕೇರಳಕ್ಕೆ ತಿರುವನಂತಪುರಂನಂತೆ, ರಾಜ್ಯ ಇಬ್ಭಾಗವಾದಾಗ, ಮುಂದಿನ ರಾಜಧಾನಿಯಾಗಿ ಯಾವ ನಗರವನ್ನಾಗಿ ಘೋಷಣೆ ಮಾಡುವುದು ಎನ್ನುವ ಗೊಂದಲವಿತ್ತು. ಹಾಗಾಗಿ, ಹೈದರಾಬಾದ್ ಅನ್ನು ಜಂಟಿ ರಾಜಧಾನಿಯಾಗಿ ಘೋಷಣೆ ಮಾಡಲಾಗಿತ್ತು.

ಮೂರು ರಾಜಧಾನಿ ಗೊಂದಲ: ಹಿಂದಿನ ಮುಖ್ಯಮಂತ್ರಿ ವೈಎಸ್ ಜಗನ್ಮೋಹನ್ ಅವರು ರಾಜ್ಯಕ್ಕೆ ಮೂರು ರಾಜಧಾನಿ ಮಾಡುವ ಮಹತ್ವಾಕಾಂಕ್ಷೆಯನ್ನು ಹೊಂದಿದ್ದರು. ಶಾಸಕಾಂಗ ವ್ಯವಸ್ಥೆಗೆ ಅಮರಾವತಿ, ನ್ಯಾಯಾಂಗ ವ್ಯವಸ್ಥೆಗೆ ಕರ್ನೂಲ್ ಮತ್ತು ಆಡಳಿತಾತ್ಮಕವಾಗಿ ವಿಶಾಖಪಟ್ಟಣಂ ನಗರವನ್ನು ರಾಜಧಾನಿಯಾಗಿ ಮಾಡಲು ಹೊರಟಿದ್ದರು. 2019ರಲ್ಲಿ ಅಧಿಕಾರಕ್ಕೆ ಬಂದಿದ್ದ ಜಗನ್ ಅವರ ಈ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರ ಸಾರಾಸಗಟಾಗಿ ತಿರಸ್ಕರಿಸಿತ್ತು. ಇದು, ಅಭಿವೃದ್ಧಿಯ ಹಾದಿಗೆ ದೊಡ್ಡ ತೊಡಕಾಗಿತ್ತು.

ಒಂದೇ ರಾಜಧಾನಿ, ಕಾಯಿದೆ ತಿದ್ದುಪಡಿ: 2024ರಲ್ಲಿ ಅಭೂತಪೂರ್ವ ಜನಾದೇಶದೊಂದಿಗೆ ಅಧಿಕಾರಕ್ಕೆ ಬಂದ ಚಂದ್ರಬಾಬು ನಾಯ್ಡು, ಅಮರಾವತಿ ಒಂದೇ ರಾಜಧಾನಿ ಎಂದು ಘೋಷಣೆಯನ್ನು ಮಾಡಿ, ಅದಕ್ಕೆ ಸಂಬಂಧಿಸಿದ ಕಾನೂನು ಕ್ರಮಗಳನ್ನು ಕೈಗೆತ್ತಿಕೊಂಡರು. ಜೊತೆಗೆ, ಭವಿಷ್ಯದಲ್ಲಿ ಬೇರೆ ಸರ್ಕಾರ ಅಧಿಕಾರಕ್ಕೆ ಬಂದರೆ, ಮತ್ತೆ ರಾಜಧಾನಿಯನ್ನು ಬದಲಿಸದಂತೆ ತಡೆಯಲು ಸಂಸತ್ತಿನಲ್ಲಿ ಕಾಯಿದೆಯನ್ನು ತಿದ್ದುಪಡಿ ಮಾಡಲಾಯಿತು.

ನಾಲ್ವರು ಸಾಧಕರಿಗೆ ಶರಣದತ್ತಿ ಪ್ರಶಸ್ತಿ ಪ್ರದಾನ



2025ನೇ ಸಾಲಿನ 'ಶರಣ ದತ್ತಿ ಪ್ರಶಸ್ತಿ' ಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಪ್ರೊ.ಬಿ.ವಿ.ವಸಂತಕುಮಾರ್, ನಿವೃತ್ತ ಪ್ರಾಧ್ಯಾಪಕ ಡಾ.ಕಲ್ಯಾಣರಾವ್ ಜಿ. ಪಾಟೀಲ, ಬೆಂಗಳೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಎಸ್.ದೇವಿಕಾ, ರಾಣೆಬೆನ್ನೂರು ತಾಲೂಕಿನ ಜನಪದ ಪರಿಷತ್ ಅಧ್ಯಕ್ಷ ಡಾ.ಕಾಂತೇಶರೆಡ್ಡಿ ಗೋಡಿಹಾಳ ಅವರಿಗೆ ಪ್ರದಾನ ಮಾಡಲಾಯಿತು.

ಮೈಸೂರು, ಏ.7(ಎಸ್‌ಪಿಎನ್)– ವಿವಿಧ ಕ್ಷೇತ್ರಗಳ ನಾಲ್ವರು ಸಾಧಕರಿಗೆ ಶ್ರೀಮತಿ ಕಮಲಮ್ಮ ಮತ್ತು ಪ್ರೊ.ಜಿ.ಎ. ಶಿವಲಿಂಗಯ್ಯ ಅವರ ಹೆಸರಲ್ಲಿ ಕೊಡಮಾಡುವ 2025ನೇ ಸಾಲಿನ 'ಶರಣ ದತ್ತಿ ಪ್ರಶಸ್ತಿ' ಯನ್ನು ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಅವರು ಮಂಗಳವಾರ ಪ್ರದಾನ ಮಾಡಿದರು.

ಮೈಸೂರು ಜೆಎಸ್‌ಎಸ್ ಆಸ್ಪತ್ರೆ ಆವರಣದ ಶ್ರೀ ರಾಜೇಂದ್ರ ಭವನದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ನಗರ ಮತ್ತು ಜಿಲ್ಲಾ ಘಟಕ, ಕದಳಿ ಮಹಿಳಾ ವೇದಿಕೆ ಸಹಯೋಗದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಿದರು.

ಈ ವೇಳೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಪ್ರೊ.ಬಿ.ವಿ. ವಸಂತಕುಮಾರ್, ನಿವೃತ್ತ ಪ್ರಾಧ್ಯಾಪಕ ಡಾ.ಕಲ್ಯಾಣರಾವ್ ಜಿ. ಪಾಟೀಲ, ಬೆಂಗಳೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಎಸ್.ದೇವಿಕಾ, ರಾಣೆಬೆನ್ನೂರು ತಾಲೂಕಿನ ಜನಪದ ಪರಿಷತ್ ಅಧ್ಯಕ್ಷ ಡಾ.ಕಾಂತೇಶರೆಡ್ಡಿ ಗೋಡಿಹಾಳ ಅವರಿಗೆ 2025ನೇ ಸಾಲಿನ ಶರಣ ದತ್ತಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪ್ರಶಸ್ತಿ ಪ್ರದಾನ ಬಳಿಕ ಮಾತನಾಡಿದ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಇತ್ತೀಚಿನ ದಿನಗಳಲ್ಲಿ ದತ್ತಿ ಕಾರ್ಯಕ್ರಮಗಳು ಹೆಚ್ಚಾಗುತ್ತಿರುವುದು ಸಂತೋಷದ ಸಂಗತಿ. ದತ್ತಿ ಎಂದರೆ ದಾನ ಎಂಬ ಅರ್ಥವಿದ್ದು, ಹಿಂದೆ ಧಾರ್ಮಿಕ ಕ್ಷೇತ್ರಗಳು ಹಾಗೂ ದೇವಾಲಯಗಳಿಗೆ ದತ್ತಿ ನೀಡುವ ಪರಂಪರೆ ಇತ್ತು. ಕಮಲಮ್ಮ ಮತ್ತು ಪ್ರೊ.ಜಿ.ಎ.ಶಿವಲಿಂಗಯ್ಯ ತಮ್ಮ ಕುಟುಂಬದ ಆಪ್ತ ಮಿತ್ರರು ಎಂದು ತಿಳಿಸಿದರು.

ಮಂಡ್ಯ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಜಯಪ್ರಕಾಶ್ ಗೌಡ ಮಾತನಾಡಿ, ತಂದೆಯ ಹೆಸರಿನಲ್ಲಿ ಸ್ಥಾಪಿಸಿದ ದತ್ತಿ ಪ್ರಶಸ್ತಿ ಕೆಲ ವರ್ಷಗಳಿಂದ ನಿಂತಿದ್ದು, ಅದನ್ನು ಮತ್ತೆ ಆರಂಭಿಸಬೇಕೆಂದು ಮನವಿ ಮಾಡಿದರು.

ಪ್ರಶಸ್ತಿ ಪುರಸ್ಕೃತ ಪ್ರೊ.ಬಿ.ವಿ. ವಸಂತಕುಮಾರ್ ಮಾತನಾಡಿ, ಶರಣ ಸಂಸ್ಕೃತಿ ಪುಸ್ತಕಗಳಿಂದ ಮಾತ್ರ ಬಾರದು, ಗುರುಗಳು ಹಾಗೂ ಹಿರಿಯರಿಂದ ಬರುವ ಪರಂಪರೆ. ಬಾಲ್ಯದಲ್ಲೇ ವೀರಗಾಸೆ ಕಲಿತಿದ್ದು, ವಚನ ಸಾಹಿತ್ಯ ಅಧ್ಯಯನದಿಂದ ಶರಣ ಸಂಸ್ಕೃತಿ ಜೀವನದಲ್ಲಿ ಬೆರೆತುಹೋಗಿದೆ ಎಂದು ಹೇಳಿದರು.

ವೇದಿಕೆಯಲ್ಲಿ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಈ ವೇಳೆ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಸಿ. ಸೋಮಶೇಖರ, ಅ.ಭಾ.ಶ.ಸಾ.ಪ. ಮೈಸೂರು ನಗರ ಘಟಕದ ಅಧ್ಯಕ್ಷ ಜಯಪ್ಪ ಹೊನ್ನಾಳಿ, ಶರಣ ಸಾಹಿತ್ಯ ಪರಿಷತ್ ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶೋಭಾರಾಣಿ ಜೈಪ್ರಕಾಶ್, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಸೋಮಶೇಖರ್, ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಸ್ಪರ್ಧಾತ್ಮಕ ಪರೀಕ್ಷೆ ಯಶಸ್ಸಿಗೆ ಸಿದ್ಧತೆ ಜೊತೆಗೆ ಬದ್ಧತೆ ಅಗತ್ಯ

ಕಾರ್ಯಾಗಾರದಲ್ಲಿ ನಗರಸಭೆ ಆಯುಕ್ತ ಎಂ.ಬಸವರಾಜು

ನಂಜನಗೂಡು, ಏ.7– ಸ್ಪರ್ಧಾತ್ಮಕ ಪರೀಕ್ಷೆಗಳು ವಿದ್ಯಾರ್ಥಿಗಳ ವೃತ್ತಿ ಜೀವನ ರೂಪಿಸಲು ಮತ್ತು ಭವಿಷ್ಯವನ್ನು ಭದ್ರಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಆದ್ದರಿಂದ ವಿದ್ಯಾರ್ಥಿಗಳು ಯಶಸ್ಸು ಸಾಧಿಸಲು ವ್ಯವಸ್ಥಿತ ಸಿದ್ಧತೆ ಜೊತೆಗೆ ಬದ್ಧತೆ ಅಗತ್ಯವಾಗಿದೆ ಎಂದು ನಗರಸಭೆ ಆಯುಕ್ತ ಎಂ.ಬಸವರಾಜು ತಿಳಿಸಿದರು.

ನಗರದ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಘಟಕ, ಆಂತರಿಕ ಗುಣಮಟ್ಟ ಭರವಸೆ ಘಟಕ ಹಾಗೂ ಉದ್ಯೋಗ ಮಾರ್ಗದರ್ಶನ ಕೋಶಗಳ ಸಹಯೋಗದಲ್ಲಿ ಏರ್ಪಡಿಸಿದ್ದ ವಿದ್ಯಾರ್ಥಿಗಳಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತಾ ತಂತ್ರ ಮತ್ತು ವೃತ್ತಿ ಸಮಾಲೋಚನೆ ವಿಷಯ ಕುರಿತ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಅನ್ನ, ಅಕ್ಷರ ದಾಸೋಹ ಧ್ಯೇಯದೊಂದಿಗೆ ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷಣ, ಆರೋಗ್ಯ, ಕೃಷಿ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಆಧ್ಯಾತ್ಮಿಕ ಚಿಂತನೆಯೊಂದಿಗೆ ಗಣನೀಯ ಸಾಧನೆ ಮಾಡಿ ನಾಡಿನ ಅಸಂಖ್ಯಾತ ಜನರಿಗೆ ಆಶ್ರಯ ನೀಡಿರುವ ಶ್ರೀಸುತ್ತೂರು ಗುರು ಪರಂಪರೆಯ ಜೆಎಸ್‌ಎಸ್ ಮಹಾವಿದ್ಯಾಪೀಠದ ಅಂಗ ಸಂಸ್ಥೆ ನಂಜನಗೂಡು ಜೆಎಸ್‌ಎಸ್ ಪದವಿ ಕಾಲೇಜಿನಲ್ಲಿ ಸಾಧನೆಯ ಹಾದಿಯಲ್ಲಿ ಸಾಗುತ್ತಿರುವ ಕಲಿಕಾರ್ಥಿಗಳಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳ ಇಂತಹ ಕಾರ್ಯಾಗಾರ ಉತ್ತೇಜನ ಪೂರ್ವಕವಾಗಿದೆ ಎಂದರು.



ಕಾರ್ಯಾಗಾರವನ್ನು ನಗರಸಭೆ ಆಯುಕ್ತ ಎಂ.ಬಸವರಾಜು ಉದ್ಘಾಟಿಸಿದರು.

ಮುಖ್ಯ ಅತಿಥಿ ಕೆಎಎಸ್ ಅಧಿಕಾರಿ ಶಿವಕುಮಾರ್ ಕಾಸನೂರು ಮಾತನಾಡಿ, ಅಧ್ಯಯನದಲ್ಲಿ ಬದ್ಧತೆ, ಸಮಯ ಪ್ರಜ್ಞೆ, ವಿಶ್ಲೇಷಣಾ ಕೌಶಲ್ಯಗಳನ್ನು ರೂಢಿಸಿಕೊಂಡು ವ್ಯಕ್ತಿತ್ವ ವಿಕಸನದೊಂದಿಗೆ ಓದಿನಲ್ಲಿ ತೃಪ್ತಿ ಮತ್ತು ವೃತ್ತಿಯಲ್ಲಿ ಸಂತೃಪ್ತಿಯನ್ನು ಅನುಭವಿಸಬೇಕಾದರೆ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಯೋಜಿತ ಸಿದ್ಧತೆಯ ಪ್ರಾಮುಖ್ಯತೆ ಅರಿಯಬೇಕೆಂದು ಕಿವಿಮಾತು ಹೇಳಿದರು.

ಕಾಲೇಜಿನ ಪ್ರಾಂಶುಪಾಲ ಡಾ.ಸಿ.ಎಸ್.ಹೊನ್ನೇಗೌಡ ಮಾತನಾಡಿ, ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಘಟಕದ ವತಿಯಿಂದ ಕಾಲ ಕಾಲಕ್ಕೆ ನಡೆಸುವ ತರಬೇತಿ ಆಧಾರಿತ ತರಗತಿಗಳು, ಸಂಪನ್ಮೂಲ ವ್ಯಕ್ತಿಗಳಿಂದ ದೊರೆಯುವ ವಿಶೇಷ ಉಪನ್ಯಾಸಗಳೊಂದಿಗೆ ವಿದ್ಯಾರ್ಥಿಗಳು ಕಾಲೇಜಿನ ಗ್ರಂಥಾಲಯದ ಸೌಲಭ್ಯ ಸದುಪಯೋಗಪಡಿಸಿಕೊಳ್ಳುವ ಮೂಲಕ ಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನದ ಕಾಲಘಟ್ಟದಲ್ಲಿ ಜಯಶೀಲರಾಗಬೇಕೆಂದು ಸಲಹೆ ನೀಡಿದರು.


> ಬಡತನ, ಹಸಿವು ಮತ್ತು ಸವಾಲುಗಳು ಸಂಬಂಧಿತ ನಿದರ್ಶನಗಳೊಂದಿಗೆ ಯಶಸ್ಸಿನ ಗುಟ್ಟು ಯಾವಾಗಲೂ ಪರಿಶ್ರಮ ಮತ್ತು ಬದ್ಧತೆಯ ಅಧ್ಯಯನವನ್ನು ಅವಲಂಬಿಸಿರುತ್ತದೆ. ಸಾಧನೆಯ ಮೆಟ್ಟಿಲನ್ನು ಏರ ಬಯಸುವ ಸ್ಪರ್ಧಾ ಕಾಂಕ್ಷಿಗಳು ಸ್ಪರ್ಧಾ ಕ್ಷೇತ್ರದಲ್ಲಿ ಸಾಧನೆ ಮಾಡಿ ಜನಮಾನಸದಲ್ಲಿ ಸಾರ್ವಕಾಲಿಕವಾಗಿ ಉಳಿಯಬೇಕು.
> – ಡಾ.ಶಿವಪ್ರಸಾದ್, ಅರಸೀಕೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಥಮ ದರ್ಜೆ ಗುತ್ತಿಗೆದಾರ ಯು.ಎನ್.ಪದ್ಮನಾಭ ರಾವ್, ಸರ್ಕಾರ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಉದ್ಯೋಗವನ್ನರಸಿ ಹೋಗುವುದಾದರೆ ಸಮಚಿತ್ತದಿಂದ, ಸಕಾಲಿಕ ಅಧ್ಯಯನ ಮಾಡಿ ಶಿಕ್ಷಣ ಸಂಸ್ಥೆಯ ಧ್ಯೇಯೋದ್ದೇಶ ಮತ್ತು ಪೋಷಕರ ಕನಸನ್ನು ನನಸಾಗಿಸುವಲ್ಲಿ ವಿದ್ಯಾರ್ಥಿಗಳು ಉತ್ತಮ ಗುರಿಯೊಂದಿಗೆ ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳಬೇಕೆಂದು ತಿಳಿ ಹೇಳಿದರು.

ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಘಟಕದ ಸಂಚಾಲಕಿ ಶ್ವೇತ, ಉದ್ಯೋಗ ಮಾರ್ಗದರ್ಶನ ಹಾಗೂ ಸಮಾಲೋಚನಾ ಕೋಶದ ಸಂಚಾಲಕಿ ದೀಪಾಲಿ, ಕಚೇರಿ ಅಧೀಕ್ಷಕ ಕೆ.ವಿ.ಸುಂದರ ರಾಜು, ಅಧ್ಯಾಪಕರು, ಅಧ್ಯಾಪಕೇತರರು ಸೇರಿದಂತೆ ಇತರರಿದ್ದರು.

ಪಕ್ಷ ಸಂಘಟಿಸಿ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಜ್ಜಾಗಿ

ಬಿಜೆಪಿ ಕಾರ್ಯಕರ್ತರಿಗೆ ಮಾಜಿ ಎಂಎಲ್‌ಸಿ ಸಿ.ರಮೇಶ್ ಕರೆ


ಸಿ.ರಮೇಶ್ ಅವರನ್ನು ಬಿಜೆಪಿ ಮುಖಂಡರು ಸನ್ಮಾನಿಸಿದರು.

ತಿ.ನರಸೀಪುರ, ಏ.7– ಬಿಜೆಪಿ ಕಾರ್ಯಕರ್ತರು ಬೂತ್ ಮಟ್ಟದಿಂದ ಪಕ್ಷ ಸಂಘಟಿಸಿ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಜ್ಜಾಗಬೇಕು ಎಂದು ಮಾಜಿ ವಿಧಾನ ಪರಿಷತ್ ಸದಸ್ಯ ಹಾಗೂ ಬಿಜೆಪಿ ಹಿರಿಯ ಮುಖಂಡ ಸಿ.ರಮೇಶ್ ಕರೆ ನೀಡಿದರು.

ವರುಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಎಸ್‌ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಮಂಜು ಮತ್ತು ಆಲಗೂಡು ಬೂತ್ ಅಧ್ಯಕ್ಷ ಪ್ರದೀಪ್ ಹಾಗೂ ಬೆಂಬಲಿಗರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಬೂತ್ ಮಟ್ಟದಿಂದ ಪಕ್ಷ ಸಂಘಟಿಸುವ ಮೂಲಕ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳ ಪರ ಪ್ರಚಾರ ಕೈಗೊಂಡು ಹೆಚ್ಚಿನ ಅಭ್ಯರ್ಥಿಗಳು ಜಯಗಳಿಸಲು ಶ್ರಮಿಸೋಣ. ಇದಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದರು.

ತಿ.ನರಸೀಪುರ ಹಾಗೂ ವರುಣ ಕ್ಷೇತ್ರದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಯಾರೇ ಅಭ್ಯರ್ಥಿಗಳಾದರೂ ಅವರ ಪರ ಕೆಲಸ ಮಾಡೋಣ ಎಂದು ಕರೆ ನೀಡಿದ ಸಿ.ರಮೇಶ್, ಈ ಬಾರಿ ಯುವಕರಿಗೆ ಹೆಚ್ಚಿನ ಆದ್ಯತೆ ನೀಡಲಾಗಿದ್ದು, ಮುಂಬರುವ ಚುನಾವಣೆಗಳಲ್ಲಿ ನಮ್ಮ ಶಕ್ತಿ ಏನೆಂಬುದನ್ನು ತೋರಿಸೋಣ. ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡುವ ಮೂಲಕ ಮತ್ತು ಸರ್ಕಾರದ ತಪ್ಪುಗಳನ್ನು ಎತ್ತಿ ಹಿಡಿಯುವ ಮೂಲಕ ಸಂಘಟಿತರಾಗೋಣ ಎಂದರು.

ಜಿಲ್ಲಾ ನಿಕಟ ಪೂರ್ವ ಎಸ್‌ಟಿ ಮೋರ್ಚಾ ಅಧ್ಯಕ್ಷ ಮುದ್ದುಕೃಷ್ಣ, ಅಶೋಕ್ ಇದ್ದರು.

ಆಂಬುಲೆನ್ಸ್ ಡಿಕ್ಕಿ: ಸ್ಥಳದಲ್ಲೇ ಪಾದಚಾರಿ ಸಾವು



ಹೆಚ್.ಡಿ.ಕೋಟೆ, ಏ.7– ಆಂಬುಲೆನ್ಸ್ ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಎಂ.ಕನ್ನೇನಹಳ್ಳಿ ಗ್ರಾಮದಲ್ಲಿ ಸೋಮವಾರ ರಾತ್ರಿ ನಡೆದಿದೆ.

ತಾಲೂಕಿನ ಬನವಾಡಿ ಗ್ರಾಮದ ಪುಟ್ಟಯ್ಯ ಅವರ ಪುತ್ರ ಗವಿಸಿದ್ದ(45) ಸಾವನ್ನಪ್ಪಿದವರು. ಈತ ಎಂ.ಕನ್ನೇನಹಳ್ಳಿ ಗ್ರಾಮದಲ್ಲಿ ಸೋಮವಾರ ರಾತ್ರಿ 11ರ ವೇಳೆಗೆ ನಡೆಯುತ್ತಿದ್ದ ಸಿದ್ದಪ್ಪಾಜಿ ಕೊಂಡೋತ್ಸವವನ್ನು ರಸ್ತೆಯ ಪಕ್ಕದಲ್ಲಿ ನಿಂತು ವೀಕ್ಷಿಸುತ್ತಿದ್ದರು. ಈ ವೇಳೆ ಹುಣಸೂರು ತಾಲೂಕಿನ ಸಿಂಗರಮಾರನಹಳ್ಳಿ ಗ್ರಾಮದಿಂದ ಹೆಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆಗೆ ಹೆರಿಗೆ ನೋವಿನಿಂದ ನರಳುತ್ತಿದ್ದ ಗರ್ಭಿಣಿ ಮಹಿಳೆಯನ್ನು ಕರೆದೊಯ್ಯುತ್ತಿದ್ದ ಆಂಬುಲೆನ್ಸ್ ವೇಗವಾಗಿ ಬಂದು ಗವಿಸಿದ್ದ ಅವರಿಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ರಭಸಕ್ಕೆ ಅನತಿ ದೂರ ಬಿದ್ದಿದ್ದರಿಂದ ತಲೆಗೆ ಗಂಭೀರ ಗಾಯವಾಗಿ ಸ್ಥಳದಲ್ಲೇ ಗವಿಸಿದ್ದ ಸಾವನ್ನಪ್ಪಿದ್ದಾರೆ. ಈ ವೇಳೆ ಸ್ಥಳದಿಂದ ಪರಾರಿಯಾಗಲು ಯತ್ನಿಸಿದ ಆಂಬುಲೆನ್ಸ್ ಅನ್ನು ಗ್ರಾಮಸ್ಥರು ಅಡ್ಡಗಟ್ಟಿ ಚಾಲಕ ಸೋಮುನನ್ನು ಹಿಡಿದು ಅದೇ ಆಂಬುಲೆನ್ಸ್‌ನಲ್ಲಿ ಶವವನ್ನು ಹೆಚ್.ಡಿ.ಕೋಟೆ ಶವಾಗಾರಕ್ಕೆ ರವಾನಿಸಿದ್ದಾರೆ. ಈ ವೇಳೆ ಚಾಲಕ ಸೋಮು ಆಂಬುಲೆನ್ಸ್ ಅನ್ನು ಪಟ್ಟಣ ಪೊಲೀಸ್ ಠಾಣೆಗೆ ತಂದು ನಿಲ್ಲಿಸಿ ಪರಾರಿಯಾಗಿದ್ದಾನೆ.

ಚಾಲಕನ ಮೇಲೆ ಕ್ರಮಕ್ಕೆ ಆಗ್ರಹ: ಮಂಗಳವಾರ ಬೆಳಗ್ಗೆ ಆಸ್ಪತ್ರೆ ಎದುರು ಜಮಾಯಿಸಿದ ಮೃತನ ಸಂಬಂಧಿಕರು ಅಜಾಗರೂಕತೆಯಿಂದ ವಾಹನ ಚಾಲನೆ ಮಾಡಿ ಪಾದಚಾರಿ ಸಾವಿಗೆ ಕಾರಣನಾದ ಚಾಲಕ ಸೋಮುವಿನ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು. ಅಲ್ಲದೇ ಆಂಬುಲೆನ್ಸ್ ಏಜೆನ್ಸಿಯವರು ಸ್ಥಳಕ್ಕಾಗಮಿಸಿ ನೊಂದ ಕುಟುಂಬಕ್ಕೆ ಪರಿಹಾರ ನೀಡಬೇಕು. ಅಲ್ಲದೇ ಮೃತನ ಕುಟುಂಬದ ಸದಸ್ಯರೊಬ್ಬರಿಗೆ ಉದ್ಯೋಗ ನೀಡಬೇಕು. ಅಲ್ಲಿವರೆಗೆ ಶವದ ಮರಣೋತ್ತರ ಪರೀಕ್ಷೆಗೆ ಅವಕಾಶ ನೀಡುವುದಿಲ್ಲ ಎಂದು ಪಟ್ಟು ಹಿಡಿದರು.

ಸ್ಥಳಕ್ಕಾಗಮಿಸಿದ ಇನ್ಸ್‌ಪೆಕ್ಟರ್ ಗಂಗಾಧರ್ ಹಾಗೂ ಆರೋಗ್ಯಾಧಿಕಾರಿ ಡಾ.ರವಿಕುಮಾರ್, ಆಂಬುಲೆನ್ಸ್ ಏಜೆನ್ಸಿ ಮೈಸೂರು ವಿಭಾಗದ ಮುಖ್ಯಸ್ಥ ನಾಗರಾಜು ಅವರನ್ನು ಸ್ಥಳಕ್ಕೆ ಕರೆಸಿಕೊಂಡು ಮಾಹಿತಿ ನೀಡಿ ಸೂಕ್ತ ಪರಿಹಾರ ನೀಡುವಂತೆ ತಿಳಿಸಿದರು.

ಇದಕ್ಕೆ ಸ್ಪಂದಿಸಿದ ನಾಗರಾಜು ನಮ್ಮ ಏಜೆನ್ಸಿ ವತಿಯಿಂದ ಧನ ಸಹಾಯ ಮಾಡುವುದಾಗಿ ಭರವಸೆ ನೀಡಿದರು. ಅಲ್ಲದೇ ಮೃತನ ಕುಟುಂಬದವರು ವಿಮೆ ಪರಿಹಾರ ಪಡೆಯಲು ಕಾನೂನು ಪ್ರಕಾರ ಪ್ರಕರಣ ದಾಖಲಿಸುವಂತೆ ಗ್ರಾಮಸ್ಥರ ಸಲಹೆ ನೀಡಿದ ಮೇರೆಗೆ ಕುಟುಂಬದವರು ಮರಣೋತ್ತರ ಪರೀಕ್ಷೆ ನಡೆಸಲು ಅವಕಾಶ ನೀಡಿದರು. ಈ ಸಂಬಂಧ ಹೆಚ್.ಡಿ.ಕೋಟೆ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಬೇಟೆಗಾರರ ಗುಂಡಿಗೆ ಹೆಣ್ಣು ಚಿರತೆ ಬಲಿ

ಸಮಗ್ರ ತನಿಖೆಗೆ ಅರಣ್ಯ ಸಚಿವರ ಸೂಚನೆ

ಹುಣಸೂರು, ಏ.7– ದುಷ್ಕರ್ಮಿಗಳು ಗುಂಡು ಹಾರಿಸಿ 2 ವರ್ಷದ ಹೆಣ್ಣು ಚಿರತೆ ಕೊಂದಿರುವ ಘಟನೆ ಹುಣಸೂರು ಪ್ರಾದೇಶಿಕ ಅರಣ್ಯ ವಿಭಾಗದ ಪಿರಿಯಾಪಟ್ಟಣ ತಾಲೂಕು ವ್ಯಾಪ್ತಿಯ ಕೊಪ್ಪ ಶಾಖೆ ಗುಳೇದಹಳ್ಳ ಪ್ರದೇಶದಲ್ಲಿ ನಡೆದಿದ್ದು, ಈ ಸಂಬಂಧ ತನಿಖೆಗೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಆದೇಶಿಸಿದ್ದಾರೆ.

ಸೋಮವಾರ ಬೆಳಗ್ಗೆ ಚಿರತೆ ಕಳೇಬರ ಪತ್ತೆಯಾಗಿದ್ದು, ವನ್ಯಜೀವಿ ಬೇಟೆಗೆ ಬಂದಿರುವ ಬೇಟೆಗಾರರು ನಾಡಬಂದೂಕಿನಿಂದ ಗುಂಡು ಹಾರಿಸಿರಬಹುದೆಂದು ಶಂಕಿಸಲಾಗಿದೆ. ಅರಣ್ಯಾಧಿಕಾರಿಗಳು ಸ್ಥಳ ಪರಿಶೀಲಿಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ. ವೈದ್ಯಕೀಯ ಪರೀಕ್ಷೆ ವೇಳೆ ಚಿರತೆ ದೇಹದಲ್ಲಿ ನಾಡಬಂದೂಕಿನಿಂದ ಹಾರಿಸಿರುವ 3 ಕಾಡತೂಸು(ಗುಂಡು)ಗಳು ಪತ್ತೆಯಾಗಿವೆ. ನಿಯಮಾನುಸಾರ ಚಿರತೆ ದೇಹದ ಅಂಗಾಂಗಗಳ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದ್ದು, ವರದಿ ಬಂದ ನಂತರ ತನಿಖೆ ನಡೆಸಲಾಗುವುದು ಎಂದು ವಲಯದ ಡಿಸಿಎಫ್ ಕುರುಬನಾಥನ್ ತಿಳಿಸಿದ್ದಾರೆ.

ಗಂಭೀರವಾಗಿ ಪರಿಗಣಿಸಿದ ಸಚಿವರು: ಗುಳೆದಹಳ್ಳದ ರಾಜ್ಯ ಅರಣ್ಯದಿಂದ 2 ಕಿಲೋಮೀಟರ್ ದೂರದಲ್ಲಿರುವ ಕೊಪ್ಪ ವಿಭಾಗದಲ್ಲಿ ಗುಂಡೇಟಿನಿಂದ ಚಿರತೆ ಸಾವಿಗೀಡಾಗಿರುವ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಅರಣ್ಯ ಸಚಿವ ಈಶ್ವರ್ ಖಂಡ್ರೆ ಈ ಸಂಬಂಧ ಸಮಗ್ರ ತನಿಖೆಗೆ ಆದೇಶಿಸಿದ್ದಾರೆ.



ಮುಖ್ಯ ವನ್ಯಜೀವಿ ಪರಿಪಾಲಕರಿಗೆ ಲಿಖಿತ ಸೂಚನೆ ನೀಡಿರುವ ಅವರು, 2 ವರ್ಷದ ಹೆಣ್ಣು ಚಿರತೆ ಗುಂಡೇಟಿನಿಂದ ಸಾವನ್ನಪ್ಪಿರುವುದು ಅತ್ಯಂತ ನೋವಿನ ಸಂಗತಿಯಾಗಿದ್ದು, ವನ್ಯಜೀವಿ ಅಂಗಾಂಗಕ್ಕಾಗಿ ಕಳ್ಳಬೇಟೆ ಇನ್ನೂ ನಡೆಯುತ್ತಿದೆ ಎಂಬುದಕ್ಕೆ ಇದು ಪುಷ್ಟಿ ನೀಡುತ್ತಿದೆ. ಈ ನಿಟ್ಟಿನಲ್ಲಿ ಸಮಗ್ರ ತನಿಖೆ ನಡೆಸಿ, ಆರೋಪಿಗಳನ್ನು ಬಂಧಿಸಬೇಕು.

ವನ್ಯಜೀವಿ ಕಳ್ಳಬೇಟೆಗಾರರನ್ನು ಪತ್ತೆ ಹಚ್ಚಿ, ಕಾನೂನು ಕ್ರಮ ಜರುಗಿಸಬೇಕು. ಈ ವಲಯದಲ್ಲಿ ಗಸ್ತು ವೈಫಲ್ಯವಾಗಿದ್ದಲ್ಲಿ ಸಂಬಂಧಿತ ಗಸ್ತು ಸಿಬ್ಬಂದಿಯ ಮೇಲೆ ಶಿಸ್ತುಕ್ರಮ ಜರುಗಿಸಿ, ಅರಣ್ಯ ಅಪರಾಧ ನಿಯಂತ್ರಣ ಕೋಶವನ್ನು ಹೆಚ್ಚು ಸಕ್ರಿಯಗೊಳಿಸಬೇಕೆಂದು ತಿಳಿಸಿದ್ದಾರೆ.

ಹುಣಸೂರಲ್ಲಿ ಅಂಬೇಡ್ಕರ್ ಜಯಂತಿ ಪೂರ್ವಭಾವಿ ಸಭೆ

ಹುಣಸೂರು, ಏ.7– ತಾಲೂಕು ಆಡಳಿತದಿಂದ ಏ.14ರಂದು ಡಾ.ಬಿ.ಆರ್. ಅಂಬೇಡ್ಕರ್ ಜಯಂತಿಯನ್ನು ಸರಳವಾಗಿ ಆಚರಿಸಿ. ಮತ್ತೊಂದು ದಿನ ಎಲ್ಲಾ ಸಮುದಾಯದವರನ್ನು ಆಹ್ವಾನಿಸಿ ಜಯಂತಿ ಆಚರಿಸುವಂತೆ ದಲಿತ ಮುಖಂಡ ಆನಂದಸ್ವಾಮಿ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಮಂಗಳವಾರ ನಡೆದ ಬಿ.ಆರ್.ಅಂಬೇಡ್ಕರ್ ಜಯಂತಿ ಪೂರ್ವಬಾವಿ ಸಭೆಯಲ್ಲಿ ಮಾತನಾಡಿದ ಅವರು, ಅಂದು ಗ್ರಾಮೀಣ ಭಾಗದಲ್ಲಿ ಅಂಬೇಡ್ಕರ್ ಜಯಂತಿ ಆಚರಿಸುವುದರಿಂದ ಯುವಕರು, ಮಹಿಳೆಯರು ತಾಲೂಕು ಮಟ್ಟದ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಿಲ್ಲ. ಹೀಗಾಗಿ ಮತ್ತೊಂದು ದಿನ ಅಂಬೇಡ್ಕರ್ ಜಯಂತಿ ಆಚರಿಸಲು ಶಾಸಕ ಜಿ.ಡಿ.ಹರೀಶ್‌ಗೌಡರ ಗಮನಕ್ಕೆ ತರುವಂತೆ ಮನವಿ ಮಾಡಿದರು.

ಮುಖಂಡ ಪುಟ್ಟಸ್ವಾಮಿ ಮಾತನಾಡಿ, ತಾಲೂಕು ಆಡಳಿತ ದಲಿತ ಸಮುದಾಯದ ಕುಂದು ಕೊರತೆ ಸಭೆ ಕರೆಯದೆ ಅಂಬೇಡ್ಕರ್ ಜಯಂತಿ ಆಚರಿಸುವುದರಲ್ಲಿ ಅರ್ಥವಿಲ್ಲ. ದಲಿತರು ಹಲವು ಸಮಸ್ಯೆಗಳಿಂದ ಬಳಲುತ್ತಿದ್ದಾರೆ ಎಂದು ಅಸಮಾಧಾನ ಹೊರ ಹಾಕಿದರು.

ನಗರದಲ್ಲಿ ಅಂಬೇಡ್ಕರ್ ಪುತ್ಥಳಿ ಸ್ಥಾಪನೆ ಸಂಬಂಧ ಗಂಭೀರ ಚರ್ಚೆ ನಡೆಸಿದ ಮುಖಂಡರು, ಕಳೆದ ಸಾಲಿನಲ್ಲಿ ಪುತ್ಥಳಿ ಸ್ಥಾಪನೆಗೆ ನಿವೇಶನ ನಿಗದಿಗೊಳಿಸುವ


ಹುಣಸೂರಲ್ಲಿ ಅಂಬೇಡ್ಕರ್ ಜಯಂತಿ ಪೂರ್ವಭಾವಿ ಸಭೆ ನಡೆಯಿತು.

ಬಗ್ಗೆ ಭರವಸೆ ನೀಡಿದ್ದರು. ನಂತರ ಏನಾಯಿತು ಎಂದು ತಾಲೂಕು ಆಡಳಿತ ಸಮಾಜದ ಮುಖಂಡರ ಗಮನಕ್ಕೆ ತಂದಿಲ್ಲ ಎಂದು ಪುಟ್ಟರಾಜು ಸಭೆ ಗಮನಕ್ಕೆ ತಂದರು. ಇವರ ಬೇಡಿಕೆಗೆ ಮುಖಂಡರಾದ ರಾಮಕೃಷ್ಣ, ಕೃಷ್ಣ, ಚಿಕ್ಕಸ್ವಾಮಿ ಸೇರಿದಂತೆ ಹಲವರು ದನಿಗೂಡಿಸಿದರು.

ತಹಸೀಲ್ದಾರ್ ಮಂಜುನಾಥ್ ಮಾತನಾಡಿ, ಈಗಾಗಲೇ ನಗರದ ಸಂವಿಧಾನ ವೃತ್ತದ ಬಳಿ ಲೋಕೋಪಯೋಗಿ ಮತ್ತು ಕಂದಾಯ ಇಲಾಖೆಗೆ ಸೇರಿದ ನಿವೇಶನದಲ್ಲಿ ನಿರ್ಮಿಸಲು 30 ಅಡಿ ನಿವೇಶನ ಕಾಯ್ದಿರಿಸಲಾಗಿದ್ದು, ಸಂಬಂಧಿಸಿದ ಕಚೇರಿಗೆ ಕಡತ ಕಳುಹಿಸಲಾಗಿದೆ. ಈ ಸಂಬಂಧ ಶಾಸಕರು ಸಮಾಜ ಕಲ್ಯಾಣ ಸಚಿವರೊಂದಿಗೆ ಸಂಪರ್ಕದಲ್ಲಿದ್ದಾರೆ ಎಂದರು.

ಈ ವೇಳೆ ಮುಖಂಡರಾದ ನಾಗರಾಜ್ ಮಲ್ಲಾಡಿ, ನಿಂಗರಾಜ್ ಮಲ್ಲಾಡಿ, ಕೆಂಪರಾಜು, ಸ್ವಾಮಿ, ಡಿ.ಕುಮಾರ್, ಬಸವಲಿಂಗಯ್ಯ, ದೇವರಾಜ ಒಡೆಯರ್, ನಾಗೇಶ್, ಸಂತೋಷ್, ಪ್ರಸನ್ನ ಕುಮಾರ್, ಶಿವಣ್ಣ, ಆಂಜನೇಯ ಸೇರಿದಂತೆ ಇತರರಿದ್ದರು.

ಪ್ರಮಾಣ ಪತ್ರ ವಿತರಣೆ



ಹುಣಸೂರಿನಲ್ಲಿ ಫ್ಯಾಷನ್ ಡಿಸೈನ್, ಬ್ಯೂಟಿಷಿಯನ್ ತರಬೇತಿ ಪಡೆದವರಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ಈ ವೇಳೆ ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರದ ರಾಜು, ಚಂದ್ರೇಶ್, ಮಾದನಾಯಕ, ರೇಖಾ, ಹರ್ಷಿತಾ, ತರಬೇತಿ ಶಿಕ್ಷಕಿಯರಾದ ಗೀತಾ, ಪಲ್ಲವಿ, ತಾಲೂಕು ಆರೋಗ್ಯ ಇಲಾಖೆಯ ರಾಜೇಶ್ವರಿ, ತಾಲೂಕು ಶಿಶು ಅಭಿವೃದ್ಧಿ ಅಧಿಕಾರಿ ಸೋಮಯ್ಯ, ವಿವೇಕಾನಂದ ಯೂತ್ ಮೂವ್ಮೆಂಟ್ ವ್ಯವಸ್ಥಾಪಕ ರವಿಕುಮಾರ್ ಇದ್ದರು.

ಕೋಟೆಯಲ್ಲಿ ವಿಶ್ವ ಆರೋಗ್ಯ ದಿನ ಜಾಗೃತಿ ಜಾಥಾ

ಹೆಚ್.ಡಿ.ಕೋಟೆ, ಏ.7– ಜನರ ಆರೋಗ್ಯದ ಬಗ್ಗೆ ಅರಿವು ಮೂಡಿಸಲು ವಿಶ್ವಸಂಸ್ಥೆ 1948 ರಿಂದ ಏ.7ರಂದು ವಿಶ್ವ ಆರೋಗ್ಯ ದಿನವನ್ನಾಗಿ ಆಚರಿಸಿಕೊಂಡು ಬರುತ್ತಿದೆ ಎಂದು ಮೈಸೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ಡಾ.ಗೋಪಿನಾಥ್ ತಿಳಿಸಿದರು.

ಪಟ್ಟಣದ ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಆವರಣದಲ್ಲಿ ಆರೋಗ್ಯಾಧಿಕಾರಿಗಳ ಕಾರ್ಯಾಲಯ, ಹಾರ್ಟ್ ಸಂಸ್ಥೆ ಮೈಸೂರು ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ಆರೋಗ್ಯ ದಿನದ ಕುರಿತ ಜಾಗೃತಿ ಜಾಥಾಕ್ಕೆ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಜನರಿಗೆ ಕಾಲಕ್ಕೆ ಅನುಗುಣವಾಗಿ ಆರೋಗ್ಯದ ಬಗ್ಗೆ ಅರಿವು ಮೂಡಿಸಲು ಇಂತಹ ಕಾರ್ಯಕ್ರಮಗಳು ಸಹಕಾರಿಯಾಗಿವೆ ಎಂದರು.


ವಿಶ್ವ ಆರೋಗ್ಯ ದಿನದ ಕುರಿತ ಜಾಗೃತಿ ಜಾಥಾಕ್ಕೆ ಚಾಲನೆ ನೀಡಲಾಯಿತು.

> ಸಮುದಾಯದ ಆರೋಗ್ಯ ದೃಷ್ಟಿಯಿಂದ ಹಲವು ಜಾಗೃತಿ ಕಾರ್ಯಕ್ರಮಗಳು ನಡೆಯುತ್ತಿವೆ. ಇತ್ತೀಚಿನ ದಿನಗಳಲ್ಲಿ ಮನುಷ್ಯನ ಜೀವನ ಶೈಲಿ ಬದಲಾವಣೆ ಕಂಡು ಬಂದಿದ್ದು ಸೇವನೆ ಆಹಾರ, ತೊಡುವ ಬಟ್ಟೆ ಎಲ್ಲವು ಬದಲಾವಣೆಯಾಗಿದೆ. ಈ ವರ್ಷದ ಘೋಷವಾಕ್ಯ 'ಆರೋಗ್ಯಕ್ಕಾಗಿ ಒಟ್ಟಾಗಿ ವಿಜ್ಞಾನದೊಂದಿಗೆ ನಿಲ್ಲು' ಎಂಬ ಸಂದೇಶದೊಂದಿಗೆ ಗ್ರಾಮೀಣ ಭಾಗದಲ್ಲಿ ಜೀವನ ಶೈಲಿಯಲ್ಲಿ ಬದಲಾವಣೆ ತರಲು ಮಾಹಿತಿ ನೀಡಿ ಸಮುದಾಯದಲ್ಲಿ ಜಾಗೃತಿಗೊಳಿಸಲು ನಮ್ಮ ಆರೋಗ್ಯ ಇಲಾಖೆ ಸದಾ ಕಾರ್ಯೋನ್ಮುಖರಾಗಬೇಕು. – ಡಾ.ಟಿ.ರವಿಕುಮಾರ್, ತಾಲೂಕು ಆರೋಗ್ಯಾಧಿಕಾರಿ.

ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿ, ತಾಲೂಕು ನೋಡಲ್ ಅಧಿಕಾರಿ ಡಾ.ಬೃಂದಾ ಮಾತನಾಡಿ, ಆರೋಗ್ಯ ಕಾಪಾಡಿಕೊಳ್ಳಲು ವಿಜ್ಞಾನದ ಸಹಕಾರ ಪಡೆದುಕೊಳ್ಳಬೇಕಾಗುತ್ತದೆ. ಈ ನಿಟ್ಟಿನಲ್ಲಿ ಪ್ರತಿ ವರ್ಷ ವಿಶ್ವ ಸಂಸ್ಥೆ ಒಂದೊಂದು ಘೋಷವಾಕ್ಯದೊಂದಿಗೆ ವಿಶ್ವ ಆರೋಗ್ಯ ದಿನಾಚರಣೆ ಆಚರಿಸುತ್ತಿದೆ. ಬೇಸಿಗೆಯಲ್ಲಿ ತುಂಬಾ ಆರೋಗ್ಯ ಸಮಸ್ಯೆಗಳು ಉಂಟಾ ಗುತ್ತವೆ. ಇದರ ಬಗ್ಗೆ ನಾವು ಜಾಗೃತಿಯಿಂದ ಇರಬೇಕು ಎಂದರು.

ಹಾರ್ಟ್ ಸಂಸ್ಥೆ ಸಂಯೋಜಕ ಶಿವಲಿಂಗ, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಶರತ್, ಡಾ.ಚಂದ್ರಕಲಾ, ಡಾ.ಹರ್ಷ, ಡಾ.ಕೀರ್ತಿ, ಡಾ.ಮನೋಹರ್, ಡಾ.ಪಾರ್ಥ ಸಾರಥಿ, ಸಮುದಾಯ ಆರೋಗ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಸಂರಕ್ಷಣಾಧಿಕಾರಿಗಳು, ಆರೋಗ್ಯ ನಿರೀಕ್ಷಣಾಧಿಕಾರಿಗಳು, ಆಶಾ ಕಾರ್ಯಕರ್ತರು, ಸಾರ್ವಜನಿಕರು ಸೇರಿದಂತೆ ಇದ್ದರು.

ಶರಣರ ಸಂದೇಶಗಳು ಮಾನವನ ಬದುಕಿಗೆ ಪೂರಕ


ಡಾ.ಶಿವಕುಮಾರ ಸ್ವಾಮೀಜಿ ಜಯಂತಿಯಲ್ಲಿ ಹೆಳವರಹುಂಡಿ ಸಿದ್ದಪ್ಪ ಅಭಿಪ್ರಾಯ

ತಿ.ನರಸೀಪುರ, ಏ.7– ರಾಜ್ಯದ ಶ್ರೀ ಮಠಗಳು ಬಸವಣ್ಣನವರ ತತ್ವಾದರ್ಶಗಳನ್ನು ಜನಮಾನಸಕ್ಕೆ ತಲುಪಿಸುತ್ತಿವೆ ಎಂದು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ತಿಳಿಸಿದರು.

ತಾಲೂಕಿನ ಮಾಡ್ರಳ್ಳಿ ಪಟ್ಟದ ಮಠದಲ್ಲಿ ಆಯೋಜಿಸಿದ್ದ ಡಾ.ಶಿವಕುಮಾರ ಸ್ವಾಮೀಜಿ ಅವರ 119ನೇ ಜಯಂತ್ಯೋತ್ಸವದ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಮರ್ಪಿಸಿ ಮತ್ತು ಚನ್ನಮಲ್ಲಿಕಾರ್ಜುನ ಸ್ವಾಮೀಜಿಯವರ 50ನೇ ಸುವರ್ಣ ಪುಣ್ಯ ಸ್ಮರಣೋತ್ಸವ ಯಶಸ್ವಿಯಾದ ಹಿನ್ನೆಲೆ ಧನ್ಯವಾದ ಸಮರ್ಪಣಾ ಸಭೆಯಲ್ಲಿ ಮಾತನಾಡಿದ ಅವರು, ಭಾರತದ ಪ್ರಮುಖ ನಗರಗಳಿಂದ ಹಳ್ಳಿಗಳವರೆಗೂ ಆಧ್ಯಾತ್ಮಿಕ ಚಿಂತನೆಗಳಿಗೆ ಮಹತ್ವ ನೀಡುತ್ತಾ ಬರಲಾಗಿದೆ. ಶರಣರ ಸಂದೇಶಗಳು ಮಾನವನ ಬದುಕಿಗೆ ಪೂರಕವಾಗಿದೆ. ಹಿರಿಯರ ತತ್ವಾದರ್ಶಗಳು ಪ್ರಸ್ತುತ ಅವಶ್ಯಕವಾಗಿದ್ದು, ಯುವ ಪೀಳಿಗೆಯನ್ನು ಸರಿದಾರಿಗೆ ತರಲು ಇಂತಹ ಕಾರ್ಯಕ್ರಮಗಳು ನಿರಂತರವಾಗಿ ನಡೆಯಬೇಕು ಎಂದರು.

ವಾಟಾಳು ಸೂರ್ಯ ಸಿಂಹಾಸನ ಪೀಠದ ಡಾ.ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಲೋಕ ಕಲ್ಯಾಣ ಬಯಸಿದ ಸಂತರಿಗೆ ಈ ಪುಷ್ಪ ನಮನ ಸಹಜ. ಮನುಷ್ಯ ಅಚಲ ನಿರ್ಧಾರಗಳನ್ನು ಕೈಗೊಂಡು, ಸತತ ಪ್ರಯತ್ನಗಳಿಂದ ಛಲ ಬಿಡದ ವಿಕ್ರಮನಂತೆ ಕಾರ್ಯ ತತ್ಪರನಾದಾಗ ಆತನ ಕನಸುಗಳು ಆಲೋಚನೆಗಳಾಗಿ ಅವು ಕ್ರಿಯಾಶೀಲ ವ್ಯಕ್ತಿಯನ್ನಾಗಿಸುತ್ತವೆ. ಶಾಂತ ಮಲ್ಲಿಕಾರ್ಜುನ ಸ್ವಾಮೀಜಿಯವರು ಇದಕ್ಕೆ ಹೊರತಾಗಿಲ್ಲ. ಅವರೂ ಸಹ ಹಠಯೋಗಿ ಎಂದು ಮಾಡ್ರಳ್ಳಿ ಗ್ರಾಮದಲ್ಲಿ ಜರುಗಿದ ಕಾರ್ಯಕ್ರಮದ ಫಲಪ್ರದತೆಯನ್ನು ಕುರಿತು ಶ್ಲಾಘಿಸಿದರು.

ಯಾವುದೇ ಕಾರ್ಯಕ್ರಮ ನೆರವೇರಿಸುವುದು ಕಷ್ಟವೇ ಸರಿ. ಆದರೆ ಆ ಕಾರ್ಯಕ್ರಮದ ಯಶಸ್ಸಿನ ಕೊಂಡಿಗಳಾದವರನ್ನು ಸ್ಮರಿಸುವುದು. ಅವರ ಸೇವೆಗೆ ಗೌರವ ನೀಡುವುದು ಅಷ್ಟೇ ಮೌಲ್ಯಯುತವಾದ ಕೆಲಸ. ಆ ಕಾರ್ಯವನ್ನು ಇಂದು ಮಾಡ್ರಳ್ಳಿ ಶ್ರೀಗಳು ಹರಗುರುಚರಮೂರ್ತಿಗಳ, ಗ್ರಾಮಸ್ಥರ ಹಾಗೂ ಭಕ್ತರ ಸಹಕಾರದಿಂದ ಸಾಧಿಸಿದ್ದಾರೆ ಎಂದರು.


ಕಾರ್ಯಕ್ರಮದಲ್ಲಿ ಮಾಡ್ರಳ್ಳಿ ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಅವರಿಗೆ ಗುರುವಂದನೆ ಸಲ್ಲಿಸಲಾಯಿತು.

ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ, ನಾಡಿನ ಶರಣ ಸಂತರ ಆಶೀರ್ವಾದ, ಎಲ್ಲಕ್ಕಿಂತ ಮಿಗಿಲಾಗಿ ನಾ ಕೇಳಿದ್ದನ್ನು ದಯಪಾಲಿಸುವ ನನ್ನ ಗುರು ವಿನ ಪ್ರೋತ್ಸಾಹ, ಗ್ರಾಮಸ್ಥರ ನೆರವು, ಶ್ರೀಮಠದ ಭಕ್ತವೃಂದದ ಸಂಪೂರ್ಣ ಸಹಕಾರದಿಂದ ನಾನು ಈ ಸಾಧನೆ ಮಾಡಲು ಸಾಧ್ಯವಾಯಿತು. ಸುತ್ತೂರು ಶ್ರೀಗಳು, ಸಿದ್ದಗಂಗೆ ಶ್ರೀಗಳು ಸೇರಿದಂತೆ ಹಲವು ಶ್ರೀಮಠಗಳ ಪೂಜ್ಯರ ಪ್ರೋತ್ಸಾಹ ನನ್ನ ಉತ್ಸಾಹವನ್ನು ಇಮ್ಮಡಿಗೊಳಿಸಿತು. ಈ ದಿನ ಕಾಯಕ ನಿಷ್ಠರು ತಪೋಜ್ಞಾನಿ, ಅಭಿನವ ಬಸವಣ್ಣ ಶಿವಕುಮಾರ ಸ್ವಾಮೀಜಿ ಯವರ 119ನೇ ಜಯಂತಿ ನಡೆಯುತ್ತಿದೆ. ಈ ಕಾರ್ಯಕ್ರಮದ ಸಾಧಕ ನಾನಲ್ಲ ತಾವೆಲ್ಲರೂ ಎಂದು ಕಾರ್ಯಕ್ರಮಕ್ಕೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸ್ಮರಿಸಿದ ಎಲ್ಲರನ್ನು ಸ್ಮರಿಸಿದರು.

ಈ ವೇಳೆ ಕುರುಬೂರು ಮಠದ ಶ್ರೀ ಶಾಂತಮಲ್ಲಿನಾಥ ಶಿವಾಚಾರ್ಯ ಸ್ವಾಮೀಜಿ, ತಾಲೂಕು ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಎಸ್‌ಎಂಆರ್ ಪ್ರಕಾಶ್, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಮಾಡ್ರಳ್ಳಿ ಶಿವಮೂರ್ತಿ, ಕೃಷಿಕ ಸಮಾಜದ ಅಧ್ಯಕ್ಷ ಬೆನಕನಹಳ್ಳಿ ಶಿವಮಲ್ಲಪ್ಪ, ಬಸವ ಬಳಗದ ಅಧ್ಯಕ್ಷ ಹಲವಾರ ಪರಮೇಶ್ ಪಟೇಲ್, ನಿವೃತ್ತ ಶಿಕ್ಷಕ ಪುಟ್ಟಬುದ್ಧಿ, ಶ್ರೀ ಶಿವಕುಮಾರ ಸೇವಾ ಟ್ರಸ್ಟ್ ಅಧ್ಯಕ್ಷ ಬಜ್ಜಿ ನಿಂಗಪ್ಪ, ಚೌಹಳ್ಳಿ ಮಹಾದೇವಪ್ಪ, ಸೀಹಳ್ಳಿ ಶಿವಮಲ್ಲಪ್ಪ, ಕೆಇಬಿ ಸಿದ್ಧಲಿಂಗ ಸ್ವಾಮಿ, ಹಿರಿಯೂರು ನವೀನ್, ಡಣಾಯ ಕನಪುರ ಮಲ್ಲಣ್ಣ, ಮಹಾಸಭಾ ನಿರ್ದೇಶಕರಾದ ತೊಂಟೇಶ್, ಪೂಜಿತ್ ಕುಮಾರ್, ಮಾಯಪ್ಪ ಗುರುಸ್ವಾಮಿ, ಸುರೇಶ್, ಹಿರಿಯೂರು ಪ್ರಕಾಶ್, ಆಡಿಟರ್ ಮಂಜುನಾಥ್, ಡೈರಿ ಅಧ್ಯಕ್ಷ ನಾಗೇಂದ್ರ ಸ್ವಾಮಿ, ಗ್ರಾಮದ ಹಿರಿಯರು, ಮುಖಂಡರು ಮತ್ತು ಶ್ರೀಮಠದ ಭಕ್ತರು ಹಾಜರಿದ್ದರು.

> ಜ್ಞಾನಾರ್ಜನೆಗೆ ಅಕ್ಷರ, ಹಸಿವಿಗೆ ಅನ್ನ, ಅರಸಿ ಬಂದವರಿಗೆ ವಸತಿ ನೀಡುವುದು ಸಾಮಾನ್ಯ ಸಂಗತಿಯಲ್ಲ. ಈ ಮಹಾತ್ಕಾರ್ಯವು ದೈವ ಪ್ರೇರಿತ ಹಾಗೂ ಅಸಾಮಾನ್ಯ ವ್ಯಕ್ತಿಗಳಿಂದ ಮಾತ್ರ ಸಾಧ್ಯ. ಆ ನಿಟ್ಟಿನಲ್ಲಿ ಶಿವಕುಮಾರ ಸ್ವಾಮೀಜಿ, ಡಾ.ರಾಜೇಂದ್ರ ಶ್ರೀಗಳು ಮತ್ತು ಗುರು ಚನ್ನಮಲ್ಲಿಕಾರ್ಜುನ ಸ್ವಾಮೀಜಿಗಳು ಮಾದರಿ.
> – ಹೆಳವರಹುಂಡಿ ಸಿದ್ದಪ್ಪ, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ.

ವಿಜೃಂಭಣೆಯ ಶ್ರೀಮುಳ್ಳೂರಮ್ಮ ಜಾತ್ರಾ ಮಹೋತ್ಸವ



ಸರಗೂರು, ಏ.7– ಪಟ್ಟಣದ 11ನೇ ವಾರ್ಡ್ ಬಿಡಗಲಿನಲ್ಲಿ ಶ್ರೀಮುಳ್ಳೂರಮ್ಮ ಜಾತ್ರಾ ಮಹೋತ್ಸವ ಹಾಗೂ ಕೊಂಡೋತ್ಸವ ಮಂಗಳವಾರ ವಿಜೃಂಭಣೆಯಿಂದ ನಡೆಯಿತು.

ಸೋಮವಾರದಿಂದಲೇ ದೇವಾಲಯದಲ್ಲಿ ಗಣಪತಿ ಹೋಮ, ಪುಣ್ಯಾಹ, ಕಳಸ ಪ್ರತಿಷ್ಠಾಪನೆ, ದುರ್ಗಾ ಹೋಮ, ಕುಂಕುಮಾರ್ಚನೆ ಸೇರಿದಂತೆ ಪೂಜಾ ಕೈಂಕರ್ಯ ನಡೆದವು. ಮಂಗಳವಾರ ಬೆಳಗ್ಗೆ ಕಪಿಲಾ ನದಿ ಬಳಿ ಶ್ರೀಮುಳ್ಳೂರಮ್ಮನವರ ರಥಕ್ಕೆ ಪೂಜೆ ಸಲ್ಲಿಸಿ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಮಂಗಳ ವಾದ್ಯ, ಸತ್ತಿಗೆ, ವೀರಗಾಸೆ ಸೇರಿದಂತೆ ಜಾನಪದ ಕಲಾ ತಂಡಗಳೊಂದಿಗೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ದೇವಾಲಯಕ್ಕೆ ಆಗಮಿಸಿ ದೇವಸ್ಥಾನದ ಎದುರು ಹಾಕಲಾಗಿದ್ದ ಕೊಂಡಕ್ಕೆ ವಿಶೇಷ ಪೂಜೆ ಸಲ್ಲಿಸಿ ಚಾಲನೆ ನೀಡಲಾಯಿತು. ಈ ವೇಳೆ ಹರಕೆ ಹೊತ್ತವರು, ಭಕ್ತರು ಕೊಂಡ ಹಾಯ್ದರು. ಎಲ್ಲಾ ಸಮುದಾಯದ ಮುಖಂಡರು ಮತ್ತು ಭಕ್ತರಿದ್ದರು. ಅಲ್ಲದೇ ಭಕ್ತರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಮಹಾದೇವಮ್ಮ ನಿಧನ



ಬನ್ನೂರು, ಏ.7– ಇಲ್ಲಿಗೆ ಸಮೀಪದ ಗೊರವನಹಳ್ಳಿ ಗ್ರಾಮದ ಶಿವಾರ್ಚಕ ಶಾಂತಪ್ಪ ಅವರ ಪತ್ನಿ ಮಹಾದೇವಮ್ಮ (86) ಮಂಗಳವಾರ ಮುಂಜಾನೆ ನಿಧನರಾದರು.

ಮೃತರು ಪುತ್ರ ಮೈಸೂರು ಜಿಲ್ಲಾ ಮುಜರಾಯಿ ಅರ್ಚಕರ ನೌಕರರ ಸಂಘದ ಜಿಲ್ಲಾಧ್ಯಕ್ಷ ಡಾ.ಬೋಳಪ್ಪ ಗುರೂಜಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಜಯಲಕ್ಷ್ಮಿ ವಿಲಾಸ ಅರಮನೆ ಸಂಬಂಧ ಖಾಸಗಿ ಸಂಸ್ಥೆಯೊಂದಿಗೆ ಯಾವುದೇ ಒಪ್ಪಂದವಾಗಿಲ್ಲ

- ಈ ಬಗ್ಗೆ ಅನೌಪಚಾರಿಕ ಮಾತುಕತೆ ಹೊರತು ಅಧಿಕೃತ ಚರ್ಚೆಯೂ ನಡೆದಿಲ್ಲ
- ಸಿಂಡಿಕೇಟ್ ಸದಸ್ಯ ಟಿ.ಆರ್.ಚಂದ್ರಶೇಖರ್ ಆರೋಪಕ್ಕೆ ಉಳಿದ ಏಳು ಸದಸ್ಯರ ಸ್ಪಷ್ಟನೆ



ಜಯಲಕ್ಷ್ಮೀ ವಿಲಾಸ ಅರಮನೆ

ಮೈಸೂರು, ಏ.7– ಮೈಸೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಜಯಲಕ್ಷ್ಮಿ ವಿಲಾಸ ಅರಮನೆಗೆ ಸಂಬಂಧಿಸಿದಂತೆ ಯಾವುದೇ ಒಪ್ಪಂದವಾಗಿಲ್ಲ. ಈ ಸಂಬಂಧ ಸಿಂಡಿಕೇಟ್ ಸಭೆಯಲ್ಲಿ ಅಧಿಕೃತ ಚರ್ಚೆಯೂ ನಡೆದಿಲ್ಲ ಎಂದು ಸಿಂಡಿಕೇಟ್‌ನ ಏಳು ಸದಸ್ಯರು ಸ್ಪಷ್ಟಪಡಿಸಿದ್ದಾರೆ.

ಮಾನಸಗಂಗೋತ್ರಿಯಲ್ಲಿನ ಜಯಲಕ್ಷ್ಮೀ ವಿಲಾಸ ಅರಮನೆಯನ್ನು ಉಚಿತವಾಗಿ ಲೀಸ್ ನೀಡುವ ಸಂಬಂಧ ಖಾಸಗಿ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂಬ ಸಿಂಡಿಕೇಟ್ ಸದಸ್ಯ ಟಿ.ಆರ್.ಚಂದ್ರಶೇಖರ್ ಆರೋಪಕ್ಕೆ ಉಳಿದ ಸದಸ್ಯರಾದ ಮಹದೇಶು, ಡಾ. ಹೆಚ್.ಎಸ್.ನಟರಾಜು, ಕೆ.ಗೋಕುಲ್ ಗೋವರ್ಧನ್, ಪ್ರೊ.ಎಸ್.ಎಂ. ಮುಸ್ತಫಾ, ಸಿ.ನಾಗರಾಜು, ಎಂ.ಶಂಕರ್ ಹಾಗೂ ಡಾ.ಜೆ. ಶಿಲ್ಪಾ ಮಂಗಳವಾರ ಸ್ಪಷ್ಟನೆ ನೀಡಿದ್ದಾರೆ.

ಪತ್ರಿಕಾ ಪ್ರಕಟಣೆಯಲ್ಲಿ ಅವರು, ಸಿಂಡಿಕೇಟ್ ಸಭೆಯಲ್ಲಿ ಕಾರ್ಯಸೂಚಿ, ಪೂರಕ ಕಾರ್ಯಸೂಚಿ ಹಾಗೂ ಟೇಬಲ್ ಅಜೆಂಡಾಗಳ ಮೂಲಕ ವಿಷಯಗಳು ಚರ್ಚೆಗೆ ಬರುತ್ತವೆ. ಆದರೆ ಜಯಲಕ್ಷ್ಮಿ ವಿಲಾಸ ಅರಮನೆಯ ಬಗ್ಗೆ 13–03–2026 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಯಾವ ವಿಷಯವೂ ಮಂಡನೆ ಆಗಿಲ್ಲ. ಆದರೆ ಇತರೆ ವಿಚಾರಗಳು ಅಂದರೆ ಅನೌಪಚಾರಿಕವಾಗಿ ಮಾತನಾಡುವ ಸಂದರ್ಭದಲ್ಲಿ ಕುಲಪತಿಗಳು, ಜಯಲಕ್ಷ್ಮೀ ವಿಲಾಸ ಅರಮನೆ ನಿರ್ವಹಣೆ ಸಂಬಂಧ ಒಂದು ಖಾಸಗಿ ಸಂಸ್ಥೆಯವರು ಒಡಂಬಡಿಕೆ ಮಾಡಿಕೊಳ್ಳಲು ನಮ್ಮನ್ನು ಸಂಪರ್ಕಿಸಿದ್ದು, ಈ ಬಗ್ಗೆ ಕಾನೂನು ಸಲಹೆ ಹಾಗೂ ಇತರೆ ಸಾಧ್ಯಾಸಾಧ್ಯತೆಗಳ ಬಗ್ಗೆ ಚರ್ಚಿಸಿದ ನಂತರ ವಿಷಯ ಮಂಡಿಸುವುದಾಗಿ ತಿಳಿಸಲಾಗಿದೆ ಎಂದರು.

ಇದಕ್ಕೆ ಸಿಂಡಿಕೇಟ್ ಸದಸ್ಯರಾದ ನಾವೆಲ್ಲರೂ ಪ್ರತಿಕ್ರಿಯಿಸಿ, ಮೈಸೂರು ವಿವಿಯ ಆಸ್ತಿ ರಕ್ಷಣೆ ಹಾಗೂ ಸಂರಕ್ಷಣೆಯ ಹಿತಾಸಕ್ತಿ ಇದ್ದರೆ ಮಾತ್ರ ಒಡಂಬಡಿಕೆ ಬಗ್ಗೆ ಚರ್ಚಿಸಿ, ಮುಂದುವರೆಯೋಣ. ಒಡಂಬಡಿಕೆ ವಿವಿಯ ಹಿತಾಸಕ್ತಿಗೆ ವಿರುದ್ಧವಾಗಿದ್ದರೆ ಯಾವುದೇ ಕಾರಣಕ್ಕೂ ಮುಂದುವರೆಯುವುದು ಬೇಡ ಎಂದು ಒಕ್ಕೊರಲಿನ ಅಭಿಪ್ರಾಯ ತಿಳಿಸಿದೆವು. ನಮ್ಮ ಈ ಅಭಿಪ್ರಾಯವನ್ನು ಕುಲಪತಿ ಹಾಗೂ ಕುಲಸಚಿವರು ಸಮ್ಮತಿಸಿದ ನಂತರ ಸಭೆ ಮುಕ್ತಾಯಗೊಂಡಿತು.

ದಿನಾಂಕ 27–03–2026ರಂದು ನಡೆದ ಸಿಂಡಿಕೇಟ್ ಸಭೆಯ ಕೊನೆಯಲ್ಲಿ ಅನೌಪಚಾರಿಕವಾಗಿ ಮಾತನಾಡುವ ವೇಳೆ ನಾವೆಲ್ಲರೂ ಜಯಲಕ್ಷ್ಮೀ ವಿಲಾಸ ಅರಮನೆಯ ಒಡಂಬಡಿಕೆ ವಿಚಾರ ಯಾವ ಹಂತದಲ್ಲಿದೆ ಎಂದು ಕುಲಪತಿಗಳನ್ನು ಕೇಳಿದಾಗ ಅವರು ಒಡಂಬಡಿಕೆ ಕರಡು ಪ್ರತಿ ಸಿದ್ಧವಾಗುತ್ತಿದೆ ಎಂದು ತಿಳಿಸಿದರು. ಈ ವೇಳೆ ಕುಲಸಚಿವರು, ಯಾವುದೇ ಒಡಂಬಡಿಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ವಿವಿಯ ಕಾಯ್ದೆ ಹಾಗೂ ಸರ್ಕಾರದ ನಿಯಮಾವಳಿಗಳನ್ನು ಗಮನದಲ್ಲಿಟ್ಟುಕೊಂಡು, ವಿವಿಯ ದೀರ್ಘಕಾಲದ ಹಿತಾಸಕ್ತಿ ದೃಷ್ಟಿಯಿಂದ ಒಪ್ಪಂದ ಮಾಡಿಕೊಳ್ಳುವುದು ಸೂಕ್ತ ಎಂದರು. ಅವರ ಮಾತಿಗೆ ಸಭೆಯಲ್ಲಿದ್ದ 7 ಸಿಂಡಿಕೇಟ್ ಸದಸ್ಯರು ಸಹಮತ ವ್ಯಕ್ತಪಡಿಸಿದ್ದರಿಂದ ಕುಲಪತಿಗಳು ಈ ಬಗ್ಗೆ ಮುಂದಿನ ಸಭೆಯಲ್ಲಿ ಚರ್ಚಿಸೋಣ ಎಂದು ತಿಳಿಸಿದರು.

ನಂತರದ ಬೆಳವಣಿಗೆಯಲ್ಲಿ ಜಯಲಕ್ಷ್ಮಿ ವಿಲಾಸ ಅರಮನೆಯನ್ನು ಖಾಸಗಿ ಸಂಸ್ಥೆಗೆ ಒಡಂಬಡಿಕೆ ಮಾಡಿಕೊಡುತ್ತಿರುವ ಬಗ್ಗೆ ಮಾಧ್ಯಮದಲ್ಲಿ ಪ್ರಕಟಗೊಂಡ ವರದಿ ನೋಡಿ ನಮಗೆ ಆಶ್ಚರ್ಯ ಉಂಟಾಯಿತು. ಈ ಪ್ರಮುಖ ವಿಷಯದ ಬಗ್ಗೆ ಚರ್ಚಿಸುವ ಸಮಯದಲ್ಲಿ ಸಭೆಯಲ್ಲಿ ಹಾಜರಿಲ್ಲದ ಸಿಂಡಿಕೇಟ್ ಸದಸ್ಯರೊಬ್ಬರು, ಮಾಧ್ಯಮಗಳಲ್ಲಿ ಇಲ್ಲಸಲ್ಲದ ಆರೋಪ ಮಾಡಿ ಸಮಾಜವನ್ನು ದಾರಿ ತಪ್ಪಿಸುವ ಕೆಲಸ ಮಾಡುತ್ತಿರುವುದು ಖಂಡನೀಯ.

ಸಿಂಡಿಕೇಟ್ ಸದಸ್ಯರಾಗಿ ಈವರೆಗಿನ ಎಲ್ಲಾ ಸಿಂಡಿಕೇಟ್ ಸಭೆಗಳಲ್ಲಿ ವಿವಿಯ ಹಿತಾಸಕ್ತಿ ಹಾಗೂ ಆಸ್ತಿಗಳ ಸಂರಕ್ಷಣೆಯ ಬಗ್ಗೆ ಸಾಕಷ್ಟು ಚರ್ಚೆಗಳನ್ನು ಮಾಡಿದ್ದೇವೆ. ಅದಕ್ಕೆ ವಿವಿಯ ಅಧಿಕೃತ ವೆಬ್‌ಪೇಜ್‌ನಲ್ಲಿರುವ ನಡಾವಳಿಗಳೇ ಸಾಕ್ಷಿ. ಆದರೆ, ಸತ್ಯಕ್ಕೆ ದೂರವಾದ ಹೇಳಿಕೆಗಳ ಮೂಲಕ ಮೈಸೂರು ವಿವಿ ವಿದ್ಯಾರ್ಥಿಗಳು, ಬೋಧಕ–ಬೋಧಕೇತರ ಸಿಬ್ಬಂದಿ ಹಾಗೂ ಪ್ರಜ್ಞಾವಂತ ನಾಗರಿಕರಲ್ಲಿ ಆತಂಕ ಉಂಟು ಮಾಡುವುದು, ಜಯಲಕ್ಷ್ಮಿ ವಿಲಾಸ ಅರಮನೆಗೆ ಸಂಬಂಧಿಸಿದಂತೆ ಒಡಂಬಡಿಕೆ ಆಗಿಯೇ ಬಿಟ್ಟಿದೆ ಎಂಬಂತೆ ಬಿಂಬಿಸುವುದನ್ನು ನಿಲ್ಲಿಸಬೇಕು ಎಂದು ಸಿಂಡಿಕೇಟ್ ಸದಸ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿಂಡಿಕೇಟ್ ಸದಸ್ಯ ಮಿತ್ರರ ಪ್ರತಿಕ್ರಿಯೆ ವಿವಿಯ ಆಡಳಿತಕ್ಕಿಡಿದ ಕನ್ನಡಿ



ಮೈಸೂರು: ಜಯಲಕ್ಷ್ಮಿ ವಿಲಾಸ ಅರಮನೆ ಸಂಬಂಧ ಮೈಸೂರು ವಿವಿ ಹಾಗೂ ಖಾಸಗಿ ಸಂಸ್ಥೆ ನಡುವಿನ ಒಪ್ಪಂದದ ಬಗ್ಗೆ ನಾನು ಧ್ವನಿ ಎತ್ತಿರುವುದಕ್ಕೆ ಸಿಂಡಿಕೇಟ್‌ನ ಉಳಿದೆಲ್ಲಾ ಸದಸ್ಯರು ನೀಡಿರುವ ಪ್ರತಿಕ್ರಿಯೆ, ವಿವಿ ಆಡಳಿತ ವ್ಯವಸ್ಥೆಯಲ್ಲಿನ ಧೋರಣೆಗೆ ಕನ್ನಡಿ ಹಿಡಿದಂತಿದೆ ಎಂದು ಡಾ.ಟಿ.ಆರ್.ಚಂದ್ರಶೇಖರ್ ಹೇಳಿದ್ದಾರೆ.

ಈ ವಿಚಾರವಾಗಿ ನಾನು ಮೌನವಾಗಿದ್ದಿದ್ದರೆ ಇಷ್ಟರಲ್ಲಿ ಐತಿಹಾಸಿಕ ಜಯಲಕ್ಷ್ಮಿ ವಿಲಾಸ ಅರಮನೆ ಖಾಸಗಿಯವರ ಕೈಸೇರುತ್ತಿತ್ತು. ಒಪ್ಪಂದದ ಬಳಿಕ ತಾವೇ ನ್ಯಾಯಾಲಯದ ಮೊರೆಹೋಗಿ ಇದಕ್ಕೆ ಏಕಮಾತ್ರ ಸದಸ್ಯರ ವಿರೋಧವಿದೆ ಎಂದು ತಿಳಿಸಿ, ಆಸ್ತಿಯನ್ನು ಭದ್ರ ಮಾಡಿಕೊಳ್ಳುವ ಸಾಧ್ಯತೆ ಇತ್ತು ಎಂದು ಆರೋಪಿಸಿದ್ದಾರೆ.

ಜಯಲಕ್ಷ್ಮಿ ವಿಲಾಸ ಅರಮನೆಯನ್ನು 40 ವರ್ಷಗಳ ದೀರ್ಘಕಾಲದವರೆಗೆ ಖಾಸಗಿ ಸಂಸ್ಥೆಗೆ ಉಚಿತವಾಗಿ ಲೀಸ್‌ಗೆ ನೀಡುವ ಗಂಭೀರ ವಿಚಾರದ ಬಗ್ಗೆ ಪತ್ರಿಕೆಗಳ ಮೂಲಕ ರಾಜ್ಯದ ಗಮನಕ್ಕೆ ತರದಿದ್ದರೆ, ರಾಷ್ಟ್ರಕವಿ ಕುವೆಂಪು ಅವರ ದೂರದೃಷ್ಟಿ ಮತ್ತು ಪರಿಶ್ರಮದಿಂದ ವಿಶ್ವವಿದ್ಯಾನಿಲಯಕ್ಕೆ ಲಭಿಸಿರುವ ಈ ಅಮೂಲ್ಯ ಕೊಡುಗೆಯನ್ನು ಕಳೆದುಕೊಳ್ಳಬೇಕಿತ್ತು. ಆದರೆ ಈ ವಿಚಾರದಲ್ಲಿ ಉಳಿದ ಸದಸ್ಯ ಮಿತ್ರರು ತಡವಾಗಿ ನನ್ನ ಕಾಳಜಿಯನ್ನು ಖಂಡಿಸಿದ್ದಾರೆ. ಅವರ ಪ್ರಕಟಣೆ ಓದಿದ ನಂತರ, ಇದು ವಿವಿ ಆಡಳಿತ ವ್ಯವಸ್ಥೆಗೆ ಕೈಗನ್ನಡಿ ಹಿಡಿದಂತಿದೆ ಅನ್ನಿಸಿತು ಎಂದಿದ್ದಾರೆ.

ಒಬ್ಬ ಜವಾಬ್ದಾರಿಯುತ ಸಿಂಡಿಕೇಟ್ ಸದಸ್ಯನಾಗಿ ನನ್ನ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸಿದ್ದೇನೆ ಎಂಬ ಆತ್ಮಸಂತೃಪ್ತಿ ನನಗಿದೆ. ಸತ್ಯಾಸತ್ಯತೆ ಬೆಳಕಿಗೆ ಬರುವುದಕ್ಕೆ ಇದು ಸುವರ್ಣಾವಕಾಶ. ಆದ್ದರಿಂದ 13.03.2026 ಮತ್ತು 27.03.2026 ರಂದು ನಡೆದ ಸಿಂಡಿಕೇಟ್ ಸಭೆಗಳ ಸಂಪೂರ್ಣ ವೀಡಿಯೊ ಚಿತ್ರೀಕರಣವನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡಲಿ. ನೂರಾರು ಕೋಟಿ ಭ್ರಷ್ಟಾಚಾರ ಮತ್ತು ಅವ್ಯವಹಾರದ ಬಗ್ಗೆ ದಾಖಲೆ ಸಮೇತ ವಿವರಿಸುವ ಜ್ಞಾನ ಮತ್ತು ಶಕ್ತಿ ನನಗಿದೆ. ಅಗತ್ಯವೆನಿಸಿದರೆ ದಾಖಲೆ ಸಹಿತ ಸಾರ್ವಜನಿಕವಾಗಿ ಮಾತನಾಡಲು ಸಿದ್ಧನಿದ್ದೇನೆ ಎಂದು ತಿಳಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬೈಕರ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲವ್ ಮಾಕ್ಟೇಲ್–3 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಗಾರ್ಡಿಯನ್ಸ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಧುರಂದರ್–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಧುರಂದರ್–2 (ಕ)	3 ಪ್ರದರ್ಶನಗಳು
ರಾಜಕಮಲ್	
ಲೀಡರ್ (ತ) + ಕಾಳಿದಾಸ–2 (ತ)	4 ಪ್ರದರ್ಶನಗಳು
ಸಂಗಂ	
ಧುರಂದರ್–2 (ಕ)	3 ಪ್ರದರ್ಶನಗಳು
ಲಿಡೋ	
ಧುರಂದರ್–2 (ಕ)	3 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಫಸ್ಟ್ ನೈಟ್ ವಿತ್ ದೆವ್ವ (ಕ)	4 ಪ್ರದರ್ಶನಗಳು

ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣ ಕಾಮಗಾರಿ ವಿರುದ್ಧ ರೈತರ ಪ್ರತಿಭಟನೆ



ಮೈಸೂರು ತಾಲೂಕಿನ ಗುಡುಮಾದನಹಳ್ಳಿಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಏ.7(ಎಂಕೆ)– ತಾಲೂಕಿನ ಗುಡುಮಾದನಹಳ್ಳಿಯ ಸರ್ವೇ ನಂ.60, 68, 8ರಲ್ಲಿ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣ ಹಿನ್ನಲೆ ಮಂಗಳವಾರ ಜೆಸಿಬಿ ಮೂಲಕ ಆರಂಭವಾದ ಕಾಮಗಾರಿಯನ್ನು ತಡೆದು ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಜೆಸಿಬಿ ಮೂಲಕ ಭೂಮಿಯನ್ನು ಸಮತಟ್ಟು ಮಾಡುತ್ತಿದ್ದ ವೇಳೆ ಜಮಾವಣೆಗೊಂಡ ರೈತರು, ಸರ್ಕಾರ ಮತ್ತು ತಾಲೂಕು ಆಡಳಿತದ ವಿರುದ್ಧ ದಿಕ್ಕಾರ ಕೂಗಿ, ಆಕ್ರೋಶ ಹೊರಹಾಕಿದರು. ನೀರು ತುಂಬಿರುವ ಈ ಕೃಷಿ ಭೂಮಿಯು ಆಸ್ಪತ್ರೆ ನಿರ್ಮಾಣಕ್ಕೆ ಯೋಗ್ಯವಲ್ಲ. ಹಾಗಾಗಿ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣವನ್ನು ಬೇರೆ ಸ್ಥಳದಲ್ಲಿ ಮಾಡುವಂತೆ ಆಗ್ರಹಿಸಿದರು.

ನಿಮ್ಹಾನ್ಸ್ ಆಸ್ಪತ್ರೆಗೆ ಗುರ್ತಿಸಿರುವ ಭೂಮಿಯಲ್ಲಿ ನೀರು ಹರಿಯುತ್ತಿದೆ. ಎಲ್ಲೇ ಅಗೆದರೂ ನೀರಿನಿಂದ ಕೂಡಿರುವ ಜಾಗದಲ್ಲಿ ಆಸ್ಪತ್ರೆ ನಿರ್ಮಾಣ ಮಾಡುವುದು ಸರಿಯಲ್ಲ. ಆದ್ದರಿಂದ ಜಿಲ್ಲಾಡಳಿತ ಮತ್ತು ಸರ್ಕಾರ ಉಳುಮೆ ಮಾಡುತ್ತಿರುವ ರೈತರೊಂದಿಗೆ ಸಭೆ ನಡೆಸಿ, ಅವರ ಬೇಡಿಕೆಗಳನ್ನು ಆಲಿಸಿದ ನಂತರವೇ ನಿರ್ಧಾರ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಮರಂಕಯ್ಯ, ರಾಜ್ಯ ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ನೇತ್ರಾವತಿ, ತಾಲೂಕು ಅಧ್ಯಕ್ಷ ಆನಂದೂರು ಪ್ರಭಾಕರ್, ಪ್ರಧಾನ ಕಾರ್ಯದರ್ಶಿ ಮಂಡಕಳ್ಳಿ ಮಹೇಶ್ ಮತ್ತಿತರರಿದ್ದರು.

ನಿವೃತ್ತ ಅಕೌಂಟೆಂಟ್ ಬಳಿ 8 ಕೋಟಿ ಮೌಲ್ಯದ ಆಸ್ತಿ ಪತ್ತೆ

ಚಿತ್ರದುರ್ಗ, ಏ.7– ನಿರ್ಮಿತಿ ಕೇಂದ್ರದಲ್ಲಿ ಅಕೌಂಟೆಂಟ್ ಆಗಿ ಕಾರ್ಯ ನಿರ್ವಹಿಸಿ ಸ್ವಯಂ ನಿವೃತ್ತಿ ಪಡೆದಿರುವ ಸುಶೀಲಮ್ಮ ಅವರ ಮನೆಗಳ ಮೇಲೆ ಲೋಕಾಯುಕ್ತ ಪೊಲೀಸರು ಮಂಗಳವಾರ ದಾಳಿ ನಡೆಸಿ ಪರಿಶೀಲನೆ ನಡೆಸಿದರು. ಈ ವೇಳೆ ಪೊಲೀಸರು 7.90 ಕೋಟಿ ಮೌಲ್ಯದ ಆಸ್ತಿ ಪತ್ತೆ ಹಚ್ಚಿದ್ದಾರೆ.

ನಗರದ ಮೆದೇಹಳ್ಳಿಯಲ್ಲಿ ಮನೆ, ಹಿರಿಯೂರು ತಾಲ್ಲೂಕು ಯಾದಲಘಟ್ಟ ಗ್ರಾಮದ ತೋಟದ ಮನೆ ಮೇಲೆ ದಾಳಿ ನಡೆದಿದೆ. ಪರಿಶೀಲನೆ ವೇಳೆ 6 ತೋಟದ ಮನೆ, 11 ನಿವೇಶನಗಳಿರುವುದು ಪತ್ತೆಯಾಗಿದೆ. ಅವರು 29 ಎಕರೆ ಕೃಷಿ ಭೂಮಿ ಹೊಂದಿದ್ದಾರೆ. 1 ಕೋಟಿ ಮೌಲ್ಯದ ವಾಣಿಜ್ಯ ಮಳಿಗೆಯೂ ಇದೆ. 43 ಲಕ್ಷದ ವಾಹನಗಳು ಪತ್ತೆಯಾಗಿವೆ. ಆದಾಯ ಮೀರಿ ಶೇ 481ರಷ್ಟು ಆಸ್ತಿ ಸಂಪಾದಿಸಿರುವುದು ಪತ್ತೆಯಾಗಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದರು.

ಸುಶೀಲಮ್ಮ ಅವರು ಸೇವೆಯಲ್ಲಿದ್ದಾಗಲೇ ಅವರ ಮೇಲೆ ಭ್ರಷ್ಟಾಚಾರದ ಆರೋಪ ಇತ್ತು. ನಿರ್ಮಿತಿ ಕೇಂದ್ರದ ಸಿಬ್ಬಂದಿ ಸಾರ್ವಜನಿಕ ಸಿಬ್ಬಂದಿಯಲ್ಲ ಎಂಬ ಕಾರಣದಿಂದ ಅವರು ದಾಳಿಯಿಂದ ತಪ್ಪಿಸಿಕೊಂಡಿದ್ದರು. ಆದರೆ ಈಚೆಗೆ ಅವರೂ ಸಾರ್ವಜನಿಕ ಸಿಬ್ಬಂದಿ ಎಂದು ಹೈಕೋರ್ಟ್ ಆದೇಶ ಬಂದಿರುವ ಕಾರಣ ದಾಳಿ ನಡೆಸಲಾಗಿದೆ. ಇದನ್ನು ಅರಿತಿದ್ದ ಸುಶೀಲಮ್ಮ ಮೊದಲೇ ಸ್ವಯಂ ನಿವೃತ್ತಿ ಪಡೆದಿದ್ದರು ಎಂದು ಲೋಕಾಯುಕ್ತ ಎಸ್ಪಿ ವಾಸುದೇವರಾಮ್ ತಿಳಿಸಿದರು.

ಆಸ್ತಿಗಳ ದಾಖಲಾತಿಗಳನ್ನು ಸ್ನೇಹಿತರು ಸೇರಿದಂತೆ ಹಲವರಿಗೆ ನೀಡಿ ಬಚ್ಚಿಟ್ಟಿದ್ದರು. ಸ್ನೇಹಿತರ ಮಾಹಿತಿ ಪಡೆದು ನೋಟಿಸ್ ನೀಡಿ ದಾಖಲಾತಿ ಪಡೆಯಲಾಗಿದೆ. ಇನ್ನೂ ಹಲವು ದಾಖಲಾತಿಗಳನ್ನು ಸಂಗ್ರಹಿಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು. ಲೋಕಾಯುಕ್ತ ಡಿವೈಎಸ್‌ಪಿ ಮೃತ್ಯುಂಜಯಪ್ಪ ಸೇರಿ 30 ಪೊಲೀಸ್ ಸಿಬ್ಬಂದಿ ದಾಳಿಯಲ್ಲಿ ಭಾಗವಹಿಸಿದ್ದರು.

ಮರಕ್ಕೆ ಹಬ್ಬಿದ ಬೆಂಕಿ

ಮೈಸೂರು,ಏ.7(ಪಿಎಂ)– ಚಾಮುಂಡಿ ವಿಹಾರ ಕ್ರೀಡಾಂಗಣ ಹಿಂಭಾಗದ ಖಾಲಿ ಜಾಗದಲ್ಲಿದ್ದ ಮರವೊಂದಕ್ಕೆ ಆಕಸ್ಮಿಕ ಬೆಂಕಿ ತಗುಲಿದ ಘಟನೆ ಮಂಗಳವಾರ ರಾತ್ರಿ ನಡೆದಿದೆ. ಮರದ ಬುಡದಲ್ಲಿದ್ದ ತರಗೆಲೆಗಳಿಗೆ ಬೆಂಕಿ ಬಿದ್ದ ಹಿನ್ನೆಲೆಯಲ್ಲಿ ಮರಕ್ಕೆ ಬೆಂಕಿ ಹಬ್ಬಿರುವ ಸಾಧ್ಯತೆ ಇದ್ದು, ಕೂಡಲೇ ಸ್ಥಳಕ್ಕೆ ಧಾವಿಸಿದ ಬನ್ನಿಮಂಟಪ ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ.

ಜೂಜು ಅಡ್ಡೆ ಮೇಲೆ ದಾಳಿ ; 41,180 ನಗದು ವಶಕ್ಕೆ


ಮೈಸೂರು,ಏ.7(ಪಿಎಂ)– ನಂಜನಗೂಡು ತಾಲೂಕು ಕವಲಂದೆ ಪೊಲೀಸ್ ಠಾಣಾ ವ್ಯಾಪ್ತಿಯ ತರದೆಲೆ ಗ್ರಾಮದ ಹೊರಭಾಗದ ಸಾರ್ವಜನಿಕ ಸ್ಥಳದಲ್ಲಿ ಜೂಜು ಅಡ್ಡೆ ಮೇಲೆ ಠಾಣಾ ಅಧಿಕಾರಿ ಮತ್ತು ಸಿಬ್ಬಂದಿ ಸೋಮವಾರ ದಾಳಿ ನಡೆಸಿ ಪಣಕಿಟ್ಟಿದ್ದ ಒಟ್ಟು 41,180 ರೂ. ನಗದನ್ನು ವಶಕ್ಕೆ ಪಡೆದು, 10 ಮಂದಿ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಅಪರಿಚಿತ ಪುರುಷನ ಶವ ಪತ್ತೆ

ಮೈಸೂರು,ಏ.7(ಪಿಎಂ)– ಮೈಸೂರು ರೈಲ್ವೆ ನಿಲ್ದಾಣದ ಪ್ಲಾಟ್‌ಫಾರಂ ನಂಬರ್ 1ರಲ್ಲಿನ ಸಬ್‌ವೇ ಸಮೀಪದ ರಿಟೈರಿಂಗ್ ರೂಂ ಬಳಿ ಸುಮಾರು 30ರಿಂದ 35 ವರ್ಷ ವಯೋಮಾನದ ಅಪರಿಚಿತ ಪುರುಷ ಮೃತಪಟ್ಟಿರುವುದಾಗಿ ರೈಲ್ವೆ ಪೊಲೀಸ್ ಠಾಣೆ ಪ್ರಕಟಣೆ ತಿಳಿಸಿದೆ. ಸದರಿ ವ್ಯಕ್ತಿಯು ಸ್ವಾಭಾವಿಕವಾಗಿ ಮೃತಪಟ್ಟಿದ್ದು, ಸ್ಥಳದಲ್ಲಿ ವಾರಸುದಾರರು ಪತ್ತೆಯಾಗಿಲ್ಲ. ಮೃತನ ವಾರಸುದಾರರ ಬಗ್ಗೆ ಮಾಹಿತಿ ದೊರೆತಲ್ಲಿ ಮೈಸೂರು ರೈಲ್ವೆ ಪೊಲೀಸ್ ಠಾಣೆಯನ್ನು ಸಂಪರ್ಕಿಸಲು (0821–2866350/94808 02122) ಪ್ರಕಟಣೆಯಲ್ಲಿ ಕೋರಲಾಗಿದೆ.

ಲೋಕೋಪಯೋಗಿ ಇಲಾಖೆಯ ಅಸಿಸ್ಟೆಂಟ್ ಇಂಜಿನಿಯರ್ ಮನೆ, ಕಚೇರಿ ಮೇಲೆ ಲೋಕಾಯುಕ್ತರ ದಾಳಿ

ಕೋಟ್ಯಾಂತರ ಮೌಲ್ಯದ ನಿವೇಶನ, ಚಿನ್ನಾಭರಣ ಪತ್ತೆ





ಮೈಸೂರು ಲೋಕೋಪಯೋಗಿ ಇಲಾಖೆಯ ಅಸಿಸ್ಟೆಂಟ್ ಇಂಜಿನಿಯರ್ ರೇವಣ್‌ಕುಮಾರ್ ಅವರ ಮಂಡ್ಯದ ಮನೆ (ಎಡಚಿತ್ರ) ಮೇಲೆ ದಾಳಿ ವೇಳೆ ಪತ್ತೆಯಾದ ನಗದು,ಚಿನ್ನಾಭರಣವನ್ನು (ಬಲಚಿತ್ರ) ಕಾಣಬಹುದು.

ಮೈಸೂರು, ಏ.7(ಬಿಎಲ್‌ಯು)– ಮೈಸೂರಿನ ಲೋಕೋಪಯೋಗಿ ಇಲಾಖೆಯ ಅಸಿಸ್ಟೆಂಟ್ ಇಂಜಿನಿಯರ್ ಜಿ.ಕೆ. ರೇವಣ್ ಕುಮಾರ್ ಅವರ ಮನೆ ಹಾಗೂ ಕಚೇರಿ ಮೇಲೆ ಲೋಕಾಯುಕ್ತ ಪೊಲೀಸರು ಇಂದು ಏಕ ಕಾಲಕ್ಕೆ ದಾಳಿ ಮಾಡಿದ್ದಾರೆ.

ರೇವಣ್ ಕುಮಾರ್ ಅವರು ಕರ್ತವ್ಯ ನಿರ್ವಹಿಸುತ್ತಿದ್ದ ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಲೋಕೋಪಯೋಗಿ ಇಲಾಖೆಯ ಕಚೇರಿ ಹಾಗೂ ಮಂಡ್ಯ ಮನೆ ಮೇಲೆ ಇಂದು ಬೆಳಿಗ್ಗೆ ದಿಢೀರ್ ದಾಳಿ ನಡೆಸಿ ಆಸ್ತಿಗಳಿಗೆ ಸಂಬಂಧಿಸಿದಂತೆ ಪರಿಶೀಲನೆ ನಡೆಸಿದ್ದಾರೆ.

ಮೈಸೂರು ಲೋಕಾಯುಕ್ತ ಡಿವೈಎಸ್ಪಿ ವೆಂಕಟೇಶ್ ನೇತೃತ್ವದಲ್ಲಿ ನಡೆದ ದಾಳಿ ಸಂಜೆವರೆಗೆ ನಿರಂತರವಾಗಿ ನಡೆಯಿತು. ಈ ವೇಳೆ ರೇವಣ್ ಕುಮಾರ್ ಅವರಿಗೆ ಸೇರಿದ 75,45,000 ಮೌಲ್ಯದ ಆಸ್ತಿಗಳನ್ನು ಪತ್ತೆ ಹಚ್ಚಲಾಯಿತು.

ರೇವಣ್ ಕುಮಾರ್, 40,73,000 ಮೌಲ್ಯದ ನಾಲ್ಕು ನಿವೇಶನ, 30,00,000 ಮೌಲ್ಯದ ಒಂದು ಮನೆ, 4,72,000 ಮೌಲ್ಯದ ಎರಡು ಕೃಷಿ ಭೂಮಿ, 35,044 ನಗದು, 2,96,05,185 ಮೌಲ್ಯದ ಚಿನ್ನಾಭರಣ, 42,20,000 ಮೌಲ್ಯದ ವಾಹನಗಳು ಸೇರಿದಂತೆ 75,45,000 ಮೌಲ್ಯದ ಆಸ್ತಿಯನ್ನು ಹೊಂದಿದ್ದಾರೆ.

ರೇವಣ್ ಕುಮಾರ್ ಅವರ ಮನೆ, ಕಚೇರಿಯಲ್ಲಿ ಪತ್ತೆಯಾಗಿರುವ ಆಸ್ತಿ ಹಾಗೂ ಆಸ್ತಿಗೆ ಸಂಬಂಧಿಸಿದ ದಾಖಲಾತಿಗಳನ್ನು ಕಲೆ ಹಾಕಿರುವ ಲೋಕಾಯುಕ್ತ ಪೊಲೀಸರು, ಅದರ ಮೂಲದ ಬಗ್ಗೆ ಪರಿಶೀಲನೆ ನಡೆಸುತ್ತಿದ್ದಾರೆ.

ಯುವ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಕ್ಕೆ ಅರ್ಜಿ ಆಹ್ವಾನ

ಮೈಸೂರು, ಏ.7– ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ (ಎಸ್‌ವಿಐಎಂ)ನ ಅಂಗ ಸಂಸ್ಥೆಯಾದ ವಿವೇಕಾನಂದ ಇನ್‌ಸ್ಟಿಟ್ಯೂಟ್ ಫಾರ್ ಲೀಡರ್‌ಶಿಪ್ ಡೆವಲಪ್‌ಮೆಂಟ್(ವಿ–ಲೀಡ್) ಸಂಸ್ಥೆ, ಇನ್ಫೋಸಿಸ್ ಫೌಂಡೇಷನ್ ಸಹಯೋಗದೊಂದಿಗೆ ಒಂದು ತಿಂಗಳ ವಸತಿ ಆಧಾರಿತ ಯುವ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಯುವ ಸಮೂಹಕ್ಕೆ ಉದ್ಯೋಗಾರ್ಹತೆ ಹೆಚ್ಚಿಸುವ ಉದ್ದೇಶದಿಂದ ಸಂಯೋಜಿಸಿರುವ ಈ ತರಬೇತಿ ಏ.16 ರಂದು ಪ್ರಾರಂಭ ವಾಗಲಿದೆ. 18 ರಿಂದ 29 ವರ್ಷ ವಯಸ್ಸಿನ, ಕನಿಷ್ಠ ಪಿಯುಸಿ ಉತ್ತೀರ್ಣರಾದ ಯುವಕರು ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 97390 17311ಗೆ ಸಂಪರ್ಕಿಸಬಹುದಾಗಿದೆ ಎಂದು ವಿ–ಲೀಡ್‌ನ ಡಾ.ರೇಖಾ ಷಣ್ಮುಖ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಐಎಡಿಬಿ ಜಲಸಂಗ್ರಹಗಾರ ಬಳಸಿಕೊಳ್ಳಲು ಹೂಟಗಳ್ಳಿ ನಗರಸಭೆಗೆ ಡಿಸಿ ಅನುಮತಿ

ಕುಡಿಯುವ ನೀರು ಪೂರೈಕೆ ವ್ಯತ್ಯಯವಾಗದಿರಲೆಂದು ಕಾಮಗಾರಿಗೆ ಅನುವು

ಮೈಸೂರು, ಏ.7– ಮೈಸೂರಿನ ಹೂಟಗಳ್ಳಿ ನಗರಸಭೆಯು ಬೆಳವಾಡಿ ಕೈಗಾರಿಕಾ ಪ್ರದೇಶದಲ್ಲಿನ ವೆನ್ಲಾನ್ ಕೈಗಾರಿಕೆ ಬಳಿ ಇರುವ ಮೇಲ್ಮಟ್ಟದ ಜಲಸಂಗ್ರಹಗಾರವನ್ನು ತಾತ್ಕಾಲಿಕವಾಗಿ ಬಳಸಿಕೊಳ್ಳಲು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಮಂಗಳವಾರ ಅನುಮತಿ ನೀಡಿದ್ದಾರೆ.



ಲಕ್ಷ್ಮೀಕಾಂತ ರೆಡ್ಡಿ

ಹೂಟಗಳ್ಳಿ ನಗರಸಭೆ ಪೌರಾಯುಕ್ತರು ಪ್ರಸ್ತಾವನೆ ಸಲ್ಲಿಸಿದ್ದರ ಮೇರೆಗೆ ಪರಿಶೀಲನೆ ನಡೆಸಿ, ಕುಡಿಯುವ ನೀರಿನ ಪರಿಸ್ಥಿತಿ ಸುಧಾರಿಸುವವರೆಗೆ ಜಲಸಂಗ್ರಹಗಾರವನ್ನು ಬಳಸಿಕೊಳ್ಳಲು ಅನುಮತಿಸಿರುವ ಜಿಲ್ಲಾಧಿಕಾರಿಗಳು, ಪ್ರಸ್ತಾವಿತ ಕುಡಿಯುವ ನೀರು ಕಾಮಗಾರಿಗೆ ಅನುವು ಮಾಡಿಕೊಡುವಂತೆ ಕರ್ನಾಟಕ ರಾಜ್ಯ ಕೈಗಾರಿಕೋದ್ಯಮ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ)ಗೆ ನಿರ್ದೇಶಿಸಿದ್ದಾರೆ.

ಅಮೃತ್ 2.0 ಯೋಜನೆಯಡಿ ಹೂಟಗಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ಕುಡಿಯುವ ನೀರು ವ್ಯವಸ್ಥೆ ಕಲ್ಪಿಸುವ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿದ್ದು, ಸದರಿ ಯೋಜನೆಯಡಿ ವೆನ್ಲಾನ್ ಕೈಗಾರಿಕಾ ಬಳಿಯ 2.5 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಗಾರವನ್ನು ಬಳಸಿಕೊಳ್ಳಲು ಅನುಮತಿಸಬೇಕು. ಕೆಐಎಡಿಬಿಗೆ ಸೇರಿದ ಸದರಿ ಜಲಸಂಗ್ರಹಗಾರವನ್ನು ಹಲವು ವರ್ಷಗಳಿಂದ ಬಳಸುತ್ತಿಲ್ಲ. ಹಾಗಾಗಿ ಆ ಜಲಸಂಗ್ರಹಗಾರದಿಂದ ಹೂಟಗಳ್ಳಿ ಸಿಗ್ನಲ್ ಬಳಿಯ ಕಾವೇರಿ ಬಡಾವಣೆಗೆ ನೀರು ಸರಬರಾಜು ವ್ಯವಸ್ಥೆ ಕಲ್ಪಿಸಲು ವಿನ್ಯಾಸದನ್ವಯ ಯೋಜಿಸಿರುವುದಾಗಿ ಹೂಟಗಳ್ಳಿ ನಗರಸಭೆ ಪೌರಾಯುಕ್ತರು ಸಲ್ಲಿಸಿದ್ದ ಪ್ರಸ್ತಾವನೆಯಲ್ಲಿ ತಿಳಿಸಿದ್ದರು.

ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡರ ಅಧ್ಯಕ್ಷತೆಯಲ್ಲಿ ಕಳೆದ ಫೆ.25 ರಂದು ನಡೆದ ಅಭಿವೃದ್ಧಿ ಪರಿಶೀಲನಾ ಸಭೆಯಲ್ಲಿ ಈ ವಿಷಯವನ್ನು ಮಂಡಿಸಿ, ಬೇಸಿಗೆ ಹಿನ್ನಲೆಯಲ್ಲಿ ಕುಡಿಯುವ ನೀರಿನ ಪೂರೈಕೆಗಾಗಿ ಜಲಸಂಗ್ರಹಗಾರವನ್ನು ನಗರಸಭೆಗೆ ವಹಿಸುವಂತೆ ಕೆಐಎಡಿಬಿ ಅಭಿವೃದ್ಧಿ ಅಧಿಕಾರಿಗಳಿಗೆ ತಿಳಿಸಲಾಗಿತ್ತು. ಆದರೆ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಗುತ್ತಿಗೆದಾರರು ಕಾಮಗಾರಿ ಕೈಗೊಳ್ಳಲು ಮುಂದಾಗಿದ್ದಾಗ ಕೆಐಎಡಿಬಿ ಅಧಿಕಾರಿಗಳು ತಡೆದಿದ್ದಾರೆ. ಕಾವೇರಿ ಬಡಾವಣೆಗೆ ಕುಡಿಯುವ ನೀರು ಸಂಪರ್ಕ ವ್ಯವಸ್ಥೆ ಕಲ್ಪಿಸುವ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಬೇಕಿದ್ದು, ಇದಕ್ಕೆ ಅನುವು ಮಾಡಿಕೊಡುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದ್ದರು.

ಈ ಹಿನ್ನೆಲೆಯಲ್ಲಿ ಪರಿಶೀಲನೆ ನಡೆಸಿದ ಜಿಲ್ಲಾಧಿಕಾರಿಗಳು, ಸದರಿ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸದಿದ್ದಲ್ಲಿ ಮುಂದಿನ ದಿನಗಳಲ್ಲಿ ಕೂರ್ಗಳ್ಳಿ ಪ್ರದೇಶದ ಕಾವೇರಿ ಬಡಾವಣೆಗೆ ಕುಡಿಯುವ ನೀರು ಪೂರೈಕೆಗೆ ಅಡಚಣೆ ಉಂಟಾಗುವ ಸಾಧ್ಯತೆ ಇರುವುದನ್ನು ಮನಗಂಡು, ಕುಡಿಯುವ ನೀರಿನ ಪರಿಸ್ಥಿತಿ ಸುಧಾರಿಸುವವರೆಗೆ ಕೆಐಎಡಿಬಿ ಜಲಸಂಗ್ರಹಗಾರವನ್ನು ತಾತ್ಕಾಲಿಕವಾಗಿ ಬಳಸಿಕೊಳ್ಳಲು ಅನುಮತಿ ನೀಡಿದ್ದಾರೆ.

ಶ್ರೀ ಶಂಕರಾಚಾರ್ಯ, ಶ್ರೀ ಭಗೀರಥ, ಬುದ್ಧರ ಜಯಂತಿ ಅರ್ಥಪೂರ್ಣ ಆಚರಣೆ

ಎಡಿಸಿ ನೇತೃತ್ವದ ಪೂರ್ವಭಾವಿ ಸಭೆಯಲ್ಲಿ ನಿರ್ಧಾರ



ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ವಿವಿಧ ಸಮುದಾಯ ಸಂಘ–ಸಂಸ್ಥೆಗಳ ಮುಖಂಡರೊಂದಿಗೆ ಜಯಂತಿಗಳ ಪೂರ್ವಭಾವಿ ಸಭೆ ನಡೆಸಿದರು.

ಮೈಸೂರು, ಏ.7(ಎಂಕೆ)– ಮೈಸೂರು ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಪಾಲಿಕೆ ವತಿಯಿಂದ ಏ.21ರಂದು ಶ್ರೀ ಶಂಕರಾಚಾರ್ಯ, ಏ.23 ರಂದು ಶ್ರೀ ಭಗೀರಥ ಹಾಗೂ ಮೇ 1 ರಂದು ಭಗವಾನ್ ಬುದ್ಧರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ತಿಳಿಸಿದರು.

ಮೈಸೂರಿನ ಸಿದ್ದಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ವಿವಿಧ ಸಮುದಾಯ ಸಂಘ–ಸಂಸ್ಥೆಗಳ ಮುಖಂಡರೊಂದಿಗೆ ಜಯಂತಿ ಪೂರ್ವಭಾವಿ ಸಭೆ ನಡೆಸಿದ ಅವರು, ಮಹನೀಯರ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಿಸುವ ಮೂಲಕ ಅವರ ಸಂದೇಶಗಳನ್ನು ಸಮಾಜಕ್ಕೆ ತಿಳಿಸಲಾಗುವುದು ಎಂದರು.

ಭಾರತದ ಸಾಂಸ್ಕೃತಿಕ ಇತಿಹಾಸದಲ್ಲಿ ಧ್ರುವ ನಕ್ಷತ್ರದಂತೆ ಪ್ರಕಾಶಮಾನರಾಗಿರುವ ಮಹಾಪುರುಷರಲ್ಲಿ ಶಂಕರಾಚಾರ್ಯರು ಪ್ರಮುಖರಾಗಿದ್ದು, ಅವರು ನೀಡಿದ ಕೊಡುಗೆಗಳಿಂದಾಗಿ ದೇಶವಿಂದು ಆಧ್ಯಾತ್ಮಿಕತೆ ಹಾಗೂ ಯೋಗದಲ್ಲಿ ವಿಶ್ವಗುರು ಎಂದು ಎನಿಸಿಕೊಂಡಿದೆ. ಅವರ ಕೊಡುಗೆಗಳನ್ನು ಜನಮಾನಸಗೊಳಿಸುವ ನಿಟ್ಟಿನಲ್ಲಿ ಏ.21 ರಂದು ಬೆಳಗ್ಗೆ 11.30ಕ್ಕೆ ಕಲಾಮಂದಿರದ ಕಿರುರಂಗಮಂದಿರದಲ್ಲಿ ಶ್ರೀ ಶಂಕರಾಚಾರ್ಯ ಜಯಂತಿ ಆಚರಿಸಲಾಗುವುದು ಎಂದು ತಿಳಿಸಿದರು.

ಹಾಗೆಯೇ ಹಿಂದೂ ಪುರಾಣಗಳಲ್ಲಿ ಉಲ್ಲೇಖವಾದಂತೆ ಗಂಗೆಯನ್ನು ತಪಸ್ಸಿನ ಮೂಲಕ ಧರೆಗಿಳಿಸಿದ ಭಗೀರಥರ ಜೀವನ ಮತ್ತು ಸಂದೇಶಗಳನ್ನು ತಿಳಿಸುವ ನಿಟ್ಟಿನಲ್ಲಿ ಏ.23 ಮಧ್ಯಾಹ್ನ 12.30ಕ್ಕೆ ಕಲಾಮಂದಿರದಲ್ಲಿ ಶ್ರೀ ಭಗೀರಥ ಜಯಂತಿಯನ್ನು ಆಚರಣೆ ಮಾಡಲಾಗುವುದು ಎಂದರು.

ಭಗವಾನ್ ಬುದ್ಧ ಜಯಂತಿ: ಭಗವಾನ್ ಬುದ್ಧ ಜಯಂತಿಯನ್ನು ಮೇ 1 ರಂದು ಬೆಳಗ್ಗೆ 11.30ಕ್ಕೆ ಕಲಾಮಂದಿರದಲ್ಲಿ ಆಚರಿಸಲಿದ್ದು, ವೇದಿಕೆ ಕಾರ್ಯಕ್ರಮಕ್ಕೂ ಮೊದಲು ವೇದಿಕೆ ಮೇಲೆ ಗೀತಾ ಗಾಯನ ಏರ್ಪಡಿಸಲಾಗುವುದು. ಮಹನೀಯರ ಜಯಂತಿಗಳಿಗೆ ಎಲ್ಲಾ ಸಂಘ–ಸಂಸ್ಥೆಗಳು ಸಹಕರಿಸಬೇಕು. ಒಂದು ಸಮುದಾಯಕ್ಕೆ ಸಿಮೀತಗೊಳಿಸದೇ ಎಲ್ಲಾ ಸಮುದಾಯಗಳು ಭಾಗವಹಿಸಬೇಕು ಎಂದು ಕೋರಿದರು.

ಜಯಂತಿಗಳು ನಡೆಯುವ ಸ್ಥಳದ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆ, ತಳಿರು–ತೋರಣ ಹಾಗೂ ಶಾಮಿಯಾನ ವ್ಯವಸ್ಥೆಯನ್ನು ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಮಾಡಬೇಕು. ಜಯಂತಿಗಳ ಆಚರಣೆ ಮಾಡುವಾಗ ನಗರದಲ್ಲಿರುವ ಎಲ್ಲಾ ಮಹನೀಯರ ಪ್ರತಿಮೆಗಳನ್ನು ಸ್ವಚ್ಛ ಮಾಡಬೇಕು ಎಂದು ನಗರಪಾಲಿಕೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಡಾ.ಕಲ್ಯಾಣಸಿರಿ ಭಂತೇಜಿ, ಸುಬಾನ ಶ್ರೀ ಭಂತೇಜಿ, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಮೇಯರ್ ಪುರುಷೋತ್ತಮ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸುದರ್ಶನ್, ಮುಖಂಡರಾದ ಅಹಿಂದ ಜವರಪ್ಪ, ಸೋಮಯ್ಯ ಮಲೆಯೂರು, ಸಿದ್ದರಾಜು ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ವಿವಿಧ ಇಲಾಖೆ ಅಧಿಕಾರಿ–ಸಿಬ್ಬಂದಿ ಉಪಸ್ಥಿತರಿದ್ದರು.

ಚುಂಚೇಗೌಡ ನಿಧನ



ಮೈಸೂರು, ಏ.7– ತಾಲೂಕಿನ ಹಂಚ್ಯಾ ಗ್ರಾಮದ ನಿವಾಸಿ ಚುಂಚೇಗೌಡ(49) ಅವರು ಅನಾರೋಗ್ಯದಿಂದ ಮಂಗಳವಾರ ನಿಧನರಾದರು.

ಇವರು ತಂದೆ ತಿಮ್ಮೇಗೌಡ, ಪುತ್ರಿ ಗಾನವಿ, ಇಬ್ಬರು ಸಹೋದರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಬುಧವಾರ ಮಧ್ಯಾಹ್ನ 12ಕ್ಕೆ ಮೃತರ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ತಿಮ್ಮೇಗೌಡ



ಮೈಸೂರು, ಏ.7– ತಾಲೂಕಿನ ಹಂಚ್ಯಾ ಗ್ರಾಮದ ನಿವಾಸಿ ತಿಮ್ಮೇಗೌಡ (65) ಅವರು ಮಂಗಳವಾರ ಅನಾರೋಗ್ಯದಿಂದ ನಿಧನರಾದರು.

ಇವರು ಪತ್ನಿ ಚಿಕ್ಕತಾಯಮ್ಮ, ಮಕ್ಕಳಾದ ಪ್ರಸನ್ನ, ಪ್ರತಾಪ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಬುಧವಾರ ಮಧ್ಯಾಹ್ನ 12ಕ್ಕೆ ಗ್ರಾಮದ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಐ.ಕೆ.ಪುಟ್ಟಸ್ವಾಮಿ ಮನೆ, ಕಚೇರಿ ಮೇಲೆ ಲೋಕಾಯುಕ್ತ ದಾಳಿ



ವಶಪಡಿಸಿಕೊಂಡಿರುವ ನಗದು, ಚಿನ್ನಾಭರಣ, ಬೆಳ್ಳಿ ಪದಾರ್ಥಗಳು

ಕುಶಾಲನಗರ, ಏ.7– ಹಾರಂಗಿ ಅಣೆಕಟ್ಟೆಯ ಪ್ರಭಾರ ಕಾರ್ಯಪಾಲಕ ಅಭಿಯಂತರ ಐ.ಕೆ. ಪುಟ್ಟಸ್ವಾಮಿ ಅವರ ಕಛೇರಿ, ನಿವಾಸದ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ಅಪಾರ ಪ್ರಮಾಣದಲ್ಲಿ ನಗದು, ಚಿನ್ನಾಭರಣಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ.

ಆದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿರುವ ಬಗ್ಗೆ ಲೋಕಾಯುಕ್ತಕ್ಕೆ ದೂರು ಬಂದ ಹಿನ್ನೆಲೆಯಲ್ಲಿ ಅಧಿಕಾರಿಗಳು ಮಂಗಳವಾರ ಬೆಳಗ್ಗೆ ಏಕಕಾಲದಲ್ಲಿ ಹಾಸನದ ವಿದ್ಯಾ ನಗರದಲ್ಲಿರುವ ಸ್ವಂತ ಮನೆ, ಮೈಸೂರು ತಿಲಕ ನಗರ ಬಡಾವಣೆಯಲ್ಲಿರುವ ಬಾಡಿಗೆ ಮನೆ ಸೇರಿದಂತೆ ಹಾರಂಗಿ ಅಣೆಕಟ್ಟೆ ಕಛೇರಿ, ಕುಶಾಲನಗರದ ವಿಭಾಗೀಯ ಕಛೇರಿಯಲ್ಲಿ ಶೋಧ ಕಾರ್ಯ ನಡೆಯಿತು. ಈಗ್ಗೆ ಮೂರು ವರ್ಷಗಳಿಂದ ಪುಟ್ಟಸ್ವಾಮಿ ಹಾರಂಗಿ ಅಣೆಕಟ್ಟೆಯ ಪ್ರಭಾರ ಕಾರ್ಯಪಾಲಕ ಅಭಿಯಂತರರಾಗಿ ಕಾರ್ಯನಿರ್ವಹಿಸುತ್ತಿದ್ದರು. ಬೆಳಗ್ಗೆ ಕಚೇರಿಗೆ ಆಗಮಿಸಿದ ಅಧಿಕಾರಿಗಳು ಮಧ್ಯಾಹ್ನದವರೆಗೂ ಲೋಕಾಯುಕ್ತ ಅಧಿಕಾರಿಗಳು ಶೋಧನಾ ಕಾರ್ಯದಲ್ಲಿ ತೊಡಗಿದ್ದು, ಕೆಲ ಅಮೂಲ್ಯ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮೈಸೂರಿನ ಮನೆಯಲ್ಲಿ ಅಪಾರ ಪ್ರಮಾಣದಲ್ಲಿ ನಗದು ಚಿನ್ನಾಭರಣ, ಬೆಳ್ಳಿ ಪದಾರ್ಥಗಳು ಮತ್ತಿತರೆ ಅಮೂಲ್ಯ ವಸ್ತುಗಳು ದೊರೆತಿವೆ.

ಎಸ್ಪಿ ಉದೇಶ್ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ದಿನಕರ ಶೆಟ್ಟಿ ಸೇರಿದಂತೆ ನಿರೀಕ್ಷಕರಾದ ಲೋಹಿತ್ ಕುಮಾರ್ ಮೀನಾ ನಾಯಕ್‌ರ ನೇತೃತ್ವದಲ್ಲಿ ಲೋಕಾಯುಕ್ತ ಅಧಿಕಾರಿ ಮತ್ತು ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

IN THE COURT OF THE HON'BLE CIVIL JUDGE AT YELANDUR

O.S. No.: 152/2021

Plaintiff: Sri. M. Chandrappa, S/o Late Mahadevappa, Aged about 47 years, Residing at Lingayath Street, 1st Block, Ambale Village, Kasaba Hobli, Yelandur Taluk, Chamarajanagara District.

V/s

Defendants: Sri. Prathap and others.

Proposed Defendant No. 11: Sri. K. Ramachandra Adhaar No. 8361 5847 4743. PAN No. DCVPK8930H, S/o Krishnappa, Aged about 49 years, Residing at D.No. 382, 2nd Cross, Vidyanagara, Nazarbad Mohalla, Mysuru City.

DRAFT PAPER PUBLICATION TO BE PUBLISHED IN "MYSURU MITRA" DAILY KANNADA NEWSPAPER

It is hereby notified that the plaintiff has filed the above suit against the defendants for Partition and separate possession regarding the schedule properties.

Even after sufficient steps taken against the proposed defendant No. 11, the summons was not able to serve on him. Hence the proposed defendant No. 11 is called upon to appear before the above Hon'ble Court on 03-6-26 at 11.00 A.M either in person or through your counsel and participate in the proceedings with the permission of this Hon'ble Court. Failing which the said suit will be heard and determined ex-parte.

By order of the Court

Sd/- C.M.O., Civil Judge and JMFC Court, Yelandur

Sd/- S. Nandish

Advocate for Plaintiff

Place: Yelandur

Date: 25-3-2026

ಹಸಿರು ನಮ್ಮ ಉಸಿರು

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ

ಕುದೇರು ಗ್ರಾಮ ಮತ್ತು ಅಂಚೆ, ಸಂತೇಮರಹಳ್ಳಿ ಹೋಬಳಿ, ಚಾಮರಾಜನಗರ - 571 316

ದೂರವಾಣಿ: 08226-234848, E-mail: purchamul@gmail.com

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ)

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ವಿವಿಧ ಸರಕು/ಸೇವೆಗಳನ್ನು ಖರೀದಿಸುವ/ಪಡೆಯುವ ಸಂಬಂಧ ನಿಗದಿ ಪಡಿಸಲಾದ ಷರತ್ತುಗಳನ್ನೊಳಗೊಂಡ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖೇನ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ **https://kppp.karnataka.gov.in** ಈ ವೆಬ್‌ಸೈಟ್‌ನಲ್ಲಿ ಪಡೆದು ಕೆಳಗಿನ ವಿವರದಂತೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರ.ಸಂ	ಸರಕು/ಸೇವೆಗಳ ವಿವರ	ಟೆಂಡರ್ ಸಂಖ್ಯೆ	ಟೆಂಡರ್ ಸಲ್ಲಿಸುವ ದಿನಾಂಕ ಮತ್ತು ಕೊನೆಯ ದಿನಾಂಕ
01	Supply of Non Lit Sign Boards, Glow Sign Boards, LED Boards, HD Vinyl Print, Sun Boards, Flex Banners and A Sign Boards on Biennial Rate Contract basis for Local Market within Chamarajanagar District.	KMF/2026-27/ IND2125	ದಿನಾಂಕ: 08.04.2026 ರಿಂದ 18.04.2026 ರವರೆಗೆ
02	Supply of Non Lit Sign Boards, Glow Sign Boards, LED Boards, HD Vinyl Print, Sun Boards, Flex Banners and A Sign Boards on Biennial Rate Contract basis for Outside Market Tamilnadu.	KMF/2026-27/ IND2138	
03	Providing Health Insurance Facility for CHAMUL Employees & Employees Dependents for a Period of One Year.	KMF/2026-27/ SE5120	
04	Supply and Installation of Network Accessories that are required for Stabilizing the LAN connection and New Data & Intercom Points at Main Dairy CHAMUL.	KMF/2026-27/ IND2126	
05	Biennial Maintenance Contract (BAMC) for CC Cameras, NVR, ETBS, POE, Intercom System and Technical support for Server, Firewall and Networking.	KMF/2026-27/ SE5063	
06	Biennial Maintenance Contract (BAMC) for Indent Application Service and Oracle Based Software & Indent Section Activities.	KMF/2026-27/ SE5064	

ಹೆಚ್ಚಿನ ಮಾಹಿತಿಗಾಗಿ ಕ್ರ.ಸಂ.01 ರಿಂದ ಕ್ರ.ಸಂ.02 ರವರೆಗೆ ವ್ಯವಸ್ಥಾಪಕರು (ಖರೀದಿ–ಮೊ.ಸಂ:8867915047) ರವರನ್ನು, ಕ್ರ.ಸಂ.03 ಕ್ಕೆ ವ್ಯವಸ್ಥಾಪಕರು (ಆಡಳಿತ–ಮೊ.ಸಂ: 9606098300) ರವರನ್ನು, ಮತ್ತು ಕ್ರ.ಸಂ.04 ರಿಂದ ಕ್ರ.ಸಂ.06 ರವರೆಗೆ ಸಹಾಯಕ ವ್ಯವಸ್ಥಾಪಕರು (ಎಂ.ಐ.ಎಸ್–ಮೊ.ಸಂ: 9663625545) ರವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ಮೈಸೂರು ಮಿತ್ರ 46 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ಸರ್ಕಾರ

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

ಜಂಟಿ ನಿರ್ದೇಶಕರವರ ಕಚೇರಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಸಿಟಿಐ ಕಟ್ಟಡ, ಸಯ್ಯಾಜಿರಾವ್ ರಸ್ತೆ–570001

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (TENDER NOTIFICATION THROUGH 'E' PROCUREMENT)

ಈ ಕಛೇರಿಯಲ್ಲಿ ಮಂಜೂರಾಗಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳು.

1. ಗಣತಿದಾರರು – 01 ಹುದ್ದೆ 2. ಬೆರಳಚ್ಚುಗಾರರು – 02 ಹುದ್ದೆ 3. ಗ್ರೂಪ್ ಡಿ ನೌಕರರು–02 ಹುದ್ದೆ

2026–27ನೇ ಸಾಲಿಗೆ ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿದೆ ಹಾಗೂ 2026–27 ನೇ ಸಾಲಿನ ಒಂದು ವರ್ಷದ ಅವಧಿಗೆ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಮೈಸೂರು ರವರ ಕಛೇರಿಗೆ ಮಾಸಿಕ ಬಾಡಿಗೆ ಆಧಾರದ ಮೇಲೆ 2024 ಹಾಗೂ ನಂತರದ ವರ್ಷದಲ್ಲಿ ನೋಂದಾಯಿತವಾಗಿರುವ **Maruti Swift Dezire Tours** ಒಂದು ವಾಹನವನ್ನು ಪಡೆಯಲು ಅರ್ಹ ನೊಂದಾಯಿತ ಟ್ರಾವೆಲ್ ಏಜೆನ್ಸಿ/ ಸಂಸ್ಥೆ ಮೂಲಕ ವಾಹನ ಪಡೆಯಲು ದ್ವಿ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಟೆಂಡರ್ ಆಹ್ವಾನಿಸಲಾಗಿದೆ. ವಿವರಗಳು ಈ ಕೆಳಗಿನಂತಿವೆ.

1. https://kppp.karnataka.gov.in ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ : **06.04.2026** ರಿಂದ

2. ಅರ್ಜಿ ಸಲ್ಲಿಸಲು ಕಡೆಯ ದಿನಾಂಕ : **21.04.2026 ಸಂಜೆ 4.00 ಘಂಟೆ** 3. ತಾಂತ್ರಿಕ್ ಬಿಡ್ **(Technical Bid)** ತೆರೆಯುವ/ಪರಿಶೀಲಿಸುವ ಸ್ಥಳ ಮತ್ತು ದಿನಾಂಕ : **23.04.2026 ಬೆಳಗ್ಗೆ 11.00 ಘಂಟೆಗೆ ಜಂಟಿ ನಿರ್ದೇಶಕರ ಕೊಠಡಿ, ಜಿಲ್ಲಾ ಕೈಗಾರಿಕಾ ಕೇಂದ್ರ, ಮೈಸೂರು**. 4. ಆರ್ಥಿಕ ಬಿಡ್ **(Financial Bid)** ಪರಿಶೀಲನೆ ದಿನಾಂಕ ಮತ್ತು ಸ್ಥಳ: **28.04.2026 ಬೆಳಗ್ಗೆ 11.00 ಘಂಟೆಗೆ ಜಂಟಿ ನಿರ್ದೇಶಕರ ಕೊಠಡಿ**. ಜಿಲ್ಲಾ ಕೈಗಾರಿಕಾ ಕೇಂದ್ರ, ಮೈಸೂರು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕೈಗಾರಿಕಾ ಕೇಂದ್ರ, ಮೈಸೂರು ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಹಾಗೂ ದೂರವಾಣಿ ಸಂಖ್ಯೆ : 0821–2449810 ರಲ್ಲಿ ವಿಚಾರಿಸಬಹುದಾಗಿದೆ.

ಸಹಿ/–ಜಿಲ್ಲಾ ಕೈಗಾರಿಕಾ ಕೇಂದ್ರ, ಮೈಸೂರು

DIPR/DDMYS/024/KSMCA/015/2025-26

ಮೈಸೂರು ಮಿತ್ರ

ವಾರ್ಷಿಕೋತ್ಸವ ವಿಶೇಷ ಸಂಚಿಕೆ

ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ "ಮೈಸೂರು ಮಿತ್ರ", ಏಪ್ರಿಲ್ 16, 2026ಕ್ಕೆ 46 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 47ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳನ್ನು ಏಪ್ರಿಲ್ 10, 2026 ರೊಳಗೆ ನಮಗೆ ತಲುಪುವಂತೆ ಕಳುಹಿಸಬೇಕಾಗಿ ಕಳಕಳಿಯ ಮನವಿ.

ಪ್ರಧಾನ ಕಛೇರಿ

0821-2496522, 2496523, 0821-2496520 (5 ಲೈನುಗಳು)

ಮರಿಯ ಫರ್ನಾಂಡಿಸ್, ಜಾಹೀರಾತು ವ್ಯವಸ್ಥಾಪಕರು: 9448525060 / 8073030835

ಜಾಯ್ ಅಂಥೋಣಿ ಡೂಲಿಪ್: 8951668960, ಪ್ರೇಮ: 9880549879

ಕೆ.ಆರ್. ಸರ್ಕಲ್ ಕಛೇರಿ: 0821-2431774

ದೇವರಾಜ ಅರಸ್ ರಸ್ತೆ ಕಛೇರಿ: 0821-2428695

ಕೊಡಗು ಪ್ರಸಾದ್ ಪೂಜಾ ಆರ್ಕೆಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ 9731469871	**ಮಂಡ್ಯ** ಕೆ. ಮೋಹನ್‌ರಾಜ್ 8762960325	**ಶ್ರೀರಂಗಪಟ್ಟಣ** ವಿನಯ್ ಕಾರೇಕುರ ಶ್ರೀರಂಗಪಟ್ಟಣ 9686893234
ಹುಣಸೂರು ಕೆ. ಕೃಷ್ಣ (ಕೆ.ಕೆ.) EWS 204, KHB ಕಾಲೋನಿ, ಹುಣಸೂರು. 9448720626	**ಚಾಮರಾಜನಗರ** ಸಿದ್ದಲಿಂಗಸ್ವಾಮಿ ಸಿ.ಹೆಚ್.ಆರ್. ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ 9242265667	**ಟಿ. ನರಸೀಪುರ** ಕುಮಾರ್ ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ. 9986719590
ಗುಂಡ್ಲುಪೇಟೆ ಸೋಮಶೇಖರ್ ದ.ರಾ. ಬೇಂದ್ರೆ ನಗರ, ಅತ್ತಿನಿ ಲೇಔಟ್, ಗುಂಡ್ಲುಪೇಟೆ. 9845995426	**ಕೆ.ಆರ್. ನಗರ** ಮಂಜುನಾಥ ವಾರ್ಡ್ ನಂ.17, ಕನಕನಗರ Extn. ಮುಳ್ಳೂರು ರಸ್ತೆ, ಕೆ.ಆರ್.ಟೌನ್ 9483084345	**ಮಳವಳ್ಳಿ** ಸರಸ್ವತಿ. ಬಿ ನಂ.47, 1ನೇ ಕ್ರಾಸ್, ಎನ್.ಇ.ಎಸ್ ಮಳವಳ್ಳಿ ಟೌನ್–571430 9632407806
ಹಾಸನ ಆರ್.ಎನ್.ಸೋಮೇಶ್‌ಗೌಡ ಹೋಲಿ ಚಿಲ್ಡ್ರನ್ ಶಾಲೆ ಹತ್ತಿರ, ಜಯನಗರ, 1ನೇ ಹಂತ, 2ನೇ ಕ್ರಾಸ್, ಹಾಸನ. 7019311936	**ಕುಶಾಲನಗರ** ರಘು ಮೈಸೂರು ಮಿತ್ರ ರಿಪೋರ್ಟರ್ ಮನು ಪ್ರೆಸ್, ಐ.ಬಿ.ರಸ್ತೆ, ಕುಶಾಲನಗರ 9845698401	**ಜಯಪುರ** ಬಿಳಿಗಿರಿ ಜಯಪುರ 9945479288
ಪಿರಿಯಾಪಟ್ಟಣ ವಿರೇಶ್ ಪಿರಿಯಾಪಟ್ಟಣ 8660057128	**ವಿರಾಜಪೇಟೆ** ಮಂಜುನಾಥ ವಿರಾಜಪೇಟೆ 9900949353	**ಯಳಂದೂರು** ಬಿ.ನಾಗರಾಜು ಮೈತ್ರಿ ಮೆಡಿಕಲ್ಸ್, ಬಳೆಪೇಟೆ, ಯಳಂದೂರು 9844349191
ಕೆ.ಆರ್.ಪೇಟೆ (ಶ್ರೀನಿವಾಸ) ಅಗ್ರಹಾರ ಬಾಚಹಳ್ಳಿ, ಕೆ.ಆರ್.ಪೇಟೆ 9449326847, 7022757438	**ಹೆಚ್.ಡಿ.ಕೋಟೆ** ಮಂಜುನಾಥ ಎಸ್. ಹೆಚ್.ಡಿ.ಕೋಟೆ 9483574452	**ಕೆ.ಎಂ.ದೊಡ್ಡಿ** ಸತೀಶ್ ಎ.ಎಲ್ ಕೆ.ಎಂ.ದೊಡ್ಡಿ 9242120338
ಹುಣಸೂರು ರಘು ರಘು ಫೋಟೋ ವರ್ಲ್ಡ್ ಹುಣಸೂರು 9845590889	**ನಂಜನಗೂಡು** ರಂಗಸ್ವಾಮಿ ನಂ.4565, ಕಬಿನಿ ಕಾಲೋನಿ ಹಿಂಭಾಗ, ನೀಲಕಂಠ ನಗರ, ನಂಜನಗೂಡು ಟೌನ್–571301 9901602226	**ಕೊಳ್ಳೇಗಾಲ** ನಾಗೇಂದ್ರ ಸ್ವಾಮಿ ನಂ.7ಎ, 684, 14 ನೇ ಕ್ರಾಸ್, ಬಸವೇಶ್ವರ ನಗರ, ಕೊಳ್ಳೇಗಾಲ 9448576247, 7899849868